
# ಪ್ರಕಾಶ ಕಡಪಟ್ಟಿ

ಪ್ರೇಮಾ ಬದಾಮಿ



ಕರ್ನಾಟಕ ನಾಟಕ ಅಕಾಡೆಮಿ

ರಂಗಸಂಪನ್ನರು

# ಪ್ರಕಾಶ ಕಡಪಟ್ಟಿ

## ಪ್ರೇಮಾ ಬದಾಮಿ


**ಕರ್ನಾಟಕ ನಾಟಕ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ದೂರವಾಣಿ: ೦೮೦- ೨೨೨೩ ೭೪೮೪

**PRAKASHA KADAPATTI :** A Monograph in Kannada by Smt. Prema Badami

**Published by :** Registrar, Karnataka Nataka Academy, Bangalore -2
Ph. 080-2223 7484

ಹಕ್ಕುಗಳು : ಆಯಾ ಲೇಖಕರವು

**ಮೊದಲ ಮುದ್ರಣ : ೨೦೧೬**

ಪ್ರತಿಗಳು : ೧,೦೦೦
ಪುಟಗಳು : ೮೦
ಬೆಲೆ : ರೂ.೬೦/-

ಪ್ರಕಾಶಕರು:
ಸಿದ್ದರಾಜು, ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ
ಬೆಂಗಳೂರು – ೫೬೦೦೦೨

ಮುಖಪುಟ ವಿನ್ಯಾಸ : ಕೃಷ್ಣ ರಾಯಚೂರು

ಮುದ್ರಣ: ಚಾರುಮತಿ ಪ್ರಕಾಶನ
ಚಾಮರಾಜಪೇಟೆ, ಬೆಂಗಳೂರು–18

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ 2015 ಸೆ.24 ರಿಂದ 30 ರ ವರೆಗೆ ನಡೆದ ರಾಜ್ಯ ವೃತ್ತಿರಂಗ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್. ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ 21 ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹಾತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟನಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟನೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟನಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

–ಎಲ್.ಬಿ. ಶೇಖ (ಮಾಸ್ತರ)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

# ರಂಗಸಂಪನ್ನರು

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟನೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟನಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ. ಶೇಖ ಮಾಸ್ತರ ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ. ತಿಪ್ಪೇಸ್ವಾಮಿ, ವಿ.ಎನ್. ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ದರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ. ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ, ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

'ರಂಗಸಂಪನ್ನರು' ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ

ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟನಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟನೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

## ನಟ, ನಾಟಕಕಾರ ಪ್ರಕಾಶ ಕಡಪಟ್ಟಿ

ಪ್ರಕಾಶ ಕಡಪಟ್ಟಿ ವೃತ್ತಿರಂಗಭೂಮಿಯ ಹೆಸರಾಂತ ನಟ ಹಾಗೂ ನಾಟಕಕಾರ. ಪ್ರಖ್ಯಾತ ಹಿಂದಿ ಚಿತ್ರಗೀತೆಗಳ ಚಾಲುಗಳನ್ನು ರಂಗಗೀತೆಗಳಿಗೆ ಅಳವಡಿಸಿ ಅವನ್ನು ಜನಪ್ರಿಯತೆಯ ತುತ್ತತುದಿ ತಲುಪಿಸಿದರು. ಅವರದೇ ಆದ ಅಭಿನಯ ಶೈಲಿಯನ್ನು ರೂಢಿಸಿಕೊಂಡಿರುವ ಒಬ್ಬ ಅಪರೂಪದ ನಟ ಅವರು.

ಕಡಪಟ್ಟಿ ಅವರ ಕುರಿತ ಈ ಗ್ರಂಥ ರಚಿಸಿರುವ ಪ್ರೇಮಾ ಬದಾಮಿ ಅವರು ವೃತ್ತಿ ಹಾಗೂ ಗ್ರಾಮೀಣ ರಂಗಭೂಮಿಯ ಹೆಸರಾಂತ ನಟಿ. ನಾಟಕಕಾರರೂ, ಲೇಖಕರೂ ಹೌದು. ಹಾಗಾಗಿ ಬರವಣಿಗೆ ಅವರಿಗೆ ಸಲೀಸು. ಪ್ರಕಾಶ ಕಡಪಟ್ಟಿಯವರ ವಿಶೇಷತೆಗಳನ್ನು ಗುರುತಿಸಿ ಆಪ್ತವಾದ ಚಿತ್ರಣವನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

**–ಗುಡಿಹಳ್ಳಿ ನಾಗರಾಜ**

**ಪ್ರಕಟನಾ ಸಮಿತಿ:** ಉಮೇಶ ಸಾಲಿಯಾನ
ಶಿವಶಂಕರ ಹಾಲ್ಕುರಿಕೆ
ಜಗುಚಂದ್ರ ಕೆ.

## ಎಲ್.ಬಿ. ಶೇಖ (ಮಾಸ್ತರ)

ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

**ಸದಸ್ಯರು:**

| | |
|---|---|
| ರಾಜಪ್ಪ ಕಿರಗಸೂರು | ವಿ.ಎನ್. ಅಕ್ಕಿ |
| ಎನ್.ಕೆ. ರಾಮಕೃಷ್ಣ | ಕಲ್ಪನಾ ನಾಗನಾಥ್ |
| ಎಂ.ಎಸ್. ಗುಣಶೀಲನ್ | ಶ್ರೀಪಾದ ಭಟ್ |
| ಎ.ವರಲಕ್ಷ್ಮಿ | ಪಿ. ತಿಪ್ಪೇಸ್ವಾಮಿ |
| ಗುಡಿಹಳ್ಳಿ ನಾಗರಾಜ | ಎಲ್.ಎಚ್. ರಂಗನಾಥಪ್ಪ |
| ಬಿ.ಎಂ. ರಾಮಚಂದ್ರ | ಹಾಲ್ಕುರಿಕೆ ಶಿವಶಂಕರ್ |
| ಉಮೇಶ್ ಸಾಲಿಯಾನ್ | ಕೆ. ಜಗುಚಂದ್ರ |
| ಮುದ್ದಣ್ಣ ರಟ್ಟೆಹಳ್ಳಿ | ಅನ್ನಪೂರ್ಣ ಸಾಗರ |
| ಎಚ್. ಷಡಾಕ್ಷರಪ್ಪ ಹೊಸಮನಿ | ಎಸ್.ಕೆ. ಕೊನೆಸಾಗರ |

ರಿಜಿಸ್ಟ್ರಾರ್: ಸಿದ್ಧರಾಜು
ಪ್ರಥಮದರ್ಜೆ ಸಹಾಯಕರು: ಕೆ.ರೇವಣ್ಣ
ಕಚೇರಿ ಸಿಬ್ಬಂದಿ: ಸೌಭಾಗ್ಯಲಕ್ಷ್ಮೀ, ಎಂ. ಭೋಜಣ್ಣ, ಸುಶೀಲಮ್ಮ

# ಲೇಖಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯಿಂದ "ರಂಗಸಂಪನ್ನರು ಮಾಲಿಕೆ"ಯನ್ನು ಹೊರತರುತ್ತಿರುವ ಅಭೂತಪೂರ್ವ ಕಾರ್ಯದಲ್ಲಿ ನನಗೆ ಸೇವೆಯ ಅವಕಾಶ ದೊರೆತಿದ್ದು ನನ್ನ ಸುದೈವ. ಅದರಲ್ಲೂ ನಮ್ಮ ಭಾಗದವರೇ ಆದ ಹೆಸರಾಂತ ರಂಗ ನಾಯಕ ಕೆ. ಪ್ರಕಾಶರ ಜೀವನ ಚಿತ್ರವನ್ನು ಕುರಿತು ಪುಸ್ತಕ ಬರೆಯಲು ಅವಕಾಶ ದೊರೆತಿದ್ದು ಹೆಮ್ಮೆಯ ಸಂಗತಿ. ೧೯೮೫ರಲ್ಲಿ ನಾನು ಪ್ರಕಾಶರನ್ನು ಪ್ರಪ್ರಥಮವಾಗಿ ನೋಡಿದ್ದೆ. ನಂತರ ನನ್ನ ರಂಗಸೇವೆಯ ಅವಧಿಯಲ್ಲಿ ಅವರನ್ನು ಭೇಟಿ ಆಗುವ ಸಂದರ್ಭ ಬರಲೇ ಇಲ್ಲ. ಅವರ ಪತ್ನಿ ಸುನಂದಾ ಹಾಗು ಮಗಳು ವೀಣಾ ಜೊತೆ ಹಲವು ಬಾರಿ ಗ್ರಾಮೀಣ ಭಾಗದಲ್ಲಿ ಅಭಿನಯಿಸಿದ್ದೇನೆ. ಕೃತಿ ರಚಿಸುವ ಕುರಿತು ಪ್ರಕಾಶರನ್ನು ದೂರವಾಣಿಯ ಮುಖಾಂತರ ಸಂಪರ್ಕಿಸಿ ಹುಬ್ಬಳ್ಳಿಯಲ್ಲಿ ಭೇಟಿ ಆದೆ. ಅವರು ಸ್ವತಃ ಕವಿಗಳಾಗಿದ್ದರಿಂದ ನನ್ನ ಈ ಕೆಲಸ ಸುಲಭವಾಗಬಹುದು ಎಂದುಕೊಂಡಿದ್ದೆ. ಆದರೆ ಪ್ರಕಾಶರ ರಂಗಬದುಕಿನ ಫೋಟೋಗಳನ್ನು ಹೊರತುಪಡಿಸಿ ಬೇರೆ ಯಾವ ದಾಖಲಾತಿಗಳು ದೊರೆಯಲಾರದ್ದು, ಅವರ ಅನುಭವಗಳನ್ನು ಕುರಿತು ಕೇಳುವ ನನ್ನ ಪ್ರತಿಯೊಂದು ಪ್ರಶ್ನೆಗೆ ಪ್ರಕಾಶರ ಮೌನವೇ ಉತ್ತರವಾಗಿದ್ದು, ತದನಂತರ ಪ್ರಕಾಶರ ಇರುವಿಕೆಯ ಸ್ಥಳವೇ ನನಗೆ ತಿಳಿಯದಂತಾಗಿದ್ದು ಪ್ರಕಾಶರ ಕುರಿತು ಕೃತಿ ರಚಿಸುವದೆಂದರೆ ಒಂದು ರೀತಿ ಕಬ್ಬಿಣದ ಕಡಲೆ ಆದಂತಾಯಿತು.

ಅಕಾಡೆಮಿಯ ಸದಸ್ಯರಾದ ಗುಡಿಹಳ್ಳಿಯವರನ್ನು ಸಂಪರ್ಕಿಸಿ "ನನಗೇನು ಮಾಹಿತಿ ಸಿಗುತ್ತಿಲ್ಲ, ಬಿಟ್ಟುಬಿಡಲಾ" ಎಂದೆ. ಸಾಕಷ್ಟು ಕಲಾವಿದರ ಕೃತಿ ಬರೆದ ಅನುಭವವಿರುವ ಗುಡಿಹಳ್ಳಿಯವರು "ನೀವು ಸ್ವತಃ ಕಲಾವಿದರಿರುವುದರಿಂದ ನಿಮ್ಮಿಂದ ಬರೆಯಲು ಸಾಧ್ಯವಾಗುತ್ತದೆ ಎಷ್ಟು ಪುಟಗಳಾದರೂ ಸರಿ ಬರೆಯಿರಿ" ಅಂತ ಉತ್ತೇಜನವಿತ್ತ ಅವರ ಮಾತುಗಳು ನನ್ನಲ್ಲಿ ಆತ್ಮವಿಶ್ವಾಸ ಮೂಡಿಸಿದವು. ಹೇಗಾದರೂ ಮಾಡಿ ಬರೆಯಲೇ ಬೇಕು ಅಂತ ಪ್ರಕಾಶರನ್ನು ಹುಡುಕಿಕೊಂಡು ಅವರಿದ್ದ ಇನಾಂಕೊಪ್ಪಕ್ಕೆ ಹೋದೆ. ಪ್ರಕಾಶರ ಮತ್ತು ಮಗಳು ವೀಣಾಳ ನಯ ವಿನಯದ ಸ್ವಾಗತ ಅತ್ಯಂತ ಖುಶಿ ತಂದಿತ್ತು. ಅತ್ಯಂತ ಸಮಾಧಾನದಿಂದ

ಪ್ರಕಾಶರು ತಾವು ನಡೆದು ಬಂದ ದಾರಿಯ ಹೆಜ್ಜೆಯ ಗುರುತುಗಳನ್ನು ಹೇಳಲು ಪ್ರಯತ್ನಿಸಿದರೂ ಬಹುತೇಕ ಹೆಜ್ಜೆಯ ಗುರುತುಗಳು ಅವರ ನೆನಪಿನಿಂದ ಅಳಸಿಹೋಗಿದ್ದವು. "ಕಂಪನಿ ಉಳಿಸುವ ಪ್ರಯತ್ನಕ್ಕಾಗಿ ಮಗಳು ವೀಣಾಳಿಗೆ ಜೋಳಿಗೆ ಹಾಕಿ ಬೇಡಿ ತಂದ ಅಕ್ಕಿಯಲ್ಲಿ ಅನ್ನ ಮಾಡಿ ಬೋರ್ಡಿಂಗ ನಡೆಸಿದ್ದೆವು" ಅಂತ ಹೇಳುತ್ತಿದ್ದಂತೆ ಪ್ರಕಾಶರ ಕಂಗಳಿಂದ ನೀರು ಜಾರಿದಾಗ, ಛೇ ಏನಪ್ಪ ಅಂತ ಒಂದು ಕ್ಷಣ ನನ್ನ ಹೃದಯವೇ ಸ್ಥಭ್ಧವಾಯಿತು. ನನ್ನ ಎಲ್ಲಾ ಪ್ರಶ್ನೆಗಳಿಗೆ ಇದೊಂದೇ ಉತ್ತರ ಸಾಕೆನಿಸಿತು.

ಪ್ರಕಾಶವರನ್ನು ದೂರದಿಂದ ನೋಡುವದಕ್ಕೂ, ಹತ್ತಿರದಿಂದ ಅರಿಯುವದಕ್ಕೂ ತುಂಬಾ ವ್ಯತ್ಯಾಸವಿದೆ. ಪ್ರಕಾಶ ಅವರು ವೈಯಕ್ತಿಕ ಬದುಕಿನಲ್ಲಿ ವಿಫಲರಾಗಿದ್ದರೂ ರಂಗಭೂಮಿಯ ಮೆರಗನ್ನು ಹೆಚ್ಚಿಸುವಲ್ಲಿ ಸಫಲರಾಗಿದ್ದಾರೆ. ಅಂದು ಅವರ ಅಭಿನಯವನ್ನು ಕಂಡು ಆನಂದಿಸಿ ಅರಳಿದ ಮನುಸ್ಸುಗಳೀಗಲೂ ಮುದುಡಿಲ್ಲ. ಪ್ರಕಾಶರ ಹಾಡುಗಳು, ನಾಟಕಗಳು ಚಿರಸ್ಮರಣೀಯ. ಪ್ರಕಾಶರನ್ನು ಕಂಡ ಯಾರನ್ನೇ ಕೇಳಿದರೂ "ಅವರ ಕಲೆಗೆ ಶರಣು" ಎನ್ನುವ ಮಾತುಗಳೇ. ಆ ಮಾತುಗಳ ಆಧಾರದ ಮೇಲೆ ಕೃತಿ ರಚಿಸಿ ಪೂರ್ಣಗೊಳಿಸಿದ್ದೇನೆ. ಪ್ರಕಾಶರ ಕುರಿತು ಕೆಲವೊಂದು ಮಾಹಿತಿಗಳನ್ನು ನನಗೆ ಒದಗಿಸಿಕೊಟ್ಟ ಹುನ್ನೂರ ಗ್ರಾಮದ ಸಂಗಪ್ಪ ಸಂತಿ ಅವರಿಗೆ ವಂದನೆಗಳು.

ಶ್ರೀ ಪೂಜ್ಯ ಡಾ॥ ಈಶ್ವರ ಮಂಟೂರ ಇವರನ್ನು ಕೇಳಿಕೊಂಡಾಗ ಸಂತೋಷದಿಂದ ಒಪ್ಪಿ ಶುಭ ಕೋರುವದರ ಜೊತೆಗೆ ಪ್ರಕಾಶರ ಸ್ಥಿತಿಗತಿ ವಿವರಿಸಿದ್ದಾರೆ. ಅವರಿಗೆ ನನ್ನ ಅನಂತಾನಂತ ಕೃತಜ್ಞತೆಗಳು. ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಶೇಖ ಮಾಸ್ತರವರಿಗೆ ಹಾಗೂ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, "ರಂಗ ಸಂಪನ್ನರು ಮಾಲಿಕೆಯ" ಸಮಿತಿಯ ವಿದ್ವಾಂಸರಿಗೂ ನನ್ನ ಪರವಾಗಿ ಗೌರವಪೂರ್ವಕ ಕೃತಜ್ಞತೆಗಳು. ಪ್ರಕಾಶವರ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡ ಚಲನಚಿತ್ರ ಹಾಗೂ ರಂಗಭೂಮಿಯ ಕಲಾವಿದರಾದ ರಾಜು ತಾಳಿಕೋಟ ಮತ್ತು ಎಲ್.ಆರ್. ಬೂದಿಹಾಳ ಅವರಿಗೆ, ಮುಖಪುಟ ಕಲಾವಿದರಿಗೆ ಹಾಗು ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

**– ಪ್ರೇಮಾ ಬದಾಮಿ**

## ಪರಿವಿಡಿ


| | | |
|---|---|---|
| ೧. | ಪ್ರಾಸ್ತಾವಿಕ | ೧೦ |
| ೨. | ಪ್ರಾದೇಶಿಕ ಹಿನ್ನಲೆ | ೧೪ |
| ೩. | ಹುಟ್ಟು, ಬಾಲ್ಯ, ಶಿಕ್ಷಣ | ೧೭ |
| ೪. | ರಂಗ ಪ್ರವೇಶ | ೧೯ |
| ೫. | ಸ್ವಂತ ಕಂಪನಿ ಮತ್ತು ಪ್ರಕಾಶ | ೨೧ |
| ೬. | ರಂಗಾಸಕ್ತರು ಕಂಡಂತೆ ಪ್ರಕಾಶ | ೩೪ |
| ೭. | ಪ್ರಕಾಶ ಕಡಪಟ್ಟಿ ರಚಿಸಿದ ನಾಟಕಗಳು | ೪೧ |
| ೮. | ಪ್ರಕಾಶ ಕಡಪಟ್ಟಿ ರಚಿಸಿದ ಹಾಡುಗಳು | ೪೬ |
| ೯. | ವಿವಿಧ ಕಂಪನಿಗಳ ಸೇವೆ | ೫೩ |
| ೧೦. | ಪ್ರಕಾಶ ಕುಟುಂಬದ ಹೆಸರಾಂತ ಕಲಾವಿದರು | ೫೭ |
| ೧೧. | ಪ್ರಕಾಶರ ಮನದಾಳದ ಮಾತುಗಳು | ೬೨ |
| ೧೨. | ಉಪಸಂಹಾರ | ೬೫ |
| ೧೩. | ಅನುಬಂಧಗಳು | ೬೭ |
| ೧೪. | ಚಿತ್ರಗಳು | ೭೧ |

# ಪ್ರಾಸ್ತಾವಿಕ

ನಟನೆ ಎಂದರೆ ಅನುಕರಣೆ, ಅಣಕಿಸುವದು ಎಂದೂ ಆಗುತ್ತದೆ. ಅಲ್ಲಿ ಇಲ್ಲದವರನ್ನು ಇದ್ದಂತೆ ತೋರಿಸುವದು. ಉದಾಹರಣೆಗೆ ಕೃಷ್ಣ ಅಲ್ಲಿ ಇರುವದಿಲ್ಲ. ಒಬ್ಬ ನಟ ಕೃಷ್ಣನಂತೆ ರೂಪಾಲಂಕಾರ ಮತ್ತು ವಸ್ತ್ರಾಲಂಕಾರವನ್ನು ಮಾಡಿಕೊಂಡು ಅಂಗಿಕ ಮತ್ತು ವಾಚಿಕಗಳಿಂದಲೂ ಭಾವನೆಯಿಂದಿಲೂ ಕೃಷ್ಣನನ್ನು ತನ್ನಲ್ಲಿ ಆವಿರ್ಭವಿಸಿ ತೋರುತ್ತಾನೆ. ಇದೊಂದು ತರ ಪರಕಾಯ ಪ್ರವೇಶವೂ ಹೌದು. ನಟನೆ ಮಾಡುವವನನ್ನು ನಟ ಎನ್ನುತ್ತೇವೆ. ನಟಿಸಲು ಬೇಕಾಗುವ ಪರಿಸರ ಮತ್ತು ಸಹನಟರನ್ನು ಪ್ರಕ್ಷುಬ್ಧಗೊಳಿಸುವದೇ ನಾಟಕ. ನಾಟಕವು ಸಾಹಿತ್ಯದ ಒಂದು ಪ್ರಕಾರ. ಕವಿ ಕಾಳಿದಾಸನ ಉಕ್ತಿಯಂತೆ 'ಕಾವ್ಯೇಷು ರಮ್ಯಂ ನಾಟಕಂ' ಎನ್ನುವಂತೆ ಸಾಹಿತ್ಯದ ಎಲ್ಲ ಪ್ರಕಾರಗಳಾದ ಪದ್ಯ, ಗದ್ಯ ಮೊದಲಾದವುಗಳಿಗಿಂತ ನಾಟಕವು ಉತ್ಕೃಷ್ಟವು, ರಮ್ಯವು, ಸುಲಭ ಗ್ರಾಹ್ಯವೂ ಆಗಿದೆ ಮತ್ತು ಹೆಚ್ಚು ಪರಿಣಾಮಕಾರಿಯೂ ಆಗಿದೆ. ಈ ನಟನೆ ಎಂದಿನಿಂದ ಪ್ರಾರಂಭವಾಯಿತು ಎಂದು ಹೇಳುವುದು ಕಷ್ಟಕರವಾದರೂ ನಾಟಕವೆಂಬುದು ಸೃಷ್ಟಿಯಲ್ಲೇ ಆವಿರ್ಭಾವವಾಗಿದೆ ಮತ್ತು ಲಯಕಾರನಾದ 'ರುದ್ರನೇ ಮೊದಲನೇ ನಟ' ಎಂದು ಹೇಳುವದು ಸಮಂಜಸವೆನಿಸದಿರಲಾರದು. ಇಂತಹ ಉತ್ಕೃಷ್ಟವಾದ ಕಲೆಯನ್ನು ದೈವದತ್ತವಾಗಿ ಪಡೆದವರು ಪ್ರಕಾಶ ಕಡಪಟ್ಟಿ.

ಪ್ರಕಾಶ ಎಂಬ ಈ ಹೆಸರೇ ಅನ್ವರ್ಥವಾಗಿದೆ. ನಟನೆ, ನಾಟಕ ರಚನೆ, ನಿರ್ದೇಶನೆ, ರಂಗಗೀತೆ ರಚನೆ, ಸಂಗೀತ ಸಂಯೋಜನೆ ಮತ್ತು ಗೀತ ಗಾಯನ ಈ ರೀತಿಯ ರಂಗಭೂಮಿಯ ಎಲ್ಲಾ ಶಾಖೆಗಳಲ್ಲಿ ಪ್ರಾವೀಣ್ಯತೆ ಹೊಂದಿ ರಂಗಭೂಮಿಯನ್ನು ಕಲಾತ್ಮಕವಾಗಿ ಪ್ರಕಾಶಗೊಳಿಸಿರುವ ಒಬ್ಬ ಅಪೂರ್ವ ವ್ಯಕ್ತಿ.

ಚೇತೋಹಾರಿ, ಕಲಾ ಪ್ರವೀಣ, ನಾಟ್ಯಕಲಾ ಪ್ರವೀಣ, ರಂಗಭೂಮಿ ರಂಗೋಲಿ, ಮಹೋನ್ನತ ಎಂತಹ ಬಿರುದುಗಳನ್ನು ಪ್ರಕಾಶರವರ ಹೆಸರಿಗೆ ಸೇರಿಸಿದರೂ ಅಲ್ಪವೇ. ತಮ್ಮ ಭಾವಪೂರ್ಣ ಅಭಿನಯದಿಂದ ಕಲಾರಸಿಕರನ್ನು ಮಂತ್ರಮುಗ್ಧರನ್ನಾಗಿಸಿದ ಮೋಡಿಗಾರ, ಆಯಾ ಕಾಲಕ್ಕನುಗುಣವಾಗಿ ಹೊಂದಿಕೆಯಾಗುವ ಅಪೂರ್ವ ನಾಟಕಗಳನ್ನು ವೃತ್ತಿರಂಗಭೂಮಿಗೆ ಕೊಟ್ಟ ಖ್ಯಾತ ನಾಟಕಕಾರ, ಪ್ರಪ್ರಥಮವಾಗಿ

ಹಿಂದಿ ಚಲನಚಿತ್ರ ಹಾಡುಗಳನ್ನು ಕನ್ನಡದಲ್ಲಿ ಸಂಯೋಜಿಸಿ ರಂಗ ಸಂಗೀತ ಲೋಕದಲ್ಲಿ ಸಿಹಿ ಜೇನಹೊಳೆ ಹರಿಸಿದ ಹಾಡುಗಾರ. ಒಟ್ಟು ಸಾಹಿತ್ಯ ಸಂಗೀತ, ಅಭಿನಯದ ಸಂಗಮ "ಪ್ರಕಾಶ ಕಡಪಟ್ಟಿ".

ಸ್ವಂತ "ಶ್ರೀ ಗುರು ಪ್ರಸಾದ ನಾಟ್ಯ ಸಂಘ" ಎಂಬ ಹೆಸರಿನ ಕಂಪನಿ ಪ್ರಾರಭಿಸಿದ್ದು ಅದಾವ ಅಮೃತ ಘಳಿಗೆಯೊ! ಮುಟ್ಟಿದ್ದೆಲ್ಲ ಚಿನ್ನವೆಂಬಂತೆ ಪ್ರಕಾಶರ ಪ್ರತಿಯೊಂದು ನಾಟಕಗಳು ಯಶಸ್ಸಿನ ಬಾವುಟ ಹಾರಿಸಿದ್ದಾವೆ. ಗ್ರಾಮೀಣ ಭಾಗದ ಎಷ್ಟೋ ಕಲಾವಿದರು ಪ್ರಕಾಶರ ಹಾಡು–ಅಭಿನಯಕ್ಕೆ ಹುಚ್ಚಾಗಿ ಹೋಗಿದ್ದರು. ಪ್ರಕಾಶರ ಪ್ರೇರಣೆಯಿಂದ ಗ್ರಾಮೀಣ ಭಾಗದಲ್ಲಿ ಸುಮಾರು ನಾಟಕ ತಂಡಗಳು ತಲೆ ಎತ್ತಿದವು, ಅನೇಕ ಕಲಾವಿದರು ಉದ್ಭವವಾದರು. ಪ್ರಕಾಶರು ರಚಿಸಿದ ಭಲೆಮಗಳೆ, ಚಿನ್ನದ ಗೊಂಬೆ, ಸತಿ ಸಂಸಾರದ ಜ್ಯೋತಿ, ಮನೆಗೆ ತಕ್ಕ ಮಗ ನಾಟಕಗಳು ಗ್ರಾಮೀಣ ಬಾಗದಲ್ಲಿ ಎಣಿಕೆ ಇಲ್ಲದಷ್ಟು ಪ್ರಯೋಗಗಳನ್ನು ಕಂಡವು. ಹವ್ಯಾಸಿ ತಂಡಗಳಿಗೆ ಹೊಗುವ ಕಲಾವಿದೆಯರು ಉತ್ತಮ ನಟಿಯರೆಂದು ಗುರುತಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟವು. ನಾನೂ ಕೂಡ ಒಬ್ಬ ಉತ್ತಮ ನಟಿ ಎಂದು ಗುರುತಿಸಿ ಕೊಂಡಿದ್ದು ಬಳ್ಳಾರಿ ಜಿಲ್ಲೆಯ ಶ್ರೀಧರಗಡ್ಡಿ ಗ್ರಾಮದಲ್ಲಿ ದಿವಂಗತ ಶ್ರೀ ನಾಗನಗೌಡರ ನಿರ್ದೇಶನದಲ್ಲಿ ಚಿನ್ನದ ಗೊಂಬೆಯ ನಾಟಕದ ಶಾರದಾಳ ಪಾತ್ರದ ಮುಖಾಂತರ. ಪ್ರಕಾಶ ಅವರ ಕಲಾಛಾಯೆ ಗ್ರಾಮೀಣ ಕಲಾವಿದರಿಂದ ಎಲ್ಲೆಡೆ ಬೀರಿತ್ತು, ಮನೆ–ಮನೆ ಮಾತಾಗಿತ್ತು. ಸಹಸ್ರಾರು ಅಭಿಮಾನಿಗಳನ್ನು ಹೊಂದಿದ ಒಬ್ಬ ಅಪೂರ್ವ ಕಲಾವಿದ ಪ್ರಕಾಶ. ಇಂತಹ ಅಭೂತಪೂರ್ವ ಕಲಾವಿದನನ್ನು ಮೂರ್ತಿಯನ್ನಾಗಿ ಮಾಡಿದ್ದು ತಂದೆ ಶಂಕ್ರಯ್ಯರವರಾದರೆ, ಎಲ್ಲ ಯಶಸ್ಸಿಗೆ ಸ್ಫೂರ್ತಿಯಾಗಿ ನಿಂತಿದ್ದು ಸಂಗಾತಿ ಸುನಂದಾ. ಸುನಂದಾ ಕಡಪಟ್ಟಿಯವರು ಕೂಡ ಉತ್ತಮ ಅಭಿನೇತ್ರಿಯಾಗಿದ್ದರು. ಅಂತೆಯೆ ಇವರಿಬ್ಬರ ಜೋಡಿ ಬಹುಬೇಗ ಜನಪ್ರಿಯವಾದ ಜೋಡಿ ಆಯಿತು. ಈ ಜೋಡಿ ಆಗಮನಕ್ಕೆ ಪ್ರೇಕ್ಷಕರು ಆತುರದಿಂದ ಕಾಯುತ್ತಿದ್ದರು. ಪ್ರತಿ ಪ್ರಯೋಗದ ಕೊನೆಗೆ ಪ್ರಕಾಶ ಮತ್ತು ಸುನಂದಾ ಅವರು ಚಲನಚಿತ್ರ ಹಾಡುಗಳನ್ನು ಹಾಡುವುದು ಕಂಪನಿಯ ವಿಶೇಷವಾಗಿತ್ತು. ಕೇವಲ ಹಾಡು ಕೇಳುವದಕ್ಕಾಗಿಯೇ ನಾಟಕಕ್ಕೆ ಬರುವ ಕಲಾ ರಸಿಕರಿದ್ದರು. ಈ ಜೋಡಿ ಹಾಡುಗಳು ಪ್ರೇಮಿಗಳ ಯುಗಳ ಗೀತೆಗಳಾಗಿದ್ದವು. ಪ್ರಕಾಶ–ಸುನಂದಾ ಅವರ ಜೋಡಿ ರಾಜಕುಮಾರ–ಭಾರತಿ ಜೋಡಿ ಇದ್ದಂತೆ ಎಂದು ಪ್ರೇಕ್ಷಕರು ಮೆಚ್ಚಿ ಹೊಗಳಿದ್ದೂ ಉಂಟು. ಇವರೀರ್ವರು ಜೋಡಿಯಾಗಿ ಅಭಿನಯಿಸಿದ ಬಹುತೇಕ ನಾಟಕಗಳು ದಾಖಲೆ ನಿರ್ಮಿಸಿವೆ.

೧೯೬೦ರಿಂದ ಸ್ವಂತ ಕಂಪನಿಯೊಂದಿಗೆ ಪ್ರಾರಂಭವಾದ ಪ್ರಕಾಶರ ರಂಗ ಜಾತ್ರೆಯ ತೇರಿಗೆ ಅದಾರ ದೃಷ್ಟಿ ತಾಗಿತೊ, ಪ್ರಕಾಶ ಅವರ ಕಲಾಬದುಕಲ್ಲಿ ಮಿಂಚಂತೆ ಬಂದ ಯಶಸ್ಸು ಮಾಯವಾಗಿ ಹೋಯಿತು, ಏನೇ ಪ್ರಯತ್ನಿಸಿದರೂ

ಕಂಪನಿ ಉಳಿಸಿಕೊಳ್ಳುವುದು ಅಸಾಧ್ಯವಾಯಿತು. ರಂಗಭೂಮಿಯ ಕುರಿತು ಪ್ರಕಾಶರು ಸಾಕಷ್ಟು ಪ್ರಾವಿಣ್ಯತೆ ಪಡೆದಿದ್ದರೂ ವ್ಯವಹಾರ ಕುಶಲರಾಗಿರಲಿಲ್ಲ. ಧನಮಿದಂ ಮೂಲಂ ಜಗತ್ ಎಂಬಂತೆ ನಮ್ಮ ಪ್ರತಿ ವ್ಯವಹಾರವು ಧನದಿಂದ ಪ್ರೇರಿತವಾಗಿರುತ್ತವೆ. ಹಣದ ವ್ಯವಹಾರದಲ್ಲಿ ಹಿಂದೆ ಬಿದ್ದ ಪ್ರಕಾಶರು ಎಷ್ಟೇ ಮಹಾನ್ ಕಲಾವಿದನಾಗಿದ್ದರೂ ಬಾಳ ಅವನತಿಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಸಂಘದ ಒಡೆಯನಾಗಿಯೇ ರಂಗಕ್ಕೆ ಹೆಜ್ಜೆ ಇಟ್ಟ ಪ್ರಕಾಶ ಬೇರೆ ಕಂಪನಿಯಲ್ಲಿ ದುಡಿಯಲು ಹಿಂಜರಿಯಲಿಲ್ಲ. ನಾನು ಕಲೆಗಾಗಿ ಹುಟ್ಟಿದವನು, ಒಡೆಯನಾದರೇನು, ಸೇವಕನಾದರೇನು ಎನ್ನುತ್ತ ಬಿ.ಆರ್. ಅರಿಷಿಣಗೋಡಿ ಅವರ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿಯಲ್ಲಿ ಕುಟುಂಬ ಸಮೇತ ಕಲಾ ಸೇವೆಯಲ್ಲಿ ತೊಡಗಿದರು.

ಹುಬ್ಬಳ್ಳಿಯ ಶಾಂತಿನಗರದಲ್ಲಿ ಕಟ್ಟಲು ಪ್ರಾರಂಭಿಸಿದ ಕನಸಿನ ಮನೆ ಮೋಸಗಾರರ ಕೈವಾಡದಿಂದ ಕೈತಪ್ಪಿ ಹೋಯಿತು. ಎಲ್ಲಾ ರಂಗ ಪ್ರತಿಭೆಗಳನ್ನು ಉಪಯೋಗಿಸಿಕೊಂಡರೂ ಭಾರವಾಗಿ ದಿನಗಳನ್ನು ದೂಡಬೇಕಾಯಿತು. ಸುಖ-ದು:ಖದಲ್ಲಿ ಪಾಲುಗಾರಳಾದ ಸತಿ ಸುನಂದಾ ಕಾಮಾಲೆ ರೋಗದಿಂದ ತೀರಿಹೋದರು. ಅದಾದ ಕೆಲದಿನಕ್ಕೆ ತಂದೆ ಶಂಕ್ರಯ್ಯ ಕೂಡ ಬದುಕಿಗೆ ವಿದಾಯ ಹೇಳಿದರು. ಒದೊಂದೆ ಸಂಬಂಧದ ಕೊಂಡಿಗಳು ಕಳಚಿದಂತೆ ಗೆಲುವಿನ ರುಚಿಯುಂಡ ಪ್ರಕಾಶರಿಗೆ ಸೋಲಿನ ಅನುಭವಗಳನ್ನು ಅರಿಗಿಸಿಕೊಳ್ಳುವುದು ಕಷ್ಟವಾಗಿತ್ತು, ಬದುಕು ಬೇಡವಾಗಿತ್ತು. "ದುರಂತಮಯ ಕಥೆಗಳನ್ನು ರಚಿಸಿದ ಕವಿಯೊಬ್ಬನ ಬದುಕೇ ದುರಂತಮಯ ಕಥೆಯಾಯಿತು". ಜೀವನದಲ್ಲಿ ಎದುರಾದ ವಿಫಲತೆಯನ್ನು ಎದುರಿಸುವ ಸಾಮರ್ಥ್ಯವನ್ನು ಕಳೆದುಕೊಂಡ ಪ್ರಕಾಶ ಮದ್ಯ ವ್ಯಸನಿ ಆದರು. ಅವರ ದೌರ್ಬಲ್ಯವೇ ಪ್ರಕಾಶರ ಯಶಸ್ಸಿಗೆ ಮುಳುವಾಯಿತೇನೊ. "ಎಲ್ಲಾ ಇದ್ದು ಏನೂ ಇಲ್ಲದವರಾದರು".

ನಿರುತ್ಸಾಹದಿಂದ ನೆಲ ಹಿಡಿದ ಪ್ರಕಾಶರಿಗೆ ಮತ್ತೆ ಆಸೆಯ ಭಾವ ಮೂಡಿಸಿದ್ದು ಮಗಳು ವೀಣಾ. ತಮ್ಮ ಪ್ರೇಮದ ಕುಡಿಯನ್ನು ಬೆಳಸಿ ಬೆಳಗಿಸುವ ಜವಾಬ್ದಾರಿ, ಮತ್ತೆ ಬಣ್ಣದ ಬದುಕಿನಲ್ಲಿ ಬೆಳಕು ಹುಡುಕುವ ಪ್ರಯತ್ನಕ್ಕೆ ಕೈ ಹಾಕುವಂತೆ ಮಾಡಿತು. ಮತ್ತೆ ನಟನೆ, ನಾಟಕ ರಚನೆ ಪ್ರಾರಂಭ. ಸಾವಿರ ನೋವುಗಳ ನಡುವೆಯೂ ಅನೇಕ ರಂಗ ಕೃತಿಗಳು ಹೊರ ಬಂದವು. ವೃತ್ತಿ ರಂಗಭೂಮಿಯ ಕಂಪನಿಗಳಲ್ಲಿ ಯಶಸ್ವಿ ಪ್ರದರ್ಶನಗಳನ್ನು ಕಂಡವು. "ಕಲೆಯ ಮುಂದೆ ಕಲಾವಿದನ ಲೋಪ ದೋಷಗಳು ಗಣನೆಗೆ ಬರಲಾರವು ಎಂಬುವದಕ್ಕೆ ನಾಟಕಗಳ ಯಶಸ್ಸೇ ಸಾಕ್ಷಿ".

"ಬಹುಮುಖ ಪ್ರತಿಭಾವಂತರ ಬಗ್ಗೆಯಂತೂ ಪ್ರೇಕ್ಷಕರ ಹೃದಯದಲ್ಲಿ ವಿಶೇಷ ಸ್ಥಾನ". ಅಂತೆಯೆ ಆ ವಿಶೇಷ ಸ್ಥಾನ ಪ್ರಕಾಶರನ್ನು ಆದರದಿಂದ ಸ್ವಾಗತಿಸಿದೆ. ವೃತ್ತಿ ರಂಗಭೂಮಿ ಅನುಕಂಪದಿಂದ ಪ್ರಕಾಶರನ್ನು ಅಪ್ಪಿಕೊಂಡಿದೆ. ಉತ್ಕೃಷ್ಟ ಸ್ಥಾನಕ್ಕೆ

ಏರಲು ಪ್ರಕಾಶರಿಗೆ ಸರಕಾರ ಏಣಿ ಇಟ್ಟಿದೆ. ಅಭಿಮಾನಿಗಳ ಮನಕ್ಕೆ ನೋವು ಕೊಡುವ ಕಹಿ ಘಟನೆಗಳು ಮತ್ತೆಂದು ಮರುಕಳಿಸದಂತೆ ಎಲ್ಲರ ಭರವಸೆಗಳ ಭಾರ ಹೊತ್ತು ಏಣಿ ಏರಬೇಕಾದದ್ದು ಪ್ರಕಾಶರ ಕರ್ತವ್ಯ. ಪ್ರಕಾಶರಲ್ಲಿ ಅಗಾಧವಾದ ಬುದ್ಧಿ ಶಕ್ತಿ ಇದೆ, ಆ ಶಕ್ತಿಯನ್ನು ಆದರ್ಶದೊಡನೆ ಸಾಮರಸ್ಯಗೊಳಿಸಿದರೆ ಪ್ರಕಾಶರು ಅತ್ಯದ್ಭುತವಾದ ರಂಗಭೂಮಿಯ ರತ್ನ.

# ಪ್ರಾದೇಶಿಕ ಹಿನ್ನೆಲೆ

ಸದಾ ಭೂಮಾತೆಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ರೈತ ಬಾಂಧವರ ಹಳ್ಳಿಗಳಲ್ಲಿ ಒಂದಾದ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿಗೆ ಹತ್ತಿಕೊಂಡು ಬಸವಣ್ಣನ ಕೀರ್ತಿ ಹೆಸರಿನಿಂದ ರಾರಾಜಿಸುತ್ತಿರುವ ಗ್ರಾಮವೇ "ಕಡಪಟ್ಟಿ".

ಪುರಾತನ ಕಾಲದ ಮೂರು ದೇವಸ್ಥಾನಗಳನ್ನು ಹೊಂದಿದ್ದು ಪವಾಡ ಬಸ್ಸವಣ್ಣನ ಮಹಿಮೆಯು ಅಪಾರವಾದದ್ದು. ಕೊಣ್ಣೂರಿನ ದೇಸಾಯಿಯವರ ತೋಟದಲ್ಲಿ ಹುತ್ತ ಬೆಳೆದದ್ದು ದೇಸಾಯಿಯವರ ಆಕಳು ಪ್ರತಿ ದಿನ ಹುತ್ತಕ್ಕೆ ಹಾಲು ಕರೆಯುವದನ್ನು ಕಂಡು ದೇಸಾಯಿ ಹುತ್ತ ಅಗೆದಾಗ ಅಲ್ಲಿ ಕಂಡ ಉದ್ಭವ ಮೂರ್ತಿಯೇ ಪವಾಡ ಬಸವಣ್ಣ. ಈ ಬಸವಣ್ಣ ಕಡಪಟ್ಟಿ ಭಾಗದ ಪ್ರಸಿದ್ಧ ದೇವರು. ಅನೇಕ ಭಕ್ತರ ಆಶೋತ್ತರಗಳನ್ನು ತೀರಿಸುವ ದೈವ. ಅದೇ ರೀತಿಯಾಗಿ ಸುವರ್ಣ ಖಂಡಿ, ಬಸವೇಶ್ವರ ಎದರು ಬದರಾಗಿ ಕಂಗೊಳಿಸುತ್ತಾರೆ. ಶ್ರಾವಣ ಮಾಸದ ಕೊನೆಯ ಸೋಮವಾರದ ನಂತರ ಬರುವ ಗುರುವಾರವೇ ರಥೋತ್ಸವ ಜರಗುತ್ತದೆ. ಲಕ್ಷೋಪ ಲಕ್ಷ ಭಕ್ತಾದಿಗಳು ಬಂದು ಭಕ್ತಿಯಿಂದ ಸೇವಗೈಯುತ್ತಾರೆ. ಜಿಲ್ಲೆಯಲ್ಲಿಯೇ ಜೋಡಿರಥ ಎಳೆಯುವ ಗ್ರಾಮವೆಂದು ಪ್ರಖ್ಯಾತಿ ಪಡೆದ ಗ್ರಾಮವಾಗಿದೆ. ಈ ರಥಗಳು ಗಾಲಿಗಳಿಲ್ಲದ ರಥಗಳಾಗಿದ್ದರಿಂದ ಭಕ್ತಾದಿಗಳೇ ಹೊತ್ತು ಮುಂದೆ ಸಾಗುತ್ತಾರೆ. ಅದೇ ರೀತಿ ಶ್ರೀ ಜಗದೀಶ್ವರ ವಿರಕ್ತ ಮಠವೂ ಇದೆ. ಅದರ ರಥೋತ್ಸವವೂ ಯುಗಾದಿ ಪಾಡ್ಯಮಿಯ ದಿನ ಜರಗುವದು.

ಜಮಖಂಡಿಯು ರಾಜಾ ಪಟವರ್ಧನ ಮನೆತನದವರ ಅರಮನೆ ಇರುವ ನಗರ. ಇಂಡೋಆರ್ಯನ್ ಶೈಲಿಯ ಕಟ್ಟಡವಾದ ಈ ಅರಮನೆ ಪ್ರವಾಸಿಗರನ್ನು ಆಕರ್ಷಿಸುವ ಕೇಂದ್ರವಾಗಿತ್ತು. ಈಗ ಕಲಿಯುವ ಮಕ್ಕಳ ಶಾಲೆಯಾಗಿದೆ. ಜಮಖಂಡಿ ಪಟವರ್ಧನ ಮಹರಾಜರು ತಮ್ಮದೇ ಆದ ಒಂದು ಕಟ್ಟಡವನ್ನು ಕಡಪಟ್ಟಿಯ ಜನರ ಶಿಕ್ಷಣದ ಅನುಕೂಲಕ್ಕಾಗಿ ದಾನವಾಗಿ ನೀಡಿ ಗ್ರಾಮದ ಜನರೆಲ್ಲರನ್ನು ಸುಸಿಕ್ಷಿತರನ್ನಾಗಿ ಮಾಡಿದ ಶ್ರೇಯಸ್ಸು ಪಟವರ್ಧನ ಮಹರಾಜರಿಗೆ ಸಲ್ಲುತ್ತದೆ. ಜಮಖಂಡಿ ಮಾವಿನ ಹಣ್ಣುಗಳಿಗೆ ಪ್ರಸಿದ್ಧವಾದುದರಿಂದ "ಆಮರಾಯ" (ಮಾವಿನಹಣ್ಣು) ದೇವರು ನೆಲೆ ನಿಂತಿದ್ದು ಪ್ರತಿ ವರ್ಷ ವಿಜ್ರಂಭಣೆಯಿಂದ ನಡೆಯುವ ಜಮಖಂಡಿ ಜಾತ್ರೆಗೆ "ಆಮರಾಯಿ" ಜಾತ್ರೆಯೆಂದೇ ಕರೆಯುವ ವಾಡಿಕೆ. ಕೆಂಪು ಮಿಶ್ರಿತ ಮಸಾರಿ ಭೂಮಿಯನ್ನು ಹೊಂದಿದ ಜಮಖಂಡಿ ಪ್ರದೇಶ ಶೇಂಗಾ, ಕಬ್ಬು ಬೆಳೆಗಳಿಗೆ ಪ್ರಸಿದ್ಧವಾದ ಊರು.

ಕ್ರೀಡೆಯಲ್ಲಿ ಕಡಪಟ್ಟಿ ಗ್ರಾಮದ ಕೀರ್ತಿ ಅಪಾರವಾದದು. ಹಲವು ದಶಕಗಳ ಹಿಂದೆ ಪ್ರತಿಷ್ಠಿತ ಬಿ.ಎಲ್.ಡಿ. ಕಾಲೇಜ್‌ನಿಂದ ಕರ್ನಾಟಕ ವಿಶ್ವ ವಿದ್ಯಾಲಯಕ್ಕೆ ಈಜುಗಾರರಾಗಿ ಹನುಮಂತ ಬಿಜ್ಜರಗಿ, ಸಂಗಪ್ಪ ಸಂತಿ, ರಾಜು ಪೂಜಾರಿ, ಸೋಮು ಪೂಜಾರಿ, ಅಂತರಾಷ್ಟ್ರೀಯ ಈಜುಗಾರರಾಗಿ ಬೇರೆ-ಬೇರೆ ದೇಶಗಳಿಗೆ ಹೋಗಿ ಈಜು ಸ್ಪರ್ದೆಗಳಲ್ಲಿ ಭಾಗವಹಿಸಿ ಪ್ರಶಸ್ತಿಯನ್ನು ತಂದ ಕೀರ್ತಿ ಬಸವರಾಜ ಪಾರಶೆಟ್ಟಿ ಅವರಿಗೆ ಸಲುತ್ತದೆ.

ಅಂದಿನ ಪಟವರ್ದನ ಮಹಾರಾಜರು ಕೊಲ್ಲಾಪುರಕ್ಕೆ ಗ್ರಾಮದ ವೇಗದ ಓಟಗಾರರಾದ ರಾಚೋಟೇಶ್ವರ ಮಹಾ ಸ್ವಾಮಿಗಳನ್ನು ಸ್ಪರ್ಧೆಗೆ ಕರೆದೊಯ್ದಾಗ ಕೊಲ್ಲಾಪುರದ ಮಹಾರಾಜರು "ಗಾಳಿಯ ಗಂಡ" ಎಂಬ ಬಿರುದು ಕೊಟ್ಟು ಬಂಗಾರದ ಪದಕವನ್ನು ನೀಡಿ ಸನ್ಮಾಸಿದ್ದರು. ಅಲ್ಲದೆ ಕುಸ್ತಿಯಲ್ಲಿ ಪರಸಪ್ಪ ಕಡಪಟ್ಟಿ ಹೊರ ರಾಜ್ಯಗಳಲ್ಲಿ ಅವನದೇ ಹೆಸರು ಮಾಡಿದ್ದಾನೆ. ಇಂದಿಗೂ ನೆರೆಯ ರಾಜ್ಯವಾದ ಮಹರಾಷ್ಟ್ರದಲ್ಲಿ ಕಡಪಟ್ಟಿ ಎಂದರೆ ಪೈಲ್ವಾನ ಪರಸಪ್ಪನ ಹೆಸರು ಕೇಳುತ್ತಾರೆ. ಕ್ರೀಡೆಯಲ್ಲಿ ಸಾಕಷ್ಟು ಸಾಧನೆ ಮಾಡಿದ ಕೀರ್ತಿ ಗ್ರಾಮಕ್ಕೆ ಸಲ್ಲುತ್ತದೆ. ಜಮಖಂಡಿಯ ಅಂದಿನ ಪಟವರ್ದನ ಮಹಾರಾಜರು ರಾಜಸ್ಥಾನದಿಂದ ಕಟ್ಟಡದ ಕೆಲಸಗಾರರಿಗೆ ಈ ಗ್ರಾಮದಲ್ಲಿ ಆಶ್ರಯ ಕೊಟ್ಟ ಕಾರಣ ಗ್ರಾಮದ ಮುಖ್ಯ ಉದ್ಯೋಗವೇ ಕಟ್ಟಡದ ಕೆಲಸವಾಗಿ ಮುಂದುವರೆದಿದೆ. ಅಲ್ಲದೇ ರಾಜ್ಯದಾದ್ಯಂತ ಗ್ರಾಮದ ಜನರು ಸಿಮೆಂಟಿನಲ್ಲಿ ಮೂರ್ತಿ ಮಾಡುವದು ಹಾಗೂ ದೇವಸ್ಥಾನಗಳ ಶಿಖರ ತಯಾರಿಸುವಲ್ಲಿ ಅತ್ಯಂತ ಹೆಸರು ಮಾಡಿದ್ದಾರೆ. ಅಂದಿನ ಬಸಪ್ಪ ಕುಂಚನೂರ, ಶಂಕರ ಧಾರಣಿ, ದುಂಡಪ್ಪ ಸಂತಿ ಅವರಿಂದ ಪ್ರಾರಂಭವಾದ ಕಾಯಕ ಇಂದು ರಾಜ್ಯದಾದ್ಯಂತ ಹೆಸರು ಮಾಡಿದೆ.

ಗ್ರಾಮದಲ್ಲಿನ ಯುವಕರು ಮೂರು ಪಡೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ವಾಯು ದಳದಲ್ಲಿ ಭಾಸ್ಕರ ಹಿಪ್ಪರಗಿ, ನೌಕಾದಳದಲ್ಲಿ ಗಿರಿಮಲ್ಲಯ್ಯ ಹಾಗೂ ಭೂದಳದಲ್ಲಿ ಸಾಕಷ್ಟು ಜನರು ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಒಂದು ಮಾಜಿ ಸೈನಿಕರ ಸಂಘ ಸ್ಥಾಪನೆ ಮಾಡಿ ಅದರ ಮೂಲಕ ಸಾಕಷ್ಟು ಪ್ರತಿಭೆಗಳಿಗೆ ಪ್ರೋತ್ಸಾಹ ನೀಡುತ್ತ ಸಾಗಿದ್ದಾರೆ. ಸಧ್ಯದಲ್ಲಿ ಭೂದಳದಲ್ಲಿ ೩೦ಕ್ಕೂ ಹೆಚ್ಚು ಯುವಕರು ಸೇವೆ ಸಲ್ಲಿಸುತ್ತಿದ್ದಾರೆ. ಇದು ದೇಶಕ್ಕೆ ಈ ಗ್ರಾಮದ ಅತ್ಯಂತ ಮಹತ್ವದ ಕೊಡುಗೆ.

ಇನ್ನೂ ಜಮಖಂಡಿ ೧೧ ನೇ ಶತಮಾನದ ಶಾಸನಗಳಲ್ಲಿ ಜಂಬುಖಂಡಿ ಅಗ್ರಹಾರವೆಂದು ಪ್ರಸಿದ್ಧವಾದದ್ದು., ಅದರ ಹಿಂದೆ ೧೦ ನೇ ಶತಮಾನದ ಕವಿರಾಜ, ಕವಿ ಚತುರ್ಮುಖಿ, ಕವಿತಿಲಕ, ಕವಿ ಜನ ಚೂಡಾರತ್ನ, ಮಹಾನ್ ಕವಿ ಚಕ್ರವರ್ತಿ "ರನ್ನ" ಇದೇ ಜಂಬುಖಂಡಿ ಪ್ರಾಂತದ ಮುದುವೊಳಲು ಈಗಿನ ಮುಧೋಳದಲ್ಲಿ ಜನ್ಮ ತಾಳಿದ್ದರು. ಆಗಿನಿಂದಲೂ ಮಹಾ ಕವಿಗಳ ನೆಲೆ ಬೀಡಾಗಿದ್ದು ಕಡಪಟ್ಟಿ ಪ್ರಾದೇಶಿಕತೆಯ ಹೆಮ್ಮೆ. ಕೃಷ್ಣಾ ನದಿ ಮತ್ತು ಘಟಪ್ರಭೆ ಜೀವ ಜಲಗಳು ಈ

ಪ್ರದೇಶಕ್ಕೆ ಅತ್ಯಂತ ಸಮೀಪ ಹರೆದು ಹೋದದ್ದರಿಂದ ಇದೊಂದು ಸಮೃದ್ಧ ಸಂಪದ್ಭರಿತ ಪ್ರದೇಶವಾಗಿದೆ.

ಜಮಖಂಡಿಯಿಂದ ೨೦ ಕಿ.ಮೀ ದೂರದಲ್ಲಿರುವ ತೇರದಾಳ(ತ್ರೀದಳ), ಸಿದ್ಧರ ಸಿದ್ಧ, ಮೃದಂಗವಾದನ ಪ್ರಭು, ಅನುಭಾವ ಪ್ರಪಂಚದ ಶ್ರೇಷ್ಠ ಜ್ಞಾನಿ "ಅಲ್ಲಮಪ್ರಭು"ವಿನ ಪುಣ್ಯ ಕ್ಷೇತ್ರವಿರುವದು ಈ ಪ್ರದೇಶದ ಮತ್ತೊಂದು ಹೆಮ್ಮೆ. ಪೂರ್ವಕ್ಕೆ ರನ್ನ, ಪಶ್ಚಿಮಕ್ಕೆ ಅಲ್ಲಮ, ಉತ್ತರಕ್ಕೆ ಕೃಷ್ಣಾ ನದಿ, ದಕ್ಷಿಣಕ್ಕೆ ಘಟಪ್ರಭೆ, ಹೀಗೆ ರಾಜರ, ದೈವಗಳ, ಕವಿಗಳ, ಕ್ರೀಡೆಗಳ, ಕಲೆಗಳ, ಯೋಧರ, ನದಿ ಸಂಸ್ಕೃತಿಯ ಸಮೃದ್ಧಭೂಮಿಯ "ಕಡಪಟ್ಟಿ"ಯಲ್ಲಿ ಜನಿಸಿದ ಪ್ರಕಾಶ ಇವರು ಪ್ರಸಿದ್ಧ ನಟರಾಗಲು, ಕವಿಗಳಾಗಲು, ಹಾಡುಗಾರರಾಗಲು ಕಾರಣವಾಗಿರಬಹುದೇನೊ. ಸದಾ ಒಡಲಿನಲ್ಲಿ ಹಸಿರು ತುಂಬಿಕೊಂಡಿರುವ ಕಡಪಟ್ಟಿ ಪ್ರದೇಶ ನೋಡುಗರ ಕಂಗಳಿಗೆ ಸ್ವರ್ಗ ಸುಂದರ ತಾಣ ಇಂತಹ ಪುಣ್ಯ ತಾಣದಲ್ಲಿ ಜನಿಸಿದ ಪ್ರಕಾಶ ಧನ್ಯ.

# ಹುಟ್ಟು, ಬಾಲ್ಯ ಮತ್ತು ಶಿಕ್ಷಣ

ಜಮಖಂಡಿ ತಾಲೂಕಿನ ಕಡಪಟ್ಟಿ ಗ್ರಾಮದ ಜಾತಿಯಿಂದ ಜಂಗಮರಾದ, ಕಡಪಟ್ಟಿ ಸಣ್ಣ ಬಸವಣ್ಣ ದೇವಸ್ಥಾನದ ಪೂಜಾರಿ ಮನೆತನದವರಾದ ವೇದಮೂರ್ತಿ ಶಂಕ್ರಯ್ಯ ಮತ್ತು ರಾಚವ್ವ ದಂಪತಿಗಳ ಐದು ಜನ ಪುತ್ರರಲ್ಲಿ ಜೇಷ್ಠ ಪುತ್ರರಾಗಿ ೧೯೪೮ರ ರಲ್ಲಿ ಪ್ರಕಾಶವರ ಜನನ. ತಂದೆ ಶಂಕ್ರಯ್ಯ ಪಿ.ಡಬ್ಲ್ಯು.ಡಿ ಡ್ರೈವರ ವೃತ್ತಿಯಲ್ಲಿದ್ದರು. ತಾಯಿ ರಾಚವ್ವ ಗೃಹಿಣಿಯಾಗಿದ್ದರು. ರಾಜೇಶ, ಅಶೋಕ, ವಿಜಯ, ದಿಲೀಪ ನಾಲ್ಕು ಜನ ಪ್ರಕಾಶರವರ ಸಹೋದರರು. ಶಾರದಮ್ಮ ಸಹೋದರಿ.

ಪ್ರಕಾಶನನ್ನು ಮನೆಯಲ್ಲಿ ಎಲ್ಲರು ಪ್ರೀತಿಯಿಂದ "ಪ್ರಕಾಶ ಬಾಬು" ಎಂದು ಕರೆಯುತ್ತಿದ್ದರು. ಪ್ರಕಾಶ ಬಾಲ್ಯದಲ್ಲಿ ತುಂಬಾ ಸೌಮ್ಯ, ಶಾಂತ ಸ್ವಭಾವದವರಾಗಿದ್ದರು. ಉಡಾಳತನವಾಗಲಿ, ಹಟಮಾರಿತನವಾಗಲಿ ಅವರಿಗೆ ತಿಳಿದಿರಲಿಲ್ಲ. ಸದಾ ತಾಯಿಯ ಸೆರಗು ಹಿಡಿದುಕೊಂಡು ಓಡಾಡುತ್ತಿದ್ದರು. ಕಡಪಟ್ಟಿಯಲ್ಲಿಯೇ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪ್ರಾರಂಭವಾಯಿತು. ತಂದೆ ವೇದಮೂರ್ತಿ ಶಂಕರಯ್ಯನವರು ಹವ್ಯಾಸಿ ರಂಗ ತಂಡಗಳಲ್ಲಿ ಅಭಿನಯಿಸುತ್ತಿದ್ದರು. ಹಳ್ಳಿಯ ಶಾಲೆಯಲ್ಲಿ ನಾಟಕದ ತಾಲೀಮು ನಡೆದಾಗ ತಂದೆಯೊಂದಿಗೆ ಪ್ರತಿದಿನವೂ ತಾಲೀಮಿಗೆ ಬರುತ್ತಿದ್ದ ಪ್ರಕಾಶ ಅಲ್ಲಿಂದ ಸೀದಾ ದೇವಸ್ಥಾನಕ್ಕೆ ಓಡಿ ನಾಲ್ಕು ಜನ ಸ್ನೇಹಿತರನ್ನು ಸೇರಿಸಿ ದೇವಸ್ಥಾನದಲ್ಲಿದ್ದ ವಿಭೂತಿ, ಕುಂಕುಮ ಕಲಿಸಿ ಮುಖಕ್ಕೆ ಹಚ್ಚಿಕೊಂಡು ತಂದೆಯವರು ಮಾಡುತ್ತಿದ್ದ ಪಾತ್ರದ ಮಾತುಗಳನ್ನೇ ಹೊಳೆದಷ್ಟು ಮಾತನಾಡುತ್ತ, ಸ್ನೇಹಿತರನ್ನು ರಂಜಿಸುತ್ತಿದ್ದರು. ಪ್ರಕಾಶರಿಗೆ ಪಾಠ ಬಿಟ್ಟರೆ ಆಟ ಇದೊಂದೇ ಆಗಿತ್ತು. ಒಂದು ದಿನ ಕುಂಕುಮ ಬಳೆದುಕೊಂಡ ಪ್ರಕಾಶರ ಮುಖವನ್ನು ಕಂಡ ಶಂಕರಯ್ಯನವರು ಬೈಗಳ ಸುರಿಮಳೆಯನ್ನೇ ಸುರಿಸಿದ್ದರು. ತಾಯಿ ರಾಚವ್ವ, "ನೀವು ಮಾಡೂದೇ ಮಗ ಮಾಡತಾನ ಯಾಕ ಬೈತೀರಿ, ಯಲ್ಲರೂ ನಾಟಕ ಮಾಡಕೋಂತ ಹೋಗರಿ ಅಂದ್ರ ಚೊಲೊ ಅಕ್ಕೈತಿ" ಅಂತ ಸಿಡಿಕಿನಿಂದಲೇ ಹೇಳಿದ್ದರು. ಕಾಕತಾಳಿಯ ಎಂಬಂತೆ ರಾಚವ್ವನವರು ಅದಾವ ಗಳಿಗೆಯಲ್ಲಿ ಆ ಮಾತು ಹೇಳಿದರೊ ಶಂಕರಯ್ಯನವರ ಕುಟುಂಬವೇ ನಾಟಕದ ಮನೆತನವಾಯಿತು. ಹೀಗೆ ಮುಗ್ಧತೆಯಲ್ಲಿಯೇ ಬೆಳೆದ ಪ್ರಕಾಶ ೭ ನೇ ತರಗತಿಯವರೆಗೂ ಕಡಪಟ್ಟಿಯಲ್ಲೇ ಶಿಕ್ಷಣ ಮುಗಿಸಿ, ೮ ನೇ ತರಗತಿಯಿಂದ ಪಿ.ಬಿ. ಹೈಸ್ಕೂಲ ಜಮಖಂಡಿಗೆ ಹೋಗಲು ಪ್ರಾರಂಭಿಸಿದರು. ಅದೇ ಸಮಯದಲ್ಲಿ ನಾಟಕದ ಬಗ್ಗೆ ಅಪಾರ ಅಭಿರುಚಿ ಹೊಂದಿದ್ದ ತಂದೆ ಶಂಕ್ರಯ್ಯ ಪ್ರಕಾಶನನ್ನು ಜಿ.ಅರ್. ಗುರುವ ಎಂಬ ಸಂಗೀತ ಶಿಕ್ಷಕರಲ್ಲಿ ಸಂಗೀತ ಅಭ್ಯಾಸಕ್ಕೆ ಬಿಟ್ಟರು. ಪ್ರಕಾಶ

ಧ್ವನಿ ಒಂದು ರೀತಿ ಘಡಸಾಗಿತ್ತು. ಪ್ರಕಾಶ ಹಾಡುವುದನ್ನು ಕೇಳಿದ ಶಂಕ್ರಯ್ಯನ ಸ್ನೇಹಿತರೆಲ್ಲ ಗೇಲಿ ಮಾಡುತ್ತಿದ್ದರು. "ಗೊಗ್ಗರ ಧ್ವನಿ ಇದ್ದಂಗ ಐತಿ ಇವನಿಗ್ಯಾಕ ಸಂಗೀತ ಕಲಸತೀ" ಅಂತ ಹೇಳುತ್ತಿದ್ದರು. ನೋಡುವಿರಂತೆ ಪ್ರಕಾಶನನ್ನು ನಾನು ಕಲಾವಿದನನ್ನಾಗಿ ಮಾಡೇ ತೀರುತ್ತೇನೆ. ಅವನ ಗೊಗ್ಗರ ಧ್ವನಿಯನ್ನೇ ನಾಲ್ಕು ಜನ ಮೆಚ್ಚುವಂತೆ ಮಾಡುತ್ತೇನೆ ಅಂತ ಶಂಕ್ರಯ್ಯನವರು ಹೇಳುತ್ತಿದ್ದರು. "ತಂದೆಯ ಆಸೆಯಂತೆ ನಾಲ್ಕು ಜನ ಮಾತ್ರ ಮೆಚ್ಚುವದಲ್ಲ ಪ್ರಕಾಶನನ್ನು ಇಡೀ ಕರ್ನಾಟಕವೇ ಮೆಚ್ಚುವಂತಾಗಿದ್ದು ತಂದೆಯ ಛಲದ ಫಲವೆನ್ನಬಹುದು". ಸಂಗೀತ ಅಭ್ಯಾಸ ಪ್ರಾರಂಭಿಸಿದ ಕೆಲವೇ ತಿಂಗಳಲ್ಲಿ ೧೧/೦೩/೧೯೬೧ರಲ್ಲಿ ರೋಟರಿ ಕ್ಲಬ್ ಜಮಖಂಡಿ ಸೈಂಟಿಫಿಕ್ ವೋಕಲ್ ಮ್ಯುಸಿಕ್ ಕಾಂಪಿಟಿಶನ್‌ನಲ್ಲಿ (Rotary club Jamakhandi Scientific Vocal Music Competition) ಪ್ರಕಾಶ ದ್ವಿತಿಯ ಸ್ಥಾನ ಪಡೆದಿದ್ದ.

ಅತ್ಯಂತ ಹೆದರಿಕೆಯ ಸ್ವಭಾದವನಾದ ಪ್ರಕಾಶ ಯಾರೊಂದಿಗೂ ಅಷ್ಟಾಗಿ ಬೆರಿಯುತ್ತಿರಲಿಲ್ಲವಾದರೂ, ಒಂದು ದಿನ ಎಂಟನೆ ತರಗತಿಯಲ್ಲಿದ್ದಾಗ ಸಹಪಾಟಿ ಹುಡುಗ ಯಡಗಣ್ಣಿಗೆ ಬಲವಾಗಿ ಹೊಡೆದಿದ್ದರ ಪರಿಣಾಮವಾಗಿ ಎಡ ಕಣ್ಣಿನ ಕಪ್ಪು ಗುಡ್ಡಿಯೇ ಸೀಳಿ ಬಿಟ್ಟಿತ್ತು. ಆದರೂ ಮೌನವಾಗಿಯೇ ಮನೆ ತಲುಪಿದ್ದ ಪ್ರಕಾಶ. ಕೊನೆಗೆ ಆ ಕಣ್ಣು ಆಪ್ರೇಶನ್ ಮಾಡುವ ಸ್ಥಿತಿ ತಲುಪಿತು. ಎರಡು ಬಾರಿ ಆಪ್ರೇಶನ್ ಮಾಡಿಸಿದರೂ ಎಡಗಣ್ಣು ಸ್ಪಷ್ಟವಾಗಿ ಕಾಣುವ ಶಕ್ತಿ ಕಳೆದುಕೊಂಡಿತು. ಜಮಖಂಡಿಯಿಂದ ಪ್ರಕಾಶ ಎಸ್.ಎಸ್.ಎಲ್.ಸಿ.ಗೆ ಹುನ್ನೂರ ಟಿ.ಡಿ.ಬಿ. ಹೈಸ್ಕೂಲಿಗೆ ಬಂದರು. ಎಸ್.ಎಸ್.ಎಲ್.ಸಿ. ಪೂರ್ಣಗೊಂಡ ನಂತರ ತಂದೆ ಶಂಕ್ರಯ್ಯನವರೊಂದಿಗೆ ರಂಗ ಪಯಣಕ್ಕೆ ಸಿದ್ಧರಾಗಿ ನಿಂತರು.

# ರಂಗ ಪ್ರವೇಶ

ಚಿಕ್ಕಂದಿನಿಂದಲೂ ಪ್ರಕಾಶರು ಅಭಿನಯದ ಬಗ್ಗೆ ಆಸಕ್ತಿ ಹೊಂದಿದವರಾಗಿದ್ದರು. ಆಗಾಗ ಮೂರು-ನಾಲ್ಕು ಸಾಲುಗಳು ಕವಿತೆಗಳನ್ನು ಕೂಡ ರಚಿಸುತ್ತಿದ್ದರು. ಎಂಟನೇ ತರಗತಿಯಲ್ಲಿದ್ದಾಗ ವಿ.ಬಿ.ಕುಲ್ಕರ್ಣಿ ಅವರು ರಚಿಸಿದ ಕಲಿಯುಗದ ಕುಬೇರ ನಾಟಕದಲ್ಲಿ ರವಿ ಪಾತ್ರ ಮಾಡುವ ಅವಕಾಶ ಒದಗಿ ಬಂದಿತು. ಈ ನಾಟಕ ಮಕ್ಕಳ ನಾಟಕವಾಗಿದ್ದರಿಂದ ಎಲ್ಲ ಮಕ್ಕಳಂತೆ ಪ್ರಕಾಶರು ಪಾತ್ರವನ್ನು ಅಚ್ಚುಕಟ್ಟಾಗಿ ಅಭಿನಯಿಸಿದ್ದರು. ಅದೇ ಪ್ರಕಾಶರ ಪ್ರಥಮ ರಂಗ ಪ್ರವೇಶ.

ಪ್ರಕಾಶ ಹತ್ತನೇ ತರಗತಿಯಲ್ಲಿದ್ದಾಗ ತಂದೆ ಶಂಕ್ರಯ್ಯನವರು 'ದೈವಲೀಲೆ' ನಾಟಕವನ್ನು ರಚಿಸಿ ಜಮಖಂಡಿಯಲ್ಲಿ ನಾಟಕ ಮಾಡಲು ನಿರ್ಧರಿಸಿ ಪಾತ್ರಗಳನ್ನು ಹಂಚುತ್ತಿರುವಾಗ ಪ್ರಕಾಶ ತಾಲೀಮ ಮನೆಗೆ ಬಂದದ್ದನ್ನು ಕಂಡ ಶಂಕ್ರಯ್ಯ "ನಾಟಕದಾಗ ಪಾತ್ರ ಮಾಡ್ತಿಯಾ" ಅಂದರು. ತಂದೆ ಹುಡುಗಾಟಿಕೆ ಮಾಡುತ್ತಿದ್ದಾರೆ ಅಂತ ತಿಳಿದ ಪ್ರಕಾಶ ನಾಚುತ್ತಲೇ "ಬೇಡ ಅಪ್ಪ ನನಗೇನು ಬರುತ್ತದೆ" ಅಂತ ಗೋಡೆ ಹಿಡಿದು ನಿಂತಿದ್ದರು. "ನಾನು ನಿಮ್ಮಪ್ಪ! ನಿನ್ನ ಮನಸಿನ್ಯಾಗ ಏನೈತಿ ಅಂತ ಗೊತ್ತೈತಿ, ಬಾ ಇಲ್ಲಿ ಕುಂದ್ರು" ಅಂತ ಕರೆದು ಕೂಡಿಸಿ "ತೊಗೊ ದಯಾನಂದನ ಪಾತ್ರ ಕಲಿ" ಅಂತ ಚೋಪಡಿ(ಸ್ಕ್ರಿಪ್ಟ) ಕೈಯಲ್ಲಿ ಇಟ್ಟಿದ್ದರು. ಪ್ರಕಾಶರಿಗೆ ಮನಸಿನಲ್ಲಿ ಖುಶಿಯೋ ಖುಶಿ. ಎರಡೇ ದಿನಗಳಲ್ಲಿ ದಯಾನಂದನ ಪಾತ್ರದ ಎಲ್ಲ ಮಾತುಗಳನ್ನು ಕಲೆತು ತಂದೆಗೆ ಒಪ್ಪಿಸಿ ಶಭಾಶ ಎನಿಸಿಕೊಂಡಿದ್ದರು. ನಾಟಕ ತಾಲೀಮು ಪ್ರಾರಂಭವಾಯಿತು.

ಸ್ತ್ರೀ ಪಾತ್ರಗಳಿಗೆ ಜಮಖಂಡಿಯಲ್ಲೇ ವಾಸವಾಗಿರತಕ್ಕಂತ ಅನಕ್ಷರಸ್ತ ಮಹಿಳೆಯರನ್ನೇ ಆಯ್ಕೆ ಮಾಡಿಕೊಳ್ಳಲಾಗಿತ್ತು. ಮಹಿಳೆಯರ ಜೊತೆ ತಾಲೀಮ ಮಾಡುವದೆಂದರೆ ಪ್ರಕಾಶರಿಗೆ ನಡುಕವೇ ಪ್ರಾರಂಭವಾಗಿ ಒಂದೂ ಮಾತು ಹೇಳದೇ ತೊದಲಿಸುತ್ತ ನಿಂತರು. "ಅವರು ನಿನ್ನ ಅಕ್ಕಂದಿರಿದ್ದಂತೆ, ಯಾಕ ಅಂಜತಿ ಸರಿಯಾಗಿ ಮಾತನಾಡು" ಎಂದು ಎಷ್ಟು ಸಾರಿ ಹೇಳಿದರೂ ಪ್ರಕಾಶರಿಗೆ ಮಾತ್ರ ಧೈರ್ಯ ಹತ್ತಿರ ಸುಳಿಯಲಿಲ್ಲ. ಕೊನೆಗೆ ಸಿಟ್ಟಿನಿಂದ ತಂದೆ ಕಪಾಳ ಮೋಕ್ಷ ಮಾಡಿದ್ದರು. ಪ್ರಕಾಶರಿಗೆ ಒಂದು ರೀತಿ ಅಪಮಾನವೆನಿಸಿ ಹೊರಗೆ ಬಂದು ಅತ್ತಿದ್ದರು. ನಾನು ಸರಿಯಾಗಿ ಪಾತ್ರ ಮಾಡಿ ತೋರಿಸಲೇ ಬೇಕು ಅಂತ ನಿರ್ಧರಿಸಿ ಧೈರ್ಯದಿಂದ ಒಳಗೆ ಬಂದು ನಿಂತರು. ತಾಲೀಮ ನಡೆಯಿತು. ತಂದೆ ಕೊಟ್ಟ ಪೆಟ್ಟು ಪ್ರಕಾಶರನ್ನು ನೆಟ್ಟಗೆ ಮಾಡಿತ್ತು. ನಾಟಕದಂದು ಪ್ರಕಾಶರ ಪಾತ್ರ ಜನರ ಮನಸ್ಸನ್ನು ಗೆದ್ದಿತ್ತು. ಪ್ರಕಾಶನ ಸ್ನೇಹಿತರೆಲ್ಲ ಹೊಗಳಿದ್ದೇ ಹೊಗಳಿದ್ದು.

ಚಿಕ್ಕವನಿದ್ದಾಗ ಕುಂಕುಮ ಮುಖಕ್ಕೆ ಹಚ್ಚಿಕೊಂಡಾಗ ನಾಟಕ ಮಡ್ಕೋಂತ ಹೋಗ್ರಿ ಅಂತ ಬೈದಿದ್ದ ತಾಯಿ ರಾಚವ್ವ ಪ್ರಕಾಶನ ಪಾತ್ರ ನೋಡಿ ಮನೆಗೆ ಬಂದು ಪ್ರಕಾಶ ಬರುತ್ತಿದ್ದಂತೆ ಕಣಕದ ಆರತಿ ತಟ್ಟೆ ಹಿಡಿದು ದೃಷ್ಟಿ ತೆಗೆದು ಒಳಗೆ ಕೂಡ್ರಿಸಿ ಶಾವಗಿ ಬಸೆದು ಕೊಟ್ಟು ಊಟ ಮಾಡಿಸಿ ಮುದ್ದು ಮಾಡಿದ್ದರು. ಈ ಸಂತೋಷದ ಅಲೆಗಳ ವಾತಾವರಣ ಜನರ ಮನದಲ್ಲಿರುವಾಗಲೇ ಶಂಕ್ರಯ್ಯನವರ 'ಮದನ ಮೋಹನ' ನಾಟಕ ಬರವಣಿಗೆ ಪ್ರಾರಂಭವಾಯಿತು. ಪ್ರಕಾಶನ ಹತ್ತನೇ ತರಗತಿ ಮುಗಿಯುತ್ತಿದ್ದಂತೆ ತಂದೆ ಶಂಕ್ರಯ್ಯ ಕಂಪನಿ ಮಾಡುವ ನಿರ್ಧಾರಕ್ಕೆ ಬಂದಿದ್ದರು. ಅದರಲ್ಲಿ ಮೋಹನ ಪಾತ್ರದ ಚೋಪಡಿ(ಸ್ಕ್ರಿಪ್ಟ) ಪ್ರಕಾಶರ ಕೈಯಲ್ಲಿಟ್ಟು "ನೀನು ಈ ಪಾತ್ರ ಮಾಡಬೇಕು, ಎರಡು ನಾಟಕದಲ್ಲಿ ಪಾತ್ರ ಮಾಡಿದ್ದೇನೆ ಅಂತ ಕೊಂಬು ಮೂಡಿಸಿಕೊಳ್ಳಬೇಡ. ಇಲ್ಲೇ ನಿನ್ನ ಪಾತ್ರ ಚೊಲೊ ಆಗಿರಬಹುದು. ಈಗ ನಾವು ಕೂಡ್ರಿಸುವ ನಾಟಕ ಕಂಪನಿಗೆ ಜನ ಟಿಕೇಟ ತೊಗೊಂಡು ನಾಟಕ ನೋಡಾಕ ಬರಬೇಕು. ದೊಡ್ಡ-ದೊಡ್ಡ ಪಟ್ಟಣಕ್ಕೆಲ್ಲ ನಾವು ಈ ನಾಟಕ ಆಡ ಬೇಕು. ಎಲ್ಲಾ ನಿನ್ನ ಕೈಯಾಗ ಐತಿ ಮುಳ್ಳುಗ್ಸ್ತಿಯೋ ತೇಲಸ್ತಿಯೋ ನೋಡು" ಅಂತ ಹೇಳಿದರು. ಆತಪ್ಪ ಮಾಡ್ತೀನಿ ಅಂತ ಹೇಳಿದ ಪ್ರಕಾಶರಿಗೆ ಬೆನ್ನು ತಟ್ಟಿದ್ದರು ಶಂಕ್ರಯ್ಯನವರು. ಕೇವಲ ಒಂದು ತಿಂಗಳಲ್ಲೇ ತಂದೆ ಹೇಳಿದಂತೆ ಪಾತ್ರವನ್ನು ಸಿದ್ಧ ಮಾಡಿ ತಾಲೀಮಲ್ಲಿ ತೋರಿಸಿದರು.

ಪ್ರಕಾಶ ಕವನಗಳನ್ನು ಬರೆಯುತ್ತಿರುವದನ್ನು ಗಮನಿಸಿದ ಶಂಕ್ರಯ್ಯನವರು ಬಸವಣ್ಣನ ಜೀವನ ಚರಿತ್ರೆ ಬರುವ ಹಾಗೆ ಒಂದು ಹಾಡು ಬರೆಯ ಬೇಕು ಅಂತ ಪ್ರಕಾಶರಿಗೆ ಹೇಳಿದರು. ಹೇಳಪ್ಪ ಬರಿತೀನಿ ಅಂತ ಪೆನ್ನು ಪೇಪರನ್ನು ಹಿಡಿದು ತಂದೆಯ ಮುಂದೆ ಕುಳಿತರು. "ದಡ್ಡ ನಾನು ಹೇಳಿದ್ದನ್ನ ನೀನು ಬರಿಯುವದಲ್ಲ ನೀನು ನಿನ್ನ ಸ್ವಂತ ಬುದ್ಧಿಯಿಂದ ಬರಿ" ಅಂದಾಗ ಪ್ರಕಾಶರಿಗೆ ದಿಕ್ಕೇ ತೋಚದಂತಾಗಿ ಕಣ್ಣು ಬಿಡುತ್ತ ಕುಳಿತಿದ್ದರು. "ಪಿಳಿ-ಪಿಳಿ ಕಣ್ಣು ಬಿಟ್ಟರೆ ನಡೆಯುವದಿಲ್ಲ, ನೀನು ಬರೆಯಲೇ ಬೇಕು" ಅಂತ ತಂದೆ ಶಂಕ್ರಯ್ಯ ಎದ್ದು ಹೋದರು. "ಇದೇನಪ್ಪ ಫಜಿತಿ ಹಾಡು ಬರಿ ಎಂದರೆ ಹೇಗೆ ಬರೆಯುವದು ಬಸವಣ್ಣ ನೀನೇ ಬುದ್ಧಿ ಕೊಡು" ಅಂತ ಪೆನ್ನು ಪೇಪರ ಮೇಲೆ ಇಟ್ಟಿದ್ದಷ್ಟೇ ಗೊತ್ತು, ಬಸವಣ್ಣನ ಜೀವನ ಚರಿತ್ರೆಯೇ ಇರುವಂತಹ ಸುಮಾರು ಹತ್ತು ನುಡಿಯ ಹಾಡು ರಚಿಸಿದ್ದರು. ೧೯೬೦ರಿಂದ ಕಂಪನಿಯ ಪ್ರಾರಂಭದ ಜೊತೆಗೆ ಪ್ರಕಾಶರ ರಂಗಬದುಕು ಪ್ರಾರಂಭವಾಯಿತು.

# ಸ್ವಂತ ಕಂಪನಿ ಮತ್ತು ಪ್ರಕಾಶ

ಸಂಸ್ಕೃತಿಕ ಹಿರಿಮೆಯನ್ನು ಮೆರಸಿ ನವನವೀನ ರೀತಿಯ ನಾಟಕಗಳನ್ನು ರಂಗಭೂಮಿಗೆ ಪರಿಚಯಿಸಿ ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಘನತೆ ಹೆಚ್ಚಿಸಿದ ಕಂಪನಿ "ಶ್ರೀ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ". ಈ ಕಂಪನಿಯನ್ನು ಹುಟ್ಟು ಹಾಕಿದವರು ಅಭಿಜಾತ ಕಲಾವಿದರಾದ ವೇದಮೂರ್ತಿ ಶಂಕ್ರಯ್ಯ ಕಡಪಟ್ಟಿಯವರು. ೧೯೬೭ ರಲ್ಲಿ "ಹುನ್ನೂರ" ಗ್ರಾಮದ ಹವ್ಯಾಸಿ ಕಲಾವಿದರಾದ ಕೆ.ಆರ್.ಮಹಲಿಂಗಪ್ಪ, ಗಂಗಪ್ಪ ಬಾಣಕಾರ, ವಿರುಪಾಕ್ಷಪ್ಪ ಕತ್ತೆವಾಡಿ, ಮಹಾದೇವ ಬೀಳಗಿ, ದಾನಪ್ಪ ಬಾಣಕರ, ದುಂಡಪ್ಪ ಚಿಂಚಕಂಡಿ, ಈಶ್ವರಪ್ಪ ಹನಗಂಡಿ, ರಾಮಪ್ಪ ಕೋಲಾರ, ರೇವಣಯ್ಯ ಪಾಲಭಾವಿಮಠ ಮುಂತಾದವರನ್ನು ಒಟ್ಟುಗೂಡಿಸಿ ತಾವೇ ರಚಿಸಿದ "ಮದನ ಮೋಹನ" ನಾಟಕವನ್ನು ಹನ್ನೊಂದು ತಿಂಗಳ ವರೆಗೆ ತಾಲೀಮ ಮಾಡಿಸಿ "ರಬಕವಿಯಲ್ಲಿ" ೧೨/೧೦/೧೯೬೭ ರಲ್ಲಿ ನಾಟಕದ ಪ್ರದರ್ಶನ ಮೂಲಕ ಕಂಪನಿ ಪ್ರಾರಂಭಿಸಿದರು. ಪ್ರಕಾಶ ಮತ್ತು ಶಂಕ್ರಯ್ಯ ನವರು ಮುಖ್ಯ ಭೂಮಿಕೆಯಲ್ಲಿದ್ದರು. ಇವರನ್ನು ಬಿಟ್ಟರೆ ರಂಗದ ಮೇಲೆ ಮತ್ತು ರಂಗದ ಹಿಂದೆ ಇದ್ದವರು "ಹುನ್ನೂರ" ಗ್ರಾಮದ ಕಲಾವಿದರು. ಒಂದು ರೀತಿ ಕಡಪಟ್ಟಿ ಕಂಪನಿಯ ತಾಯಿ ಬೇರು ಹುನ್ನೂರ ಎಂದೇ ಹೇಳಬಹುದು. ನಾಟಕ ಉತ್ತಮ ಪ್ರದರ್ಶನ ಕಂಡು, ಜನರ ಮೆಚ್ಚಿಗೆ ಪಡೆದು, ಹಳೇ ವೃತ್ತಿ ಕಂಪನಿಗಳು ಬೆರಗಾಗಿ ನೋಡುವಷ್ಟು ಉಚ್ಛ್ರಾಯ ಸ್ಥಿತಿ ತಲುಪಿತು.

ನಂತರ ಗೋಕಾಕ ಕ್ಯಾಂಪ್ ಮಾಡಲಾಯಿತು. ಗೋಕಾಕ ಕ್ಯಾಂಪ್ ಮಾಡುವಷ್ಟರಲ್ಲಿ ಪ್ರಕಾಶರ ಅಭಿನಯ ಪರಿ ಪಕ್ವವಾಗಿತ್ತು. "ಮದನ ಮೋಹನ" ನಾಟಕದಲ್ಲಿ ಪ್ರಕಾಶರು ಅಭಿನಯಿಸುತ್ತಿದ್ದ "ಮೋಹನ" ಪಾತ್ರ ಊರ ಜನತೆಯನ್ನೇ ಬೆರಗುಗೊಳಿಸಿತ್ತು. ಚಿಕ್ಕವನಿದ್ದಾಗ ಕಲಿತ ಸಂಗೀತ ವಿದ್ಯೆ ಪ್ರಕಾಶರ ಕೈ ಹಿಡಿದಿತ್ತು. ತಂದೆಯವರಿಂದ ದೊರೆತ ಕಲಾ ಸಂಸ್ಕಾರ ಪ್ರಕಾಶರ ಬೆಳವಣಿಗೆಗೆ ಸಹಾಯವಾಗಿತ್ತು. ನಾಟಕಗಳಿಗೆ ಬೇಕಾದ ಹಾಡುಗಳನ್ನು ಪ್ರಕಾಶರೇ ರಚಿಸಿ ಹಾಡುತ್ತಿದ್ದರು. ಚಿಕ್ಕವನಿದ್ದಾಗ ಗೊಗ್ಗರ ಧ್ವನಿಯವನೆಂದು ಅವಹೇಳನಕ್ಕೆ ಗುರಿಯಾಗಿದ್ದ ಪ್ರಕಾಶರ ಧ್ವನಿಯೇ ಗೋಕಾಕದಲ್ಲಿ ವಿಶೇಷ ಕಂಠವೆಂಬ ಹೊಗಳಿಕೆಗೆ ಪಾತ್ರವಾಗಿತ್ತು. ಕಂಠ ಪಾಠ ಮಾಡಿದ ಮಾತುಗಳನ್ನು ಮೈಕ ಮುಂದೆ ನಿಂತಲ್ಲಿಯೇ ನಿಂತು ಭಾವಪೂರ್ಣವಾಗಿ ಒಪ್ಪಿಸುತ್ತ, ಶೃಂಗಾರ ಗೀತೆಗಳನ್ನು ಕೂಡ ಹಾವಭಾವದಲ್ಲಿಯೇ ಮುಗಿಸಿ ಬಿಡುವ ರಂಗಪಾರಂಪರಿಕ ಚೌಕಟ್ಟಿನಲ್ಲಿಯೇ ನಡೆಯುತ್ತಿದ್ದ ವೃತ್ತಿ ರಂಗಭೂಮಿಯ ನಾಟಕಗಳನ್ನು ನೋಡುತ್ತಿದ್ದ ಪ್ರೇಕ್ಷಕರಿಗೆ 'ಮದನ ಮೋಹನ' ನಾಟಕದ ಪ್ರಕಾಶರ 'ಮೋಹನ' ಪಾತ್ರದ ವೈವಿದ್ಯ ಅಭಿನಯ, ವೈವಿಧ್ಯ ವಸ್ತ್ರ ವಿನ್ಯಾಸ, ಸಿನೆಮಾ

ಮಾದರಿಯ ಹಾಡು ನೃತ್ಯಗಳು ಹೊಸ ಸಂಭ್ರಮವನ್ನೇ ಕಣ್ತುಂಬಿಸಿತು. ಕಾಲ ಕಾಲಕ್ಕೆ ಬದಲಾಗುವ ಆಧುನಿಕ ಜಗತ್ತಿಗೆ ಕಡಪಟ್ಟಿ ಕಂಪನಿಯ ನಾಟಕಗಳು ಅತ್ಯಂತ ಹತ್ತಿರವಾದ ನಾಟಕಗಳಾದವು. ಯಾವುದೇ ಕ್ಯಾಂಪ ಮಾಡಿದರೂ ಪ್ರಾರಂಭಿಸುವ ಮೊದಲ ನಾಟಕವೇ 'ಮದನ ಮೋಹನ' ಆಗಿತ್ತು. ಪ್ರಥಮ ಬಾರಿಗೆ ಹುಬ್ಬಳ್ಳಿ ಕ್ಯಾಂಪ ಮಾಡಿದಾಗ ಮದನ ಮೋಹನ ನಾಟಕ ಒಂದೂವರೆ ವರ್ಷ ಯಶಸ್ವಿ ಪ್ರಯೋಗಳನ್ನು ಕಂಡು ದಾಖಲೆ ನಿರ್ಮಿಸಿತು. ಕಂಪನಿಯ ಮತ್ತೊಂದು ಮುಖ್ಯ ನಾಟಕವಾದ 'ಸಂಗಮ' ನಾಟಕ ಕೂಡ ಪ್ರಕಾಶರನ್ನು ಅತ್ಯಂತ ಉತ್ತಂಗದ ಸ್ಥಿತಿಗೆ ತಲುಪಿಸಿತು. ಈ ನಾಟಕದಲ್ಲಿ ಪ್ರಕಾಶರು ರಾಜೇಶನ ಪಾತ್ರ ಅಭಿನಯಿಸುತ್ತಿದ್ದರು. ಈ ನಾಟಕದಲ್ಲಿ ಮಲತಾಯಿ ಗಂಗಮ್ಮ ಮಲಮಗನಾದ ರಾಜೇಶನಿಗೆ ಕೈಯಿಗೆ ಬರಿ ಕೊಡುವ ಒಂದು ಸನ್ನಿವೇಶ. ಆ ಸನ್ನಿವೇಶದಲ್ಲಿ ಪ್ರಕಾಶರ ಅಭಿನಯ ಎಂತಹ ಕಲ್ಲೆದೆಯವರನ್ನು ಕಣ್ಣೀರ ಹಾಕುವಂತೆ ಮಾಡುತ್ತಿತ್ತು. ಬಾಗಲಕೋಟೆಯ ಕ್ಯಾಂಪಿದ್ದಾಗ ಸಂಗಮ ನಾಟಕ ನೋಡಿದ ಒಂದು ಹುಡುಗಿ ಪ್ರಕಾಶರಿಗೆ ಪತ್ರ ಬರೆದಿದ್ದಳು "ನಾನು ಹತ್ತನೇ ತರಗತಿಯವರೆಗೆ ಓದಿದ್ದೇನೆ, ನನಗೂ ಮಲತಾಯಿ ಇದ್ದಾಳೆ, ನಾನು ರೊಟ್ಟಿ ಮಾಡುವಾಗ 'ಇಷ್ಟ ದಪ್ಪನಾ ರೊಟ್ಟಿ ಮಾಡುದು, ಇಂಥಾ ರೊಟ್ಟಿ ಯಾರ ತಿನಬೇಕು ಇವನ್ನೇನ ದನಕ್ಕ ಹಾಕಬೇಕ' ಅಂತ ನನ್ನ ಕೈ ಜಗ್ಗಿ ಕಾಯಿದ ತವಾದ ಮೇಲೆ ಇಡಿಸಿದ್ದಳು. ನನ್ನ ಅಂಗೈಯಲ್ಲ ಸುಟ್ಟಿತ್ತು, ನನ್ನ ಜೀವನವೇ ನಿಮ್ಮ ನಾಟಕದಲ್ಲಿದೆ. ನಾನು ಸಾಯಬೇಕೆಂದು ತೀರ್ಮಾನಿಸಿದ್ದೆ, ನಿಮ್ಮ ನಾಟಕ ನೋಡಿದ ಮೇಲೆ, ನಾನೂ ಬದುಕಿ ತೋರಿಸಬೇಕು ಎಂದು ತೀರ್ಮಾನಿಸಿದ್ದೇನೆ. ನನ್ನ ಜೀವ ಉಳಿಸಿದ ನಿಮಗೆ ಕೃತಜ್ಞತೆ ಸಲ್ಲಿಸಲು 'ನನ್ನ ರಕ್ತದಿಂದಲೇ' ಪತ್ರ ಬರೆದಿದ್ದೇನೆ" ಎಂದು ಬರೆದ ಪತ್ರ ಓದಿದ ಪ್ರಕಾಶರು ಅದೆಷ್ಟೋ ದಿನಗಳವರೆಗೆ ಪತ್ರವನ್ನು ಕಾಯ್ದಿಟ್ಟಿದ್ದರು. ನಾಟಕದಿಂದ ಸಮಾಜದಲ್ಲಿ ಬದಲಾವಣೆ ತರುವದು ಸಾಧ್ಯ ಎಂದರೆ ಇದೇ ಅಲ್ಲವೇ? ಪ್ರಕಾಶರ ಅಭಿನಯದ ಮೋಡಿಯೇ ಹಾಗಿತ್ತೋ ಏನೋ, ನಾಟಕ ರಂಗದಲ್ಲಿ ಕೋಟ್ಯಾಂತರ ಪ್ರೇಕ್ಷಕರ ಹೃದಯಗಳಿಗೆ ಲಗ್ಗೆ ಇಟ್ಟು ಅಭಿಮಾನಿಗಳನ್ನು ಪಡೆದಿದ್ದರು. ಕಂಪನಿಯ ಉಳಿದ ನಾಟಕಗಳಾದ 'ಬಹದ್ದೂರ ಮಗ', 'ಬೆಂಗಳೂರು ಬಾಬಾ' ನಾಟಕಗಳು ಕೂಡದಗ, ಕುಕುನೂರ, ಬಾಗಲಕೋಟ, ಕೊಪ್ಪಳ, ಹುಬ್ಬಳ್ಳಿ, ಸವದತ್ತಿ, ಮಾನವಿ, ಸಿಂಧನೂರ, ರಾಯಚೂರ, ಭದ್ರಾವತಿ ಮುಂತಾದ ಪ್ರತಿಯೊಂದು ಕ್ಯಾಂಪಿಗೂ ಅದ್ಭುತ ಪ್ರತಿಕ್ರಿಯೆ ಪಡೆದು ಯಶಸ್ವಿಯಾದವು.

ಶಂಕ್ರಯ್ಯನವರು ಬರೆದ ನಾಟಕಗಳು ಉತ್ತರ ಕರ್ನಾಟಕದಲ್ಲೆಲ್ಲ ಒಂದು ಸುತ್ತು ಮುಗಿಯುತ್ತಿದ್ದಂತೆ ಪ್ರಕಾಶರು ರಚಿಸಿದ ಕೃತಿಗಳು ಪ್ರಾರಂಭವಾದವು. ಪ್ರೇಕ್ಷಕರನ್ನು ದಂಗು ಬಡಿಸಿ ಗುಂಗು ಹಿಡಿಸುವ ಪ್ರಕಾಶರ ಅಭಿನಯ ಜೊತೆಗೆ ಕಣ್ಣು ಕೋರೈಸುವ ಮೋಹಕ ನಟಿ ಸುನಂದಾ, ಗಾಯನ ಶ್ರೋತೃಗಳನ್ನು ಮಂತ್ರ ಮುಗ್ಧರನ್ನಾಗಿಸುವ ಮೋಹಕ ರಾಗಗಳ ಹಾಡುಗಳು, ಶಂಕ್ರಯ್ಯನವರ ಹಾಸ್ಯ ಚಟಾಕಿಗಳು, ಅತ್ಯಂತ

ಪ್ರಬುದ್ಧತೆಯಿಂದ ಅಭಿನಯಿಸುವ ಸಹಕಲಾವಿದರು, ಕೌಟುಂಬಿಕ ಕಥೆಗಳು ಮತ್ತೊಂದು ವಿಶೇಷತೆ ಎಂದರೆ ಪ್ರೇಕ್ಷಕರ ಅಪೇಕ್ಷೆಗೆ ತಕ್ಕಂತೆ ನಾಟಕದ ಕೊನೆಗೆ ಹಾಡುವ ಚಲನಚಿತ್ರ ಗೀತೆಗಳು. ಒಬ್ಬ ಕಲಾರಸಿಕನಿಗೆ ಏನು ಬೇಕೊ ಎಲ್ಲವೂ ಸಮೃದ್ಧವಾಗಿ ಪ್ರಕಾಶರ ನಾಟಕಗಳಲ್ಲಿ ದೊರೆಯುತ್ತಿದ್ದವು. ಹೀಗಾಗಿ ಪ್ರಕಾಶ ಕಡಪಟ್ಟಿ ನಾಟಕ ಕಂಪನಿ ಊರಿಗೆ ಬರುತ್ತದೆಂದರೆ ಸಿನೆಮಾ ಥೇಟರ ಮಾಲಿಕರಿಗೆ ಒಂದು ಕುತ್ತೇ ಬಂದಂತಾಗುತ್ತಿತ್ತು. ಕ್ಯಾಂಪಾದ ಒಂದು ವಾರದಲ್ಲೇ ಸಿನೆಮಾ ಥೇಟರಗಳು ಸಂಪೂರ್ಣ ಖಾಲಿ ಬಿಳುತ್ತಿದ್ದವು. ಶ್ರೀ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ ಕಂಪನಿ ನಾಟಕಗಳು ಆ ಮಟ್ಟಕ್ಕೆ ಪ್ರಭಾವಿ ನಾಟಕಗಳಾಗಿದ್ದವು. ಕೆರೂರ ಕ್ಯಾಂಪಲ್ಲಿ ಸಿನೆಮಾ ಬಂದಾಗಿದ್ದೂ ಉಂಟು. ಸಿನೆಮಾ ಥೇಟರ ಮಾಲಿಕರು, ಗೇಟ ಹುಡುಗರು ಸಿನೆಮಾ ಬಂದಾದುದ್ದರ ಬಗ್ಗೆ ಯೋಚಿಸದೆ ನಮಗೆ ನಾಟಕ ನೋಡಲು ಸಮಯ ದೊರೆಯಿತಲ್ಲ ಸಾಕು ಅಂತ ಓಡಿ ಬಂದು ನಾಟಕ ನೋಡಲು ಕುಳಿತುಕೊಳ್ಳುತ್ತಿದ್ದರು. ಇಂತಹ ಘಟನೆಗಳು ಪ್ರತಿ ಕ್ಯಾಂಪುಗಳಲ್ಲಿ ಮರುಕಳಿಸುತ್ತಲೇ ಇದ್ದವು.

ಪ್ರಕಾಶರವರ ಮದುವೆಯ ನಂತರ "ಗಲಗಲಿ" ಕ್ಯಾಂಪ ಮಾಡಿದಾಗ, ಆಗಲೇ ಪ್ರಕಾಶ ಹಾಗು ಸುನಂದ ಅವರ ಜೋಡಿ ಪ್ರಸಿದ್ಧವಾಗಿತ್ತು. ಪ್ರಕಾಶವರೇ ಬರೆದ "ಚಿನ್ನದ ಗೊಂಬೆ" ನಾಟಕ ಹಾಕಿದಾಗ ಕಥಾನಾಯಕ ಸೋಮಶೇಖರನ ಪಾತ್ರವನ್ನು ಪ್ರಕಾಶ ಹಾಗೂ ಶಾರದಾಳ ಪಾತ್ರವನ್ನು ಪತ್ನಿ ಸುನಂದಾ ನಿರ್ವಹಿಸುತ್ತಿದ್ದರು. ಗುಣವಂತ ಹಾಗೂ ಶ್ರೀಮಂತ ಮನೆತನದ ಏಕಮಾತ್ರ ಪುತ್ರನಾದ ಸೋಮಶೇಖರನ ಪಾತ್ರಕ್ಕೆ ಪ್ರಕಾಶರು, ಹಿಂದಿ ಚಲನಚಿತ್ರ ನಟ ರಾಜೇಶಖನ್ನರ ಹೇರಸ್ಟೈಲ, ಡ್ರೆಸ್, ನಡಿಗೆ ಇಂದ ಹಿಡಿದು ಅನುಕರಣೆ ಮಾಡುತ್ತಿದ್ದರು. ಪ್ರಕಾಶ ರಂಗದ ಮೇಲೆ ಬಂದರೆ ಸಾಕು ಯುವಕರು ರಾಜೇಶಖನ್ನ ಎಂದು ಕೂಗುತ್ತಿದ್ದರು. ಪ್ರತಿದಿನವೂ ಥೇಟರ ಫುಲ್ಲಾಗುವ ಕಾರಣ ನಾಟಕದ ಕಾಲು ಭಾಗದ ನಂತರ ಗೇಟ ಖುಲ್ಲಾ ಬಿಡಲಾಗುತ್ತಿತ್ತು. ನಾಟಕದ ಮಧ್ಯಂತರಕ್ಕೆ ಸೊಮಶೇಖರ ಹಾಗೂ ಶಾರದಾ ಪಾತ್ರಗಳ ಜೋಡಿ ಹಾಡು ಇರುತ್ತಿತ್ತು. ಆ ಹಾಡು "ಚಲುವೆಯ ಅಂದದ ಮೊಗಕೆ ಕಣ್ಣೇ ಭೂಷಣ, ನಲಿಯುತ ಬಾಳುವ ಮನೆಗೆ ಹೆಣ್ಣೇ ಕಾರಣ". ಕೇವಲ ಈ ಹಾಡು ವೀಕ್ಷಿಸುವದಕೋಸ್ಕರ ಥೇಟರ ಗೇಟ ಖುಲ್ಲಾ ಬಿಟ್ಟಿದ್ದರೂ, ಪ್ರತಿ ದಿನ ೩೦-೪೦ ಜನರಾದರೂ ನಾಟಕದ ಮಧ್ಯಂತರದಲ್ಲಿ ಟಿಕೀಟ ಖರೀದಿಸಿ ಆ ಹಾಡು ನೋಡಿ ಹೊರಟು ಹೋಗುತ್ತಿದ್ದರು. ಗಲಗಲಿಯ ಪ್ರೇಕ್ಷಕರು ಅದೆಷ್ಟು ಉತ್ತಮರು ಅನ್ನುವದರ ಜೊತೆಗೆ ಪ್ರಕಾಶರ ಹಾಡು ಮತ್ತು ನೃತ್ಯಾಭಿನಯ ಅದೆಷ್ಟು ಅವರ ಮನಸೆಳೆದಿತ್ತು ಎನ್ನುವುದು ಮುಖ್ಯ. ಅದೇ ಚಿನ್ನದ ಗೊಂಬೆ ನಾಟಕದ ೨೫ನೇ ಪ್ರಯೋಗದ ನಿಮಿತ್ತ ಊರಲ್ಲಿ, ಪ್ರಕಾಶವರನ್ನು ಮೆರವಣಿಗೆ ಮಾಡುವ ಸಮಯದಲ್ಲಿ ಅಭಿಮಾನಿಗಳು "ಕಲ್ಲು ಸಕ್ಕರೆಯ" ಪುಟ್ಟಿಗಳನ್ನು ತಂದು ಪ್ರಕಾಶರ ತಲೆಯ ಮೇಲೆ ಸುರಿದು ತಮ್ಮ ಸಂತಸವನ್ನು ವ್ಯಕ್ತಪಡಿಸಿದ್ದರು. ಕಲಾವಿದರಿಗೆ

ಪ್ರೇಕ್ಷಕರೇ ದೇವರುಗಳು ಎನ್ನುವ ಮಾತನ್ನು ಸಾಬಿತು ಪಡಿಸಿತ್ತು ಗಲಗಲಿ ಕ್ಯಾಂಪ.

ಕಲಾದಗಿ ಕ್ಯಾಂಪ ಮಾಡಿದಾಗ, ಹಳ್ಳಿಗಳಲ್ಲಿ ಆಗೆಲ್ಲ ಎತ್ತಿನ ಗಾಡಿಗಳೇ ಜಾಸ್ತಿ, ಕುಟುಂಬ ಸಮೇತ ಬಂಡಿ ಏರಿಕೊಂಡು ಜಾತ್ರೆಗೆ ಬಂದಂತೆ ಪ್ರಕಾಶರ ನಾಟಕಗಳಿಗೆ ಸಾಲು ಸಾಲಾಗಿ ಬರುವ ಎತ್ತಿನ ಗಾಡಿಗಳನ್ನು ನಿಲ್ಲಿಸಲು ಸ್ಥಳಗಳು ಸಾಲದೇ ಎಷ್ಟೋ ಸಾರಿ ಜಗಳಗಳಾಗಿದ್ದುಂಟು. 'ಸತಿ ಸಂಸಾರದ ಜ್ಯೋತಿ' ನಾಟಕವಂತೂ ಬಹು ಜನಪ್ರಿಯವಾದ ನಾಟಕವಾಗಿತ್ತು. ಈ ನಾಟಕದ ಮಧ್ಯಂತರದಿಂದ ಜಗದೀಶ ಹುಚ್ಚನಾಗುತ್ತಾನೆ ಆ ಪಾತ್ರವನ್ನು ಪ್ರಕಾಶ ಕಡಪಟ್ಟಿಯವರೇ ನಿರ್ವಹಿಸುತ್ತಿದ್ದರು. ಹೆಂಡತಿಯ ಮಾತು ಕೇಳಿ ಅಣ್ಣ ರುದ್ರೇಶ ಜಗದೀಶನಿಗೆ ಛಾಟಿಯಿಂದ ಹೊಡೆಯುತ್ತಾನೆ ಆ ಸಂದರ್ಭಕ್ಕೆ ತಕ್ಕಂತೆ "ಮೂಗನ ಕಾಡಿದರೇನು, ಸವಿಮಾತನು ಆಡುವನೇನು, ಕೋಪಿಸಲು, ದಂಡಿಸಲು ಮೌನವ ಮೀರುವನೇನು" ಎಂದು ಅಭಿನಯಪೂರ್ವಕವಾಗಿ ಹಾಡುವ ಈ ಸನ್ನಿವೇಶಕ್ಕೆ ಮಹಿಳೆಯರು ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಪ್ರಕಾಶ ಒಂದು ರೀತಿ ಮಹಿಳಾ ಪ್ರೇಕ್ಷಕರ ನೆಚ್ಚಿನ ಕಲಾವಿದರಾಗಿದ್ದರು. ಇದೆ ಸತಿ ಸಂಸಾರದ ಜ್ಯೋತಿ ನಾಟಕದ ಪ್ರಕಾಶರ 'ಜಗದೀಶ'ನ ಪಾತ್ರದ ಬಗ್ಗೆ ಹೇಳುವದಾದರೆ ನಾಟಕದ ಶುರುವಿನಿಂದ ಮಧ್ಯಂತರದವರೆಗೆ ಅತ್ಯಂತ ತೂಕ ಬದ್ಧವಾದ ಸಂಭಾಷಣೆ, ಗಂಭೀರ ಅಭಿನಯದಿಂದ ಮುನ್ನಡೆಯುವ ಜಗದೀಶನ ಪಾತ್ರ ನಾಟಕದ ಮಧ್ಯಂತರದಿಂದ ಹುಚ್ಚನಾಗುತ್ತಾನೆ, ಆ ಪಾತ್ರವನ್ನು ಅತ್ಯಂತ ವಿಭಿನ್ನವಾಗಿ ಅಭಿನಯಿಸುತ್ತಿದ್ದ ಪ್ರಕಾಶರ ಅಭಿನಯವನ್ನು ಕಂಡ ಒಬ್ಬ ಪ್ರೇಕ್ಷಕ ಎದ್ದು ನಿಂತು "ನೀವು ಹುಚ್ಚನ ಪಾತ್ರಕ್ಕೆ ಬೇರೆ ಯಾರನ್ನೋ ಹಿಡಿದುಕೊಂಡು ಬಂದ್ದಿದ್ದೀರಿ" ಅಂತ ಜಗಳ ತೆಗೆದಾಗ ಹತ್ತು ಹನ್ನೆರಡು ಬಾರಿ ನಾಟಕ ನೋಡಿದ ಪಕ್ಕದಲ್ಲಿದ್ದ ಪ್ರೇಕ್ಷಕರು ಪ್ರಕಾಶರೇ ಆ ಪಾತ್ರವನ್ನು ಮಾಡುತ್ತಿದ್ದಾರೆ. ನಾಟಕವನ್ನಾದರೂ ಪೂರ್ತಿ ನೋಡ್ರಿ ಅಂತ ಸಮಾಧಾನ ಪಡೆಸಿದ್ದಾರೆ. ಗುರುಗುಡತ್ತಲೇ ಕುಳಿತ ಆ ವ್ಯಕ್ತಿ ನಾಟಕದ ಕೊನೆಗೆ ಒಳಗೆ ಬಂದು ಕ್ಷಮೆ ಕೇಳಿ ೨೦ ರೂಪಾಯಿ ಆಹೇರಿ (ಕಾಣಿಕೆ) ನೀಡಿ ಹೋಗಿದ್ದಾರೆ. "ಕಲಾವಿದ ಪರಕಾಯ ಪ್ರವೇಶ ಮಾಡಬೇಕು. ಅಂದಾಗ ಮಾತ್ರ ಅವನು ನಿಜವಾದ ಕಲಾವಿದ ಅನ್ನುತ್ತಾರೆ" ಆ ಮಾತಿಗೆ ಪ್ರಕಾಶರ ಈ ಉದಾಹರಣೆ ಸಾಕಲ್ಲವೇ?

ಸಂಪೂರ್ಣ ಗೆಲುವಿನ ಪಯಣದಲ್ಲಿದ್ದ ಪ್ರಕಾಶರು ಬಾಗಲಕೋಟ ಕ್ಯಾಂಪ ಮಾಡಿದಾಗ, 'ಮುತ್ತೈದೆಗೆ ಕುತ್ತು ಐದು' ನಾಟಕವನ್ನು ಬರೆದು ಪ್ರಪ್ರಥಮವಾಗಿ ಬಾಗಲಕೋಟೆಯಲ್ಲಿ ಪ್ರಯೋಗಿಸಲಾಯಿತು. ಯಾವುದೇ ನಾಟಕ ಕಂಪನಿಗೂ ಬುಕ್ಕಿಂಗ ಆಫಿಸ ಅಂತ ಒಂದೇ ಮಾಡಲಾಗುತ್ತದೆ. ನಾಟಕ ವೀಕ್ಷಿಸಲು ಸಾಗರದಂತೆ ಬರುವ ಜನ ಸಮೂಹವನ್ನು ಒಂದೇ ಒಂದು ಬುಕ್ಕಿಂಗ ಆಫಿಸನಿಂದ ಹತೋಟಿಗೆ ತರಲು ಸಾಧ್ಯವಾಗದೇ ಮೂರು ಬುಕ್ಕಿಂಗ ಆಫಿಸುಗಳನ್ನು ತೆರಯಲಾಯಿತು. ಇದೂ ಒಂದು ರೀತಿ ಪ್ರಕಾಶರ ನಾಟಕದ ದಾಖಲೆ ಎನ್ನಬಹುದು. ಈ ನಾಟಕ ಆದ ನಂತರ ಸುಮಾರು ನಾಟಕಗಳಿಗೆ ಹೆಸಾರಾಂತ ಚಲನಚಿತ್ರ ಕಲಾವಿದರಾದ ಶ್ರೀನಾಥ,

ವಜ್ರಮುನಿ, ತೂಗದೀಪ ಶ್ರೀನಿವಾಸ, ಕೆ.ಎಸ.ಅಶ್ವಥ್, ಮಾನು, ಬಿ.ವಿ.ರಾಧಾ, ಉದಯಕುಮಾರ, ಶ್ರೀಲಲಿತ, ಶಕ್ತಿಪ್ರಸಾದ, ಸುಂದರಕೃಷ್ಣ ಅರಸು, ದಿನೇಶ, ಧೀರೇಂದ್ರ ಗೋಪಾಲ ಮುಂತಾದ ಕಲಾವಿದರನ್ನು ಈ ಕ್ಯಾಂಪಲ್ಲಿ ಕರೆಸಲಾಗಿತ್ತು. ಅನೇಕ ಸಿನೆಮಾ ಕಲಾವಿದರನ್ನು ರಂಗಭೂಮಿಗೆ ಕರಿಸಿದ ಶ್ರೇಯಸ್ಸು ಕಡಪಟ್ಟಿ ಕಂಪನಿಗೆ ಸೇರುತ್ತದೆ.

೧೯೮೦ರ ಸುಮಾರು ಹುಬ್ಬಳ್ಳಿಯ ಜೋಶಿಯವರ "ಚಿತ್ರಲತಾ" ಮಾಸಿಕ ತುಂಬಾ ಪ್ರಚಲಿತದಲ್ಲಿದ್ದ ಮಾಸಿಕವಾಗಿತ್ತು. ಇದು ಅಪ್ಪಟ ಚಲನಚಿತ್ರ ಮಾಧ್ಯಮದ ಮಾಸಿಕವಾಗಿದ್ದರಿಂದ ಮುಖಪುಟಕ್ಕೆ ಚಲನಚಿತ್ರ ತಾರೆಯರ ಭಾವಚಿತ್ರವನ್ನು ಮಾತ್ರ ಹಾಕಲಾಗುತ್ತಿತ್ತು. ಯಾವ ಚಲನಚಿತ್ರಗಳಲ್ಲೂ ಅಭಿನಯಿಸದ, ಅಪ್ಪಟ ರಂಗಭೂಮಿಯ ಕಲಾವಿದನಾದ ಪ್ರಕಾಶರ ಭಾವಚಿತ್ರವನ್ನು ಚಿತ್ರಲತಾ ಮುಖಪುಟಕ್ಕೆ ಹಾಕಿದ್ದು ಪ್ರಕಾಶರ ಪ್ರತಿಭೆಯಿಂದ ರಂಗಭೂಮಿಗೆ ದೊರೆತ ಗೌರವವೆನ್ನಬಹುದು. ಇದೂ ಒಂದು ಪ್ರಕಾಶರ ವಿಭಿನ್ನ ದಾಖಲೆ ಎನ್ನಬಹುದು.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಬಂಗಾರಪ್ಪನವರು ಚಿನ್ನದ ಗೊಂಬೆ ನಾಟಕಕ್ಕೆ ಅತಿಥಿಗಳಾಗಿ ಅಗಮಿಸಿದಾಗ ಅವರು ಹೇಳಿದ ಮಾತು, "ನನಗೆ ಮೊದಲಿನಿಂದಲೂ ನಾಟಕಗಳೆಂದರೆ ತುಂಬಾ ಅಭಿಮಾನ. ಈ ಚಿನ್ನದ ಗೊಂಬೆ ನಾಟಕ ಹೊಗಳಿಕೆಗೆ ಮೀರಿದ ನಾಟಕ. ಮನಸ್ಸಿಗೆ ಅಹ್ಲಾದ ಕೊಡುವ, ಸಮಾಜಕ್ಕೆ ಸಂದೇಶ ಕೊಡುವ ನಾಟಕವಿದು. ಪ್ರಕಾಶ ಕಡಪಟ್ಟಿಯವರು ಕಥೆಯನ್ನು ತುಂಬಾ ಚನ್ನಾಗಿ ಹೆಣೆದಿದ್ದಾರೆ. ಇಂತಹ ಉನ್ನತ ಮಟ್ಟದ ನಾಟಕಕ್ಕೆ ನನ್ನ ಅಲ್ಪ ಕಾಣಿಕೆ" ಅಂತ ೨೫,೦೦೦ ರುಪಾಯಿಗಳನ್ನು ಕಂಪನಿಗೆ ಕೊಟ್ಟಿದ್ದರು. ಸುಭಾಷ್ ಭರಣಿ ಐ.ಪಿ.ಎಸ್.ರವರು ಅಧಿಕಾರಿಗಳಾಗಿ ಹುಬ್ಬಳ್ಳಿಯಲ್ಲಿದ್ದಾಗಲೇ ಕಡಪಟ್ಟಿಯವರ ಕ್ಯಾಂಪಾಗಿತ್ತು, ಸುಮಾರು ನಾಲ್ಕೈದು ಬಾರಿ ನಾಟಕಗಳಿಗೆ ಅತಿಥಿಯಾಗಿ ಆಗಮಿಸಿದ್ದರು. ಅವರು ಆಗ ಹೇಳಿದ್ದು, "ಪ್ರಕಾಶ ನಾನು ನಿಮ್ಮ ನಾಟಕಗಳ ಅಭಿಮಾನಿಯಾಗಿ ಬಿಟ್ಟಿದ್ದೇನೆ ನಿಮ್ಮ ಹಾಗು ನಿಮ್ಮ ಪತ್ನಿಯ ಅಭಿನಯದ ದೃಶ್ಯಗಳು ನಾನು ಡ್ಯೂಟಿಯಲ್ಲಿದ್ದಾಗಲೂ ಮರುಕಳಿಸುತ್ತವೆ. ರಂಗಭೂಮಿಯಲ್ಲಿ ನಿಮ್ಮದು ಅಪರೂಪದ ಜೋಡಿ" ಅಂತ ಎಷ್ಟೋ ಸಾರಿ ನಾಟಕ ನೋಡಲು ಬರುತ್ತಿದ್ದರು. ಇವೆಲ್ಲ ಪ್ರಕಾಶರ ವರ್ಣ ರಂಜಿತ ವ್ಯಕ್ತಿತ್ವವನ್ನು ಎತ್ತಿ ತೋರಿಸುವ ನಿದರ್ಶನಗಳು.

ಶಂಕ್ರಯ್ಯನವರ ಕುಟುಂಬವೆಲ್ಲ ಕಂಪನಿಯಲ್ಲೇ ಇದ್ದ ಕಾರಣ ಬ್ರ್ಯಾಂಚ ಕಂಪನಿ ಕೂಡ ಪ್ರಾರಂಭಿಸಿದ್ದರು. ಮುಖ್ಯ ಕಂಪನಿಯ ಪ್ರಾರಂಭದ ಹತ್ತು ವರ್ಷಕ್ಕೆ "ಶಾರದಾ ಪ್ರಸಾದ ನಾಟ್ಯ ಸಂಘ ಕಡಪಟ್ಟಿ" ಎಂಬ ಹೆಸರಲ್ಲಿ ಬ್ರ್ಯಾಂಚ ಪ್ರಾರಂಭಿಸಿದರು. ಬ್ರ್ಯಾಂಚ ಕಂಪನಿಯ ಸಂಚಾಲಕರಾಗಿ ರಾಜಣ್ಣ ಕಡಪಟ್ಟಿ ಇದ್ದರು. ಪ್ರಕಾಶವರು ಅಭಿನಯಿಸುತ್ತಿದ್ದ ಪಾತ್ರಗಳನ್ನು ಅಶೋಕ ಕಡಪಟ್ಟಿ ಅವರು ಈ ಕಂಪನಿಯಲ್ಲಿ ಮಾಡುತ್ತಿದ್ದರು. ಸಾವಿತ್ರಮ್ಮ, ಶಿವಮೊಗ್ಗ ರತ್ನ, ಮನೋರಮ

ಮುಂತಾದ ಹೆಸಾರಾಂತ ಕಲಾವಿದರಿಂದೊಡಗೂಡಿದ ಬ್ರ್ಯಾಂಚ ಕಂಪನಿ ಯಾವ ತೊಂದರೆಗಳಿಲ್ಲದೆ ಉತ್ತಮ ಪ್ರತಿಕ್ರಿಯೆ ಪಡೆಯಿತು. ಸೂಳೆಭಾವಿ, ದುದನಿ, ಅಫಜಲಪುರ, ಹಂಸಭಾವಿ, ದಾವಣಗೇರಿ, ಅದರಗುಂಚಿ, ರಾಮಪುರ, ಗೊಡಚಿ ಜಾತ್ರೆ, ಸುಮಾರು ಕ್ಯಾಂಪುಗಳನ್ನು ಮಾಡುತ್ತ ಜನಮೆಚ್ಚುಗೆಯನ್ನು ಪಡೆಯುತ್ತ ಮುಂದೆ ಸಾಗಿತು.

ಪ್ರಕಾಶರಿದ್ದ ಮುಖ್ಯ ಕಂಪನಿ ಮೂರನೇ ಬಾರಿ ಹುಬ್ಬಳ್ಳಿಗೆ ಆಗಮಿಸಿತ್ತು. ಹುಬ್ಬಳ್ಳಿಯ ರೈಲ್ವೆ ಸ್ಟೇಶನ ಹತ್ತಿರ ಇರುವ ಗಜಾನನ ಥೇಟರಲ್ಲಿ ನಾಟಕಗಳು ಪ್ರಾರಂಭಗೊಂಡವು. ಕಲೆಕ್ಷನ ಕೂಡ ಉತ್ತಮ ರೀತಿಯಲ್ಲೇ ಇತ್ತು. ಅದೇ ಸಮಯದಲ್ಲಿ ಹುಬ್ಬಳ್ಳಿಯ ಮತ್ತೊಂದು ನಾಟಕ ಥೇಟರಾದ ಶಕ್ತಿ ಥೇಟರಲ್ಲಿ ಹವ್ಯಾಸಿ ಕಲಾವಿದರೆಲ್ಲ ಸೇರಿ 'ಬಸ್ ಕಂಡಕ್ಟರ' ನಾಟಕ ಪ್ರಾರಂಭಿಸಿದರು. ತನುಜಾ ಬೆಂಗಳೂರು ಹಾಸ್ಯ ಪಾತ್ರ ವಹಿಸುತ್ತಿದ್ದರು. ಹಾಸ್ಯ ಪ್ರಧಾನ ನಾಟಕವಾದುದರಿಂದ ಜನತೆ ಬಹುಬೇಗ ಆ ನಾಟಕದತ್ತ ವಾಲಿದರು. ಕಡಪಟ್ಟಿ ಕಂಪನಿಯ ಅತ್ಯಂತ ಮಹತ್ವಾಕಾಂಕ್ಷೆಯ ನಾಟಕವಾದ ಎಲ್ಲೆಡೆಯು ಜಯಭೇರಿ ಹೊಡೆದ "ಮುತ್ತೈದೆಗೆ ಕುತ್ತು ಐದು" ನಾಟಕ ಬಸ್ ಕಂಡಕ್ಟರ ನಾಟಕದ ಮುಂದೆ ನೆಲ ಕಚ್ಚಿತು. ಶಂಕ್ರಯ್ಯ, ಪ್ರಕಾಶರನ್ನು ದೃತಿಗೆಡೆಸಿತು.

"ಬಸ್ ಕಂಡಕ್ಟರ ನಾಟಕ ಮಸ್ತ ಐತಿ, ಚೆನ್ನಿ ಪಾತ್ರ ಅಂತೂ ಸೂಪರ್" ಎಂದು ಜನರು ಮಾತನಾಡುತ್ತಿರುವದನ್ನು ಕೇಳಿದ ಶಂಕ್ರಯ್ಯ, ಪ್ರಕಾಶರನ್ನು ಕರೆದು ಹೇಗಾದರೂ ಮಾಡಿ ನಾವು ಹೊಸ ನಾಟಕ ಹಾಕಬೇಕು. ಯಾವುದಾದರು ಹೊಸ ನಾಟಕ ಬರಿ. ಅದೂ ನಾಟಕದ ಹೆಸರು "ಚ"ದಿಂದಲೇ ಪ್ರಾರಂಭವಾಗಬೇಕು ಅಂತ ಹೇಳಿದರು. ತಂದೆಯ ಮಾತು ಎಂದರೆ ಪ್ರಕಾಶರಿಗೆ ವೇದವಾಕ್ಯ. ಆದರೂ ಅಷ್ಟು ಬೇಗ ನಾಟಕ ಹೇಗೆ ಬರೆಯುವದು ಅಂತ ಚಿಂತೆಗೆ ಬಿದ್ದರು. ನಾಲ್ಕು ದಿನಗಳ ನಂತರ ಪ್ರಕಾಶರು ಎನ್.ಎಸ್. ಜೋಶಿ ಅವರು ಬರೆದ "ಸೋತು ಗೆದ್ದ ಸಾಧ್ವಿ" ನಾಟಕವನ್ನು ಓದುತ್ತ ಥೇಟರ ಮುಂದೆ ಕಟ್ಟೆಯ ಮೇಲೆ ಕುಳಿತಾಗ ದನ ಕಾಯುವವನು (ಹಸುಗಳನ್ನು ಮೇಯಿಸುವವ) ಎಮ್ಮೆ, ಹಸುಗಳನ್ನು ಹೊಡೆದುಕೊಂಡು ಥೇಟರ ಮುಂದೆ ಹೊರಟ್ಟಿದ್ದ. ಆ ಹುಡುಗ "ಚನ್ನಪ್ಪ ಚನ್ನಗೌಡ ಕುಂಬಾರ ಮಾಡಿದ ಕೊಡನವ್ವ ಚಂದಕ ತಂದೆನಾ ತಂಗಿ ನೀರಿಗೆ ಬಂದೆನಾ" ಎಂದು ದೊಡ್ಡ ಧ್ವನಿಯಲ್ಲಿ ಹಾಡುತ್ತ ಹೊರಟ್ಟಿದ್ದ. ಪ್ರಕಾಶರು ಓದು ನಿಲ್ಲಿಸಿ ಆ ಹುಡುಗನನ್ನು ಕರೆದರು. ಮತ್ತೊಮ್ಮೆ ಆ ಹಾಡು ಹೇಳಿಸಿ ಅವನ ಕೈಯಲ್ಲಿ ಹತ್ತು ರೂಪಾಯಿ ಇಟ್ಟಿದ್ದರು. ದನ ಕಾಯುವ ಹುಡುಗ ಹತ್ತು ರೂಪಾಯಿ ತೆಗೆದುಕೊಂಡು ಖುಷಿಯಿಂದ ಓಡಿ ಹೋದ. ಪ್ರಕಾಶ ಒಂದು ಕ್ಷಣ ಯೋಚಿಸಿದವರೇ ಕೈಯಲ್ಲಿರುವ ಪುಸ್ತಕದ ಮೇಲೆ 'ಚನ್ನಪ್ಪ ಚನ್ನಗೌಡ' ಅಂತ ಬರದೇ ಬಿಟ್ಟರು. ಅದೇ ಸೋತು ಗೆದ್ದ ಸಾಧ್ವಿ ನಾಟಕಕ್ಕೆ ತಮ್ಮದೇ ಆದ ಕಲ್ಪನೆಗಳನ್ನು ಸೇರಿಸಿ ಚನ್ನಪ್ಪ ಚನ್ನಗೌಡ ಎಂಬ ಹೆಸರಲ್ಲಿ ನಾಟಕ ಪ್ರಾರಂಭಿಸಿಯೇ ಬಿಟ್ಟರು.

ನಾಟಕ ಕಥೆಯ ಸಂಕ್ಷಿಪ್ತ ವಿವರಣೆ ಹೀಗಿದೆ: ಚನ್ನಪ್ಪಗೌಡ ಮತ್ತು ಭೀಮೇಶ ಅಣ್ಣ ತಮ್ಮಂದಿರು. ಇವರು ಚಿಕ್ಕವರಿರುವಾಗಲೇ ಇವರ ಸೋದರಮಾವ ರುದ್ರಪ್ಪನವರ ಇಬ್ಬರೇ ಹೆಣ್ಣು ಮಕ್ಕಳಾದ ಪಾರ್ವತಿ, ಲಲಿತೆಯರನ್ನು, ಗುರು ಹಿರಿಯರು ಚನ್ನಪ್ಪನಿಗೆ ಪಾರ್ವತಿಯನ್ನು, ಭೀಮೇಶನಿಗೆ ಲಲಿತೆಯನ್ನು ತೆಗೆದುಕೊಳ್ಳುವ ಮಾತು-ಕಥೆ ಮುಗಿಸಿರುತ್ತಾರೆ. ಪಟ್ಟಣದಲ್ಲಿ ಪಾರ್ವತಿ, ಲಲಿತಾ ಕಲಿತು ವಿದ್ಯಾವಂತರಾದರೆ, ಹಳ್ಳಿಯಲ್ಲಿನ ಚನ್ನಪ್ಪ ನಿರಕ್ಷರಿಯಾದರೂ ಹೊಲ ಮನಿ ಕೆಲಸದಲ್ಲಿ ನಿಪುಣನಾಗಿ ಹಳ್ಳಿಯ ಮುಗ್ಧಜೀವಿಯಾಗಿರುತ್ತಾನೆ. ಸಹೋದರ ಭೀಮೇಶ ಸಂಘದ ಸೆಕ್ರೆಟರಿಯಾಗಿ ಕಾರ್ಯ ನಿರತನಾಗಿರುತ್ತಾನೆ. ಕಲಿತವಳಾದರೂ ಪಾರ್ವತಿ ಚನ್ನಪ್ಪಗೌಡನ ಸತಿಯಾಗಿ ಪತಿ ಮನೆಯ ಪಾವನ ಗಂಗೆಯಾದಳು. ಆದರೆ ತಂಗಿ ಲಲಿತ ಭೀಮೇಶನ ಸತಿಯಾಗಿ ಬಂದರೂ ಅಕ್ಕನಿಗೆ ತದ್ವಿರುದ್ಧಳಾಗಿ ಮತಿಹೀನ ಸತಿಯಾಗಿ ಊರ ಚೇರಮನ್‌ನ ಸಂಘ ಬೆಳೆಸಿ ಪತಿಹೀನೆ ಆಗುತ್ತಾಳೆ. ನಡತೆಗೆಟ್ಟ ತಂಗಿಗೆ ಬುದ್ಧಿ ಹೇಳಿ ಚೇರಮನ್‌ರಿಗೆ ಛೀಮಾರಿ ಹಾಕಿದ ಪಾರ್ವತಿಗೆ ತಂಗಿ ಲಲಿತ ತನ್ನ ಸೇಡಿನ ಪ್ರಳಯಾಗ್ನಿಯಲ್ಲಿಯೇ ಅಕ್ಕನ ಕುಟುಂಬವನ್ನು ನಾಶಗೊಳಿಸಲು ಪಣತೊಟ್ಟು, ಪತಿಯಾದ ಚನ್ನಪ್ಪಗೌಡನ ಪ್ರಾಣವನ್ನೇ ಆಹುತಿ ತೆಗೆದುಕೊಂಡು, ಪಾರ್ವತಿ ನಡತೆಗೆಟ್ಟವಳೆಂಬ ಸುಳ್ಳು ಆಪಾದನೆಯನ್ನು ಹೇರುತ್ತಾಳೆ. ಗರ್ಭಿಣಿಯಾದ ಪಾರ್ವತಿ ಹತ್ತಿರದ ಸಂಬಂಧಿ ಸಹೋದರ ಡಾಕ್ಟರ ಶೇಖರನ ಆಶ್ರಯದಲ್ಲಿ ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ಆದರೆ ಪಾರ್ವತಿಯ ಶೀಲ ಪಾತಿವ್ರತ್ಯಕ್ಕೆ ತಕ್ಕ ನ್ಯಾಯ ಒದಗಿಸಲು ಪಾರ್ವತಿಗೆ ಹೆತ್ತ ಮಗು ಸತ್ತು ಹೋಯಿತೆಂದು ಸುಳ್ಳು ಹೇಳಿ ಅದೇ ಮಗು ಲಲಿತೆಯ ಮಗುವಾಗಿ ಬೆಳೆಯುವಂತೆ ಮಾಡಿ ಆ ಮಗು ಕುಲದೀಪನಿಂದಲೇ ಚಿಕ್ಕಮ್ಮ ಲಲಿತಳ ಕಪಟ ನಾಟಕ ಹೊರಹಾಕುತ್ತಾನೆ ಡಾಕ್ಟರ ಶೇಖರ. ಅನ್ಯಾಯ ಅಧರ್ಮದಲ್ಲಿ ನಡೆದ ಲಲಿತ ಕೊನೆಗೆ ತನ್ನ ಪ್ರಿಯಕರ ಚೇರಮನ್‌ನಿಂದಲೇ ಪ್ರಾಣ ಕಳೆದುಕೊಳ್ಳುತ್ತಾಳೆ. ಒಂದೇ ರಕ್ತ ಹಂಚಿಕೊಂಡು ಬಂದರೂ ಮನದ ಬಯಕೆ ಭಿನ್ನವಾಗಿರುತ್ತದೆ, ಸತ್ಯಕ್ಕೆ ನ್ಯಾಯ ಕಟ್ಟಿಟ್ಟ ಬುತ್ತಿಯೆಂಬುದನ್ನು ತೋರಿಸಿಕೊಡುವದೇ ಚನ್ನಪ್ಪ ಚನ್ನಗೌಡ ನಾಟಕದ ಕಥಾ ವಸ್ತು.

ಈ ಸುಂದರ ನಾಟಕ ಕೇವಲ ಮೂರೇ ಪ್ರಯೋಗಗಳಲ್ಲಿ ಜನಪ್ರಿಯತೆಯನ್ನು ಪಡೆಯಿತು. ದಿನದಿಂದ ದಿನಕ್ಕೆ ಕಲೆಕ್ಷನ ಹೆಚ್ಚಾಗ ಹತ್ತಿತು. ಈ ನಾಟಕದಲ್ಲಿ ಪ್ರಕಾಶರು ಚನ್ನಪ್ಪಗೌಡ ಮತ್ತು ಆತನ ಮಗನ, ದ್ವಿ ಪಾತ್ರದಲ್ಲಿ ಅಭಿನಯಿಸುತ್ತಿದ್ದರು. ಭಾವ ಪ್ರಧಾನ, ಹಾಸ್ಯ ಮಿಶ್ರಿತ ಅಭಿನಯದಿಂದ ಮತ್ತು ರಸಪೂರಿತ ಹಾಡುಗಳಿಂದ ಪ್ರಕಾಶರು ನಾಟಕಕ್ಕೆ ಹೆಚ್ಚಿನ ಮೆರಗು ತಂದಿದ್ದರು. ಹೆಣ್ಣು ಕಂಡರೆ ಹೆದರುವ ಪುಕ್ಕುಲ ಸ್ವಭಾವದ ಚನ್ನಪ್ಪಗೌಡನ ಪಾತ್ರ ನಿಜಕ್ಕೂ ಪ್ರಕಾಶರ ಅಭಿನಯದಲ್ಲಿ ನೈಜತೆಯ ಪರಮಾವಧಿ ದಾಟುತಿತ್ತು.

ನಗುತ್ತಿದ್ದ ಕೆಲವು ವ್ಯಕ್ತಿಗಳು ಸಾಕಪ್ಪ ಹೊಟ್ಟೆ ನೋವಾಗುತ್ತದೆ ಎಂದು ಕೂಗಿ

ಹೇಳುತ್ತಿದ್ದ ಉದಾಹರಣೆಗಳು ಸಾಕಷ್ಟಿದ್ದವು. ಈ ನಾಟಕ ಎರಡು ವರ್ಷಗಳವರೆಗೆ ಪ್ರಯೋಗ ಕಂಡರೂ ಹಾಡುಗಳು ಮಾತ್ರ ಪ್ರತಿ ವಾರ ಬದಲಾಗುತ್ತಿದ್ದವು. ಹುಬ್ಬಳ್ಳಿಯಲ್ಲಿ ರಿಲೀಸಾದ ಸಿನೆಮಾದ ಹಾಡುಗಳು ಮರುದಿನ ಚನ್ನಪ್ಪ ಚನ್ನಗೌಡ ನಾಟಕದಲ್ಲಿ ಇರುತ್ತಿದ್ದವು. ಅಷ್ಟು ಬೇಗ ಪ್ರಕಾಶರು ಸಿನೆಮಾ ಹಾಡುಗಳನ್ನು ನಾಟಕದಲ್ಲಿ ಹಾಡುವುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತ್ತು. ಆ ಹಾಡುಗಳ ಕುತುಹಲಕ್ಕಾಗಿಯೇ ಮತ್ತೊಮ್ಮೆ ಮಗದೊಮ್ಮೆ ನಾಟಕವನ್ನು ನೋಡುವದಕ್ಕಾಗಿ ಪ್ರೇಕ್ಷಕರು ಆಗಮಿಸುತ್ತಿದ್ದರು.

ಆ ಸಮಯದಲ್ಲಿ ನಾಟಕ ಟಿಕೇಟ ದರ ಕುರ್ಚಿ–೫, ೩ ನೆಲ–೧ ಇದ್ದ ಕಾಲಕ್ಕೆ ಪ್ರತಿದಿನವೂ ೫೦೦೦–೬೦೦೦ ರೂ.ದಂತೆ ಕಲೆಕ್ಷನ ತೆಗೆದುಕೊಂಡ 'ಚನ್ನಪ್ಪ ಚನ್ನಗೌಡ' ನಾಟಕ ಒಂದು ಅಭೂತಪೂರ್ವ ನಾಟಕ. ಈ 'ಚನ್ನಪ್ಪ ಚನ್ನಗೌಡ' ನಾಟಕ ಹುಬ್ಬಳ್ಳಿಯಲ್ಲಿ ಜಯಭೇರಿ ಹೊಡೆದು ದಾಖಲೆ ನಿರ್ಮಿಸಿದ ೧೯೮೫ರ ಕೆಲವು ಉದಾಹರಣೆಗಳು.

೧೦೧ ನೇ ಪ್ರಯೋಗಕ್ಕೆ ಊರಿನ ಗಣ್ಯರನ್ನು ಕರೆಸಿ ಶತದಿನೋತ್ಸವ ಕಾರ್ಯಕ್ರಮವನ್ನು ಮಾಡಲಾಯಿತು. ೫೦೧ ನೇ ಪ್ರಯೋಗಕ್ಕೆ ಜಾನಪದ ಹಾಡು ಡೊಳ್ಳು ಕುಣಿತದೊಂದಿಗೆ ಪ್ರಕಾಶರನ್ನು ಆನೆಯ ಮೇಲೆ ಕೂಡ್ರಿಸಿ ಹುಬ್ಬಳ್ಳಿಯಲ್ಲಿ ಅದ್ದೂರಿಯಿಂದ ಮೆರವಣಿಗೆ ಮಾಡಲಾಯಿತು. ಇದರಿಂದ ನಾಟಕದ ಯಶಸ್ಸಿನ ಸುದ್ದಿ ಬೆಂಗಳೂರು ವರೆಗೂ ತಲುಪಿತು. ತಾರೆ ಭವ್ಯ, ನಿರ್ದೇಶಕ ಜೋಸೈಮನ್, ಜಯಮಾಲ, ಪ್ರಭಾಕರ, ಚರಣರಾಜ ಮುಂತಾದ ಹೆಸಾರಂತ ಕಲಾವಿದರು ನಾಟಕ ನೋಡುವದ್ದಕ್ಕಾಗಿಯೇ ಬಂದು ಹೋಗಿದ್ದು ಒಂದು ಹೆಮ್ಮೆಯ ವಿಷಯ. ಚಿತ್ರಲತಾ ಜೋಶಿ ಅವರಿಂದ ಪ್ರಕಾಶರಿಗೆ ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶ ಕೂಡ ಬಂದವು. ಕಂಪನಿಯ ಕೇಂದ್ರಬಿಂದುವೇ ಆದ ಪ್ರಕಾಶ ಕಂಪನಿ ಬಿಟ್ಟು ಹೋಗುವ ಪರಿಸ್ಥಿತಿಯಲ್ಲಿರಲಿಲ್ಲ. ಚಲನಚಿತ್ರಗಳಲ್ಲಿ ಅಭಿನಯಿಸುವದಕ್ಕಿಂತ ಕಂಪನಿಯೇ ಮುಖ್ಯವೆಂದು ಬಂದ ಅವಕಾಶವನ್ನು ಪ್ರಕಾಶರು ನಿರಾಕರಿಸಿದರು. "ಡಾಕ್ಟರ ರಾಜಕುಮಾರ ಎಂದರೆ ಪ್ರಕಾಶರಿಗೆ ಎಲ್ಲಿಲ್ಲದ ಪ್ರೀತಿ, ಗೌರವ. ತಮ್ಮ ಆರಾಧ್ಯ ದೇವರೆಂದರೆ ಡಾಕ್ಟರ ರಾಜಕುಮಾರ ಮತ್ತು ನನ್ನ ತಂದೆ" ಎಂದು ಹೇಳುತ್ತಿದ್ದರು. ಅಂತಹ ಆರಾಧ್ಯ ದೇವರಾದ ಡಾಕ್ಟರ ರಾಜಕುಮಾರ ಅವರು ಚನ್ನಪ್ಪ ಚನ್ನಗೌಡ ನಾಟಕದ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿ ಶುಭಾಶಯ ಕೋರಿ ಪತ್ರ ಬರೆದಿದ್ದರು. ಆ ಪತ್ರ ನೋಡಿದ ದಿನ ಪ್ರಕಾಶರು ಸ್ವರ್ಗ ಸಿಕ್ಕಷ್ಟೇ ಸಂಭ್ರಮಿಸಿದ್ದರು.

ಆ ಪತ್ರದಲ್ಲಿದ್ದ ವಿಷಯ: ನಾನು ಅಭಿನಯಿಸಿದ "ಬಂಗಾರದ ಮನುಷ್ಯ" ಚಲನಚಿತ್ರದಷ್ಟೇ ತಮ್ಮ ನಾಟಕ ದಾಖಲೆ ಸ್ಥಾಪಿಸುತ್ತಿರುವದು ಸಂತೋಷದ ವಿಷಯ. ಶ್ರೀ ರಾಘವೇಂದ್ರ ಸ್ವಾಮಿ ತಮ್ಮನ್ನು ರಂಗಭೂಮಿಯಲ್ಲಿ ಹೆಚ್ಚಿನ ಮಟ್ಟಿಗೆ ಬೆಳೆಯಲು ಅನುಗ್ರಹಿಸಲಿ. ಸಮಯ ದೊರೆತಾಗ ಬಂದು ಭೇಟಿ ಆಗಿ ಅಂತ ಶುಭಾಶಯಗಳನ್ನು ಕಳುಹಿಸಿದ್ದರು. ಅವರ ಹೇಳಿಕೆಯಂತೆ ಪ್ರಕಾಶರು ಪತ್ನಿ

ಮತ್ತು ಮಗಳನ್ನು ಕರೆದುಕೊಂಡು ರಾಜಕುಮಾರ ಅವರನ್ನು ಭೇಟಿ ಆಗಲು ಹೋದಾಗ ಅವರು ಭಾಗ್ಯದ ಲಕ್ಷ್ಮಿ ಬಾರಮ್ಮ ಶೂಟಿಂಗನಲ್ಲಿ ಇದ್ದರು. ಪ್ರಕಾಶರು ಬಂದಿದ್ದನ್ನು ಕಂಡು ಬಿಡುವು ಮಾಡಿಕೊಂಡು ಬಂದು ತುಂಬಾ ಆತ್ಮಿಯತೆಯಿಂದ ಮಾತನಾಡಿ ನಾಟಕದ ಆಗುಹೋಗುಗಳನ್ನು ವಿಚಾರಿಸಿದರು. ಅದೇ ಸಮಯಕ್ಕೆ ಬಂದ ಅಂಬರೀಶವರನ್ನು ಕಂಡ ರಾಜಕುಮಾರ ಅವರು, "ಚನ್ನಪ್ಪ ಚನ್ನಗೌಡ ಬಂದಿದ್ದಾನೆ ಬನ್ನಿ ಮಾತಾಡಿ" ಅಂತ ಅಂಬರೀಶ ಅವರನ್ನು ಕರೆದಿದ್ದರು. ಪ್ರಕಾಶರಿಗೆ ಅಂದು ಮನದಲ್ಲಿ ಕಲಾವಿದನಾಗಿದ್ದಕ್ಕೂ ನನ್ನ ಜನ್ಮ ಸಾರ್ಥಕವಾಯಿತು ಎಂಬ ಭಾವನೆ ಮೂಡಿತ್ತಂತೆ. ಸಂತಸದಿಂದ ಎಲ್ಲರೊಂದಿಗೂ ಫೋಟೊ ತೆಗೆಸಿಕೊಂಡು ಪ್ರಕಾಶ ಬೆಂಗಳೂರಿನಿಂದ ಮರಳಿದ್ದರು. ಎಲ್ಲರ ಬಾಯಲ್ಲಿಯೂ ಅಂದಿನಿಂದ ಇಂದಿನವರೆಗೂ ಪ್ರಕಾಶರು ಚನ್ನಪ್ಪಗೌಡರಾಗಿಯೇ ಉಳಿದಿದ್ದಾರೆ ವಿನಹ ಪ್ರಕಾಶರಾಗಿ ಉಳಿದಿಲ್ಲ.

ಅನೇಕನೇಕ ಹೆಗ್ಗಳಿಕೆಗೆ ಪಾತ್ರವಾದ ಚನ್ನಪ್ಪ ಚನ್ನಗೌಡ ನಾಟಕ ಸುಮಾರು ಒಂದು ಸಾವಿರ ಪ್ರಯೋಗಗಳನ್ನು ಕಂಡು ಹುಬ್ಬಳ್ಳಿಯಲ್ಲಿ ದಾಖಲೆ ನಿರ್ಮಿಸಿತ್ತು. ಪ್ರಕಾಶರ ಬದುಕಲ್ಲಿ ಇದೊಂದು ಸುವರ್ಣ ಮಹೋತ್ಸವ. ಇನ್ನೂ ಹೆಚ್ಚು ಪ್ರಯೋಗಗಳನ್ನು ಕಾಣುವ ನಿಟ್ಟಿನಲ್ಲಿದ್ದಾಗಲೇ ಥೇಟರ ಅವಧಿ ಮುಗಿದು ಕ್ಯಾಂಪ ಬಂದ ಮಾಡುವ ಪ್ರಸಂಗ ಬಂದೊದಗಿತು. ಅತ್ತ ಬ್ರ್ಯಾಂಚ ಕಂಪನಿ ನಡೆಸುವದು ಕಷ್ಟವೆನಿಸಿ ಸುಮಾರು ೬ ವರ್ಷಗಳ ಕಾಲ ನಡೆಸಿದ ಶಾರದಾ ಪ್ರಸಾದ ನಾಟ್ಯ ಸಂಘ ಕಡಪಟ್ಟಿ ಬ್ರ್ಯಾಂಚ ಕಂಪನಿ ಕೂಡ ಹಾವೇರಿಗೆ ಮುಚ್ಚಲಾಯಿತು. ಎಲ್ಲರ ಮಧ್ಯೆ "ಶ್ರೀ ಗುರುಪ್ರಸಾದ ನಾಟ್ಯ ಸಂಘ" ಕಂಪನಿ ಒಂದೇ ಸಾಕು, ಎಂದು ಹೇಳಿದ ಚಿಕ್ಕಪ್ಪ ಮನೋಹರ ಅವರ ನಿರ್ಧಾರದಂತೆ ಎಲ್ಲರು ಒಟ್ಟಾಗಿ ನರಗುಂದಕ್ಕೆ ಕ್ಯಾಂಪ ಮಾಡಲಾಗಿತ್ತು. ಕೆಲವು ದಿನಗಳ ನಂತರ ನರಗುಂದದಲ್ಲಿ ಕಲೆಕ್ಷನ ಇಳಿಮುಖವಾಗುತ್ತ ಹೊರಟಿತು. ಹಣಕಾಸು ಮುಗ್ಗಟ್ಟಿನಿಂದ ಮುಂದಿನ ಕ್ಯಾಂಪಿಗೆ ಹೋಗುವುದು ಕಷ್ಟವಾದಾಗ ಸುನಂದಾಳ ಕೊರಳಲ್ಲಿದ್ದ ಚಿನ್ನದ ಸರ ಮತ್ತು ತಮ್ಮನ ಹೆಂಡತಿಯ ಕೊರಳಲ್ಲಿದ್ದ ಬಂಗಾರವನ್ನು ಮಾರಿ ಗುಳೇದಗುಡ್ಡ ಕ್ಯಾಂಪ ಮಾಡಲಾಯಿತು. ಕಂಪನಿಯ ಜವಾಬ್ದಾರಿಯನ್ನು ಹೊತ್ತ ಪ್ರಕಾಶರ ಚಿಕ್ಕಪ್ಪ ಮನೋಹರ ಅನಾರೋಗ್ಯದಿಂದ ಕಂಪನಿ ಬಿಟ್ಟು ಹೊರಟುಹೋದರು. ಅಂದಿನಿಂದ "ಶ್ರೀ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ" ಕಂಪನಿ ಸೂತ್ರವೇ ಹರಿದ ಗಾಳಿಪಟದಂತಾಯಿತು.

ವ್ಯವಹಾರಿಕ ಕೊರತೆಯಿಂದಲೋ ಕಾಲದ ಮಹಿಮೆಯಿಂದಲೋ ಜನರು ಮುತ್ತಿಗೆ ಹಾಕುತ್ತಿದ್ದ ಕಡಪಟ್ಟಿ ಕಂಪನಿ ಸಂಪೂರ್ಣ ಖಾಲಿ ಬೀಳಹತ್ತಿತು. ಅಲ್ಲಿಂದ ನಂದಿಕೇಶ್ವರಕ್ಕೆ ಬಂದ ಕಂಪನಿ ಇನ್ನೇನು ಮುಂದುವರೆಸಲು ಸಾಧ್ಯವಿಲ್ಲ ಎನ್ನುವಷ್ಟು ತೊಂದರೆಗೆ ಸಿಕ್ಕಿ ಹಾಕಿಕೊಂಡಿತು. ಆ ಬಿಕ್ಕಟ್ಟಿನ ಸಮಯದಲ್ಲಿ ದೇವರಂತೆ ಬಂದವರು ಪ್ರಕಾಶರ ಸೋದರ ಮಾವ ಎಮ್.ಎನ್. ಸಂಬಾಳ. ಇವರು ಆ ಸಮಯದಲ್ಲಿ

ನಾರಯಣಪುರಕ್ಕೆ ಕೆ.ಇ.ಬಿ. ಸೆಕ್ಷನ್ ಆಫಿಸರ ಆಗಿದ್ದರು. ಹಣದ ಸಹಾಯವನ್ನು ಮಾಡಿ ಕ್ಯಾಂಪನ್ನು ನಾರಾಯಣಪುರಕ್ಕೆ ಮಾಡಿಸಿದರು. ಕಂಪನಿ ಉಸಿರಾಡಿಸುವಷ್ಟು ಕಲೆಕ್ಷನ ಕಂಡಿತು. ಹಾಗೆ ಹಿಡಕಲ್, ಮುದ್ದೇಬಿಹಾಳ, ಆಲಮೇಲ ತಲುಪಿತು. ಆಲಮೇಲ ಕ್ಯಾಂಪ ಮುಗಿಯುವಷ್ಟರಲ್ಲಿ ಸುಧಾರಿಸಿಕೊಳ್ಳಲು ಸಾಧ್ಯವಿಲ್ಲದಷ್ಟು ಸಾಲವಾಯಿತು. ಸಮಸ್ಯೆಗಳನ್ನು ಎದುರಿಸುವದು ಒಂದು ಯುದ್ಧದಂತಾದಾಗ ಪ್ರಕಾಶರು ಯಾವ ಒಂದು ಹೊಸ ಪ್ರಯತ್ನಕ್ಕೆ ಕೈ ಹಾಕದಂತೆ ಸ್ಥಬ್ಧವಾದರು. ಒಂದರ ಮೇಲೊಂದು ಬರುವ ಸೋಲಿನ ಅಲೆಗಳು ಪ್ರಕಾಶರನ್ನು ನೋವಿನ ನರಳುವಿಕೆಯಲ್ಲಿ ಮುಳುಗಿಸಿಬಿಟ್ಟವು. ನಿದ್ರೆ, ನೀರಡಿಕೆ ಮಾಯವಾಗಿ ಹೋದವು. ಸರಿಯಾಗಿ ಪಾತ್ರ ಮಾಡುವಷ್ಟು ಕೂಡ ಬುದ್ಧಿ ಸ್ಥಿಮಿತದಲ್ಲಿ ಉಳಿಯದಂತಾಯಿತು. ಮನದಲ್ಲಿ ಹೆಪ್ಪುಗಟ್ಟಿದ ದುಃಖ ಪ್ರಕಾಶರನ್ನು ಕ್ಷೀಣಿಸಹತ್ತಿತು. ಆಗ ಪ್ರಕಾಶರು ತಮಗೇ ತಿಳಿಯದಂತೆ ಮದ್ಯಪಾನಕ್ಕೆ ಶರಣಾಗಿದ್ದರು.

ಪ್ರತಿಯೊಬ್ಬ ಮನುಷ್ಯನಲ್ಲಿ ತಾನು ಚನ್ನಾಗಿ ಬದುಕಬೇಕು ಎಂಬ ಆಸೆ ಸಹಜವಾಗಿ ಇರುತ್ತದೆ. ಭರದಿಂದ ಹೊರಟ ಪ್ರಯಾಣದ ರಥ ಬಂಡೆಗಲ್ಲಿಗೆ ಅಪ್ಪಳಿಸಿ ಗೊತ್ತು ಗುರಿಗಳನ್ನು ಕಳೆದುಕೊಂಡಾಗ ಬುದ್ಧಿಯ ಸಮತೋಲನ ತಪ್ಪುವದು ಸಹಜವೆಂದರಿತ ತಂದೆ ಶಂಕ್ರಯ್ಯ, ಪ್ರಕಾಶರ ತಪ್ಪು ನಡುವಳಿಕೆಯನ್ನು ನುಂಗುತ್ತಲೇ ಹೊರಟರು. ಲಿಂಗಸೂರ ಕ್ಯಾಂಪ ಮಾಡಿದರೆ ಒಳ್ಳೆಯದಾಗಬಹುದೇನೋ ಎಂದು ವಿಚಾರಿಸುವಷ್ಟರಲ್ಲಿ ಸಾಲಗಾರರು ಸಾಲಾಗಿ ನಿಂತರು. ಎದೆಯೆ ಒಡೆದಂತಾಗಿ ಶಂಕ್ರಯ್ಯ ಕುಸಿದು ಹೋದರು. ಪ್ರಕಾಶರ ದುಃಖದ ಕಟ್ಟೆ ಒಡೆದುಹೋಯಿತು. ಹೆಂಡತಿ ಮಗಳನ್ನು ಮುಂದಿಟ್ಟುಕೊಂಡು ಗೋಳೋ ಎಂದು ಅತ್ತಿದ್ದರು. ಸುನಂದಳ ಕಣ್ಣೀರ ಕೋಡಿ ಹೊಳೆಯಾಗಿ ಹರೆದಿತ್ತು. ಹಣ ಕೊಟ್ಟವರಿಗೆ ಇವರ ಗೋಳು ಬೇಕಾಗಿರಲಿಲ್ಲ. ಅವರು ಕೊಟ್ಟ ಹಣ ಬೆಳೆದು ನಿಂತ ಬಡ್ಡಿ ತೋರಿಸಿ ನಾಟಕ ಕಂಪನಿಯ ಸಂಪೂರ್ಣ ಸಾಮಾಗ್ರಿಗಳನ್ನು ವಶಪಡಿಸಿಕೊಂಡು ಲಾರಿಯಲ್ಲಿ ಲೋಡ ಮಾಡಿಕೊಂಡು ಹೊರಟು ಹೋಗುವದನ್ನು ಕಂಡ ಕಡಪಟ್ಟಿ ಕುಟುಂಬದವರಿಗೆ ಆಕಾಶವೇ ಕಳಚಿ ಬಿದ್ದಂತಾಗಿತ್ತು, ಭೂಮಿಯೇ ಕುಸಿದು ಹೋದಂತಾಗಿತ್ತು. ಆದರೂ ಸ್ವಂತ ಕಂಪನಿ ನಿಲ್ಲಿಸಬಾರದೆಂಬ ಛಲ ಮಾತ್ರ ದೂರಾಗಲಿಲ್ಲ. ಮೆದಕೇರಿಯವರ ನಾಟಕ ಸೀನ್ಸಗಳನ್ನು ಬಾಡಿಗೆಗೆ ತೆಗೆದುಕೊಂಡು ಪ್ರಕಾಶರು ಲಿಂಗಸೂರ ಕ್ಯಾಂಪ ಮಾಡಿದರು. ಈ ಕ್ಯಾಂಪಿಗೆ ಈಗಿನ ಸಚಿವೆ ಚಲನಚಿತ್ರ ನಟಿ ಉಮಾಶ್ರೀಯವರನ್ನು ಮತ್ತು ಚಿತ್ರನಟ ಶ್ರೀನಾಥರನ್ನು ಕರೆಸಲಾಗಿತ್ತು. ಕಂಪನಿ ಕಲೆಕ್ಷನ್ ಚನ್ನಾಗಿ ಆದರೂ ನಾಟಕ ಸೀನ್ಸಗಳು ಬಾಡಿಗೆ ತಂದಿದ್ದರಿಂದ ದುಡ್ಡು ಉಳಿತಾಯ ಮಾಡುವದು ಕಷ್ಟವಾಯಿತು.

ವೈಭವದ ದಿನಗಳಲ್ಲಿ ನಮ್ಮ ಪ್ರಕಾಶ ರಾಜ, ಪ್ರಕಾಶ ನಮ್ಮ ಕಂಪನಿಯ ಆಧಾರ ಸ್ಥಂಬ, ಪ್ರಕಾಶನಿಂದಲೇ ನಾವೆಲ್ಲ ಅನ್ನುತ್ತಿದ್ದವರೇ ಪ್ರಕಾಶರನ್ನೇ ಕಡೆಗಣಿಸ ಹತ್ತಿದ್ದರು. ಮಗಳಿಗಾಗಿ ಹಾಲು ಖರೀದಿಸುವುದು ಕಂಪನಿಯಲ್ಲಿರುವವರಿಗೆ

ಹಿಡಿಸುತ್ತಿರಲಿಲ್ಲ. "ಊಟಕ್ಕೇ ಗತಿ ಇಲ್ಲದಾಗ ಹಾಲೇಕೆ ತೆಗೆದುಕೊಳ್ಳಬೇಕು? ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು" ಅಂತ ಚುಚ್ಚಿ ಮಾತನಾಡುವ ಮಾತುಗಳನ್ನು ಕೇಳಿಸಿಕೊಂಡರೂ ಕೇಳದಂತೆ ಇರುತ್ತಿದ್ದರು ಪ್ರಕಾಶ.

ಕೆಂಭಾವಿ ಕ್ಯಾಂಪಾದ ಕೆಲವೇ ದಿನಗಳಲ್ಲಿ ಬೋರ್ಡಿಂಗ ನಡೆಸಲು ಸಾಧ್ಯವಿಲ್ಲದಂತಾಯಿತು, ಮಳೆಗಾಲವಾಗಿದ್ದರಿಂದ ಸಂಪೂರ್ಣ ನಾಟಕಗಳನ್ನು ಬಂದಿಡಲಾಯಿತು. ಬೋರ್ಡಿಂಗ ಬಂದಾಗಿ ಎರಡು ದಿನ ಬರೀ ನೀರಿನಿಂದಲೇ ದಿನಗಳನ್ನು ದೂಡಿದ್ದರು. ಕೊನೆಗೆ ಕೆಳಗಿಳಿಸಿದರೆ ಕಾಲು ಮಣ್ಣಾಗುತ್ತವೆ ಎಂದು ಹೆಗಲು ಮೇಲೆ ಹೊತ್ತು ತಿರುಗುತ್ತಿದ್ದ ಮಗಳು ವೀಣಾಗೆ ಜೋಳಿಗೆ ಹಾಕಿ ಕಂಪನಿಯಲ್ಲಿರುವ ಒಂದೆರಡು ಮಕ್ಕಳನ್ನು ಸೇರಿಸಿ, ಊರಲ್ಲಿ ಕಳಿಸಿ ಬೇಡಿ ಬಂದ ಅಕ್ಕಿಯಲ್ಲಿ ಬೋರ್ಡಿಂಗ ಚಾಲು ಮಾಡಿದ್ದರು. ಇದನ್ನು ಕಂಡ ಸುನಂದಾರ ಕಣ್ಣೀರು ಹೊಳೆಯಾಗಿ ಹರಿದಿತ್ತು. "ಜಂಗಮರ ಜಾತಿಯ ಕುಲಕಸಬೇ ಜೋಳಿಗೆ ಹಾಕುವದಲ್ಲವೇ? ಹಾಕ್ಕಿದ್ದಾಳೆ ಬಿಡು, ಈ ರೂಪದಿಂದಲಾದರು ನನ್ನ ಮಗಳು ಎಲ್ಲರಿಗೂ ಅನ್ನ ಕಾಣಿಸಿದ್ದಾಳೆ" ಎಂದು ಪತ್ನಿ ಸುನಂದಾಳನ್ನು ಸಮಾಧಾನ ಪಡಿಸಿದ್ದರು ಪ್ರಕಾಶ.

ಮಗಳು ವೀಣಾಳಿಗಾಗಿ ಕಂಪನಿಯಲ್ಲಿ ಪ್ರತ್ಯೇಕ ಮಂಚ ಫ್ಯಾನ, ಮಸ್ಕಿಟೋ ನೆಟ್. ಅವಳನ್ನು ನೋಡಿಕೊಳ್ಳಲು ಕೆಲಸದವರು, ನಾಟಕ ಮುಗಿಯುತ್ತಿದ್ದಂತೆ ಮಗಳನ್ನು ಎತ್ತಿಕೊಂಡೇ ಕಾರ ಹತ್ತುವದು, ಒಟ್ಟು ಅರಗಿಣಿಯಂತೆ ಬೆಳೆಸುತ್ತಿದ್ದ ಮಗಳು ಬೇಡಿ ಬಂದ ಅಕ್ಕಿಯನ್ನು ಜೋಳಿಗೆಯಿಂದ ಮುಂದೆ ಸುರಿದಾಗ ಪ್ರಕಾಶರಿಗೆ ಹೇಗೆ ಆಗಿರಬಹುದು? ಇಂತಹ ಘಟನೆಗಳೇ ಪ್ರಕಾಶರು ಖಿನ್ನತೆಗೆ ಒಳಗಾಗಲು ಕಾರಣವಾಗಿರಬೇಕು. "ಉಳ್ಳವರ ಮನೆಯಲ್ಲಿ ಯಾರಾದರೂ ಖಿನ್ನತೆಗೆ ಒಳಗಾದರೆ ಚಿಕಿತ್ಸೆ, ಆದರೆ ರಂಗಭೂಮಿಯ ಕಲಾವಿದರಿಗೆ ಮತ್ತಷ್ಟು ರಸಾತಳಕ್ಕೆ ತಳ್ಳಲು ಎಷ್ಟು ಸಾಧ್ಯವೋ ಅಷ್ಟು ವ್ಯಂಗ್ಯ, ಅಣಕದ ಮಾತುಗಳೇ ದೀಕ್ಷೆ. ಕೊನೆಗೆ ಎಲ್ಲವೂ ದೈವೇಚ್ಛೆ, ಎನ್ನುವ ಸಮಾಧಾನಕರ ಬಹುಮಾನ. ಇಂತಹ ಅಸಡ್ಡತೆಗೆ ಸಿಲುಕಿಯೇ ಖಿನ್ನತೆಗೆ ಒಳಗಾದ ಕಲಾವಿದರು ಕೊನೆವರೆಗೂ ಅಪವಾದಗಳ ಮೂಟೆಯನ್ನು ಬೆನ್ನಿಗೆ ಕಟ್ಟಿಕೊಂಡೇ ಅವರವರದೇ ದಾರಿಗಳ ಕತ್ತಲಲ್ಲಿ ಕರಗಿ ಹೋದರೆಷ್ಟೋ ಕಲಾವಿದರು."

ಕತ್ತಲೆಯ ದಾರಿಯಲ್ಲಿಯೇ ನಡೆದ ಪ್ರಕಾಶರ ರಂಗ ಪಯಣ ಅಮಿನಗಡ ತಲುಪಿತು. ಅಲ್ಲಿಯೂ ಯಶಸ್ಸಿನ ಸುಳಿವು ಸುಳಿಯದೇ ತೊಳಲಾಡುವ ಸಮಯದಲ್ಲಿ ಶಿರೂರ ಮಾಚಾ ಕವಿಗಳು ಪ್ರಕಾಶವರ ಕಷ್ಟಗಳನ್ನು ನೋಡಲಾರದೇ ತಮ್ಮೂರಾದ 'ಶಿರೂರ'ಗೆ ಕರೆದುಕೊಂಡು ಹೋಗಿ ನಾಲ್ಕು ದಿವಸ ನಾಟಕಗಳನ್ನು ಆಡಿಸಿ ಹಣ ಕೂಡಿಸಿ ಕೊಟ್ಟು ಮುಧೋಳಕ್ಕೆ ಕಳಿಸಿದರು. ಮಾಚಾ ಕವಿಗಳನ್ನು ಪ್ರಕಾಶರು ಈಗಲೂ ನೆನೆಯುತ್ತಾರೆ. ಮುಂದೆ ಸವಣೂರ ಕ್ಯಾಂಪಿನಲ್ಲಿದ್ದಾಗ ಹುಬ್ಬಳ್ಳಿಯ ಶಾಂತಿನಗರದಲ್ಲಿ ಮನೆ ಕಟ್ಟಲು ಪ್ರಾರಂಭಿಸಿದ ಮನೆಯ ಮೇಲೆ

ಕೇಸಾಗಿ ಏನೇ ಪ್ರಯತ್ನಿಸಿದರೂ ಮನೆ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೇಸಿಗಾಗಿ ಮತ್ತೆ ಸಾಲ ಮಾಡಬೇಕಾದ ಪ್ರಸಂಗ ಬಂದೊದಗಿತು. ಸಾಲದ ಹೊರೆ ಹೊತ್ತು ಏಳುತ್ತ ಬೀಳುತ್ತ ಹುಕ್ಕೇರಿ ಕ್ಯಾಂಪ ಮುಗಿಸಿ ಅಂಕಲಗಿ ಜಾತ್ರಿ ಕ್ಯಾಂಪ ಮಾಡಿದರು. ಈ ಕ್ಯಾಂಪಲ್ಲಿ ಲಾಭವಾಗಿ ಸ್ವಲ್ಪ ಹಣ ಕೈ ಸೇರಿತು. ಕಂಪನಿಯನ್ನು ಉಳಿಸಿಕೊಳ್ಳಬೇಕೆಂದು ಉಪವಾಸ ವನವಾಸದ ದಿನಗಳನ್ನು ದೂಡಿದ್ದು ಸಾಕು. ನಮ್ಮ ವನವಾಸದ ದಿನಗಳು ಇಲ್ಲಿಗೇ ಮುಗಿಯಲಿ ಅಂತ ಬಂದ ಲಾಭವನ್ನು ಸಾಲಗಾರರಿಗೆ ಕೊಟ್ಟು, ರಾಜ ವೈಭವದ ದಿನಗಳನ್ನು ವನವಾಸದ ದಿನಗಳನ್ನು ತೋರಿಸಿದ ಕಂಪನಿಗೆ ಶಾಶ್ವತವಾಗಿ ಅಂಕದ ಪರದೆ ಎಳೆದರು ಪ್ರಕಾಶ.

ಕಡಪಟ್ಟಿ ಕಂಪನಿಯ ನಾಟಕಗಳನ್ನು ನೋಡಿ ಜನ ಎಷ್ಟು ಸಂತೋಷ ಪಟ್ಟರೊ, ಖುಷಿ ಪಟ್ಟರೊ, ಅಷ್ಟೇ ಹಣವನ್ನು ಕಂಪನಿಗೆ ಧಾರೆ ಎರೆದಿದ್ದರು. ೧೯ ವರ್ಷ ಬೃಹತ ಯಶಸ್ಸನ್ನು ಕಂಡ ಕಡಪಟ್ಟಿ ಕಂಪನಿ ಕೇವಲ ನಾಲ್ಕು ವರ್ಷಗಳಲ್ಲಿ ನಶಿಸಿ ಹೋಗಿದ್ದು ದುರದೃಷ್ಟಕರ.

ವೃತ್ತಿ ರಂಗಭೂಮಿಯ ಕಂಪನಿಗಳಿಗೆ ಸರ್ಕಾರದಿಂದ ದೊರೆಯುವ ಇಂದಿನ ಸವಲತ್ತುಗಳು ಪ್ರಕಾಶರ ಕಂಪನಿ ಬಂದಾಗುವ ಸಮಯದಲ್ಲಿದಿದ್ದರೆ ಕಂಪನಿ ಉಳಿಯುವ ಸಾಧ್ಯತೆ ಇತ್ತೇನೊ.

## ಕಂಪನಿಯಲ್ಲಿ ಸಂಬಂಧಿಕರ ಪಾತ್ರ

ಶಂಕ್ರಯ್ಯನವರು ಹೊಲ ಮತ್ತು ಕಾರು ಮಾರಿಕೊಂಡು ನಾಟಕ ಕಂಪನಿ ತೆರೆದಿದ್ದು ಮನೆಯಲ್ಲಿ ಊರಲ್ಲಿ ಬೇಸರ ತರಿಸಿದ ವಿಷಯವಾಗಿತ್ತು. ಶಂಕ್ರಯ್ಯನವರಿಗೆ ತಲೆ ಕೆಟ್ಟಿದೆ ಅಂತ ಮಾತನಾಡಿದ್ದರು. ತಾವು ಮಾಡಿದ್ದೇ ಸರಿ ಎನ್ನುವ ವಿಚಾರದಲ್ಲಿದ್ದ ಶಂಕ್ರಯ್ಯನವರಿಗೆ ಬೇರೆಯವರ ಹಿತೋಪದೇಶದ ಮಾತುಗಳು ಕಿವಿಗಳಿಗೆ ತಲುಪಲೇ ಇಲ್ಲ. ಕಂಪನಿ ಪ್ರಾರಂಭದ ನಂತರ ಶಂಕ್ರಯ್ಯನವರು ಮತ್ತು ಪ್ರಕಾಶರು ಇಬ್ಬರೂ ಪಾತ್ರ ಮಾಡುತ್ತಿದ್ದುದರಿಂದ ಕಂಪನಿಯ ಹೆಚ್ಚಿನ ಜವಾಬ್ದಾರಿಯನ್ನು ಕಲಾವಿದನಾದ ವೀರಶೆಟ್ಟಿ ಕೊಡ್ಲಿ ಅವರು ನಿರ್ಹವಹಿಸುತ್ತಿದ್ದರು. ಕಂಪನಿ ಉನ್ನತದತ್ತ ಸಾಗಿದಂತೆ ಶಂಕ್ರಯ್ಯನವರು ನಾಲ್ಕು ಕಾರು ಖರೀದಿಸಿದರು. ಕುಟುಂಬದ ಕೆಲವು ಸದಸ್ಯರು ಕಂಪನಿಯ ಪ್ರವೇಶ ಪಡೆದರು. ಪ್ರಕಾಶರ ಚಿಕ್ಕಪ್ಪ ಮನೋಹರ ವ್ಯವಹಾರದಲ್ಲಿ ಅತ್ಯಂತ ಜಾಣರಾಗಿದ್ದರಿಂದ ಎಲ್ಲ ವ್ಯವಹಾರವನ್ನು ಒಪ್ಪಿಸಿ ಕಂಪನಿಯ "ಮಾಲಿಕರು" ಎಂದು ತೀರ್ಮಾನಿಸಿದರು. ಪ್ರಕಾಶ ಕಡಪಟ್ಟಿಯವರ ಸೋದರ ದಿಲೀಪ ಕಡಪಟ್ಟಿ ಕಂಪನಿಯ ಸಂಚಾಲಕರು ಎಂದು ನಿರ್ಧರಿಸಿದರು. ಅದೇ ರೀತಿ ಕಂಪನಿಯ ಆಡಳಿತ ಮುಂದು ವರೆಯಿತು. ಪ್ರತಿ ಜಾಹಿರಾತುಗಳಲ್ಲಿ ಮತ್ತು ಪತ್ರ ವ್ಯವಹಾರಗಳಲ್ಲಿ ಮಾಲಿಕರು ಕೆ. ಮನೋಹರ ಸ್ವಾಮಿ, ಸಂಚಾಲಕರು ಕೆ. ದಿಲೀಪ

ಎಂದು ಹಾಕಿಸಲಾಗುತ್ತಿತ್ತು. ಮನೋಹರವರ ಆಡಳಿತ ಎಲ್ಲರಿಗೂ ಒಪ್ಪಿಗೆ ಆಗಿತ್ತು. ಕಲಾವಿದರನ್ನು ಹೇಗೆ ಹಿಡಿದಿಟ್ಟುಕೊಳ್ಳಬೇಕೆನ್ನುವದು, ಹಣದ ಕೊರತೆ ಆದಾಗ ಬೇರೆಯವರಿಂದ ಹೇಗೆ ಹಣದ ಸಹಾಯ ಪಡೆಯಬೇಕೆನ್ನುವದು ಮನೋಹರವರಿಗೆ ಚೆನ್ನಾಗಿ ಗೊತ್ತಿತ್ತು. ಅವರ ಜಾಣ್ಮೆ ಕಂಪನಿ ಯಶಸ್ಸಿಗೆ ಕಾರಣವಾಗಿತ್ತು. ನಾಟಕ ಕಂಪನಿ ಸ್ಥಗಿತಗೊಳ್ಳುವದಕ್ಕಿಂತ ಮೊದಲೇ ಅನಾರೋಗ್ಯದಿಂದ ಮನೋಹರವರು ಕಂಪನಿ ಬಿಟ್ಟಿದ್ದರು. ಈಗ ತಮ್ಮ ಕುಟುಂಬದ ಜೊತೆ ಗೋಕಾಕದಲ್ಲಿ ಮನೆ ಮಾಡಿಕೊಂಡು ಸುಖವಾಗಿದ್ದಾರೆ.

ಸಂಚಾಲಕರಾದ ಕೆ. ದಿಲೀಪ ಹೊರಗಿನ ಎಲ್ಲ ವ್ಯವಹಾರಗಳನ್ನು ನಿಭಾಯಿಸುತ್ತಿದ್ದರು. ಚಲನಚಿತ್ರ ಕಲಾವಿದರನ್ನು ಕಂಪನಿಗೆ ಕರೆದುಕೊಂಡು ಬಂದವರೇ ದಿಲೀಪ. ಹೆಸರಾಂತ ಚಲನಚಿತ್ರ ಕಲಾವಿದರು ದಿಲೀಪ ಕರೆದರೆ ಇಲ್ಲವೆನ್ನುತ್ತಿರಲಿಲ್ಲ. ಹಾಗೆ ಕಲಾವಿದರ ಮಧ್ಯ ಒಳ್ಳೆಯ ಬಾಂಧವ್ಯ ಬೆಳೆಸಿಕೊಳ್ಳುತ್ತಿದ್ದರು. ಪ್ರಕಾಶರಿಗಂತೂ ದಿಲೀಪ ಅಂದರೆ ಬಲಗೈ ಇದ್ದಂತೆ. "ನನಗೆ ಪಾತ್ರ ಮಾಡುವದಷ್ಟೇ ಗೊತ್ತಿತ್ತು ದಿಲೀಪನಿಂದ ನಾನು ಹೊರ ಪ್ರಪಂಚ ಕಂಡಿದ್ದು" ಎನ್ನುತ್ತಾರೆ ಪ್ರಕಾಶ. ಸೋಲು ಗೆಲುವಿನಲ್ಲಿ ಸದಾ ಹೆಗಲು ಕೊಟ್ಟು ದುಡಿದ ದಿಲೀಪ ೨೦೧೦ರಲ್ಲಿ ನಿಧನರಾಗಿದ್ದಾರೆ.

ಪ್ರಕಾಶರ ಮತ್ತೊಬ್ಬ ಸಹೋದರ ರಾಜು, ಕಂಪನಿಯಲ್ಲೇ ಉಳಿದಿದ್ದರು. ಕೆಲವೊಂದು ಕಂಪನಿಯ ವ್ಯವಹಾರಗಳನ್ನು ನಿಭಾಯಿಸುತ್ತಿದ್ದರು. ಇನ್ನೊಬ್ಬ ಸಹೋದರ ಅಶೋಕ ಚಿಕ್ಕ ಪುಟ್ಟ ಪಾತ್ರ ಮಾಡುತ್ತ ಪ್ರಕಾಶರು ಮಾಡುತಿದ್ದ ಎಲ್ಲ ಪಾತ್ರಗಳನ್ನು ಕಲಿತರು. ರಾಜಣ್ಣ ಮತ್ತು ಅಶೋಕರಿಗಾಗಿಯೇ ಬ್ರ್ಯಾಂಚ ಕಂಪನಿ ಪ್ರಾರಂಭವಾಯಿತು. ಚಿನ್ನದ ಗೊಂಬೆ ನಾಟಕದ ಸೋಮಶೇಖರ, ಸತಿ ಸಂಸಾರದ ಜ್ಯೋತಿ ನಾಟಕದ ಜಗದೀಶ, ಭೂಮಿ ತೂಕದ ಹೆಣ್ಣು ನಾಟಕದ ಶಿವಲಿಂಗ., ಮುತ್ತೈದೆಗೆ ಕುತ್ತು ಐದು ನಾಟಕದ ಗುರ್ಲಿಂಗ ಮುಂತಾದ ನಾಟಕಗಳಲ್ಲಿ ಅಶೋಕರು ಮುಖ್ಯ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಬ್ರ್ಯಾಂಚ ಕಂಪನಿ ಮತ್ತು ಮುಖ್ಯ ಕಂಪನಿ ಬಂದಾದ ನಂತರ ಕಮತಗಿ ಕಂಪನಿಯಲ್ಲಿ ಹತ್ತು ವರ್ಷಗಳವರೆಗೆ ಸೇವೆ ಸಲ್ಲಿಸಿದ ಅಶೋಕ ಕಡಪಟ್ಟಿಯವರು ಪ್ರಸ್ತುತ ಶ್ರೀ ತೋಂಟದಾರ್ಯ ನಾಟ್ಯ ಸಂಘ ಮಂಡಲಗೇರಿ ಕಂಪನಿಯಲ್ಲಿ ಸಣ್ಣ ಪುಟ್ಟ ಪಾತ್ರ ಮಾಡುತ್ತ ರಂಗಸೇವೆಯಲ್ಲಿ ಮುಂದುವರೆದಿದ್ದಾರೆ. ರಾಜು ಕಡಪಟ್ಟಿ ಸಧ್ಯ ಹುಬ್ಬಳ್ಳಿಯಲ್ಲಿ ವಾಸವಾಗಿದ್ದಾರೆ. ಇನ್ನೊಬ್ಬ ಸಹೋದರ ವಿಜಯ ೧೬ ವರ್ಷದವನಿದ್ದಾಗಲೇ ಶಿವಾಧೀನರಾಗಿದ್ದಾರೆ. ಇನ್ನು ಪ್ರಕಾಶರ ಸಹೋದರಿ ಶಾರದಾ ಕಂಪನಿಗಾಗಿ ಸಾಕಷ್ಟು ಸಹಾಯ ಸಹಕಾರ ಮಾಡಿದ್ದಾರೆ. ಡಾಕ್ಟರ ಮೃತ್ಯುಂಜಯ ಅವರನ್ನು ಮದುವೆಯಾಗಿ ನೆಮ್ಮದಿಯಾಗಿ ಹುಬ್ಬಳ್ಳಿಯಲ್ಲಿ ಜೀವನ ನಡೆಸಿದ್ದಾರೆ.

# ರಂಗಾಸಕ್ತರು ಕಂಡಂತೆ ಪ್ರಕಾಶ

ಶ್ರೀ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ ಕಂಪನಿ ಪ್ರಾರಂಭದ ದಿನದಿಂದಲೂ ಜೊತೆಯಾಗಿದ್ದು ರಂಗಸೇವೆಗೈದ ಹುನ್ನೂರು ಗ್ರಾಮದ ಹಿರಿಯ ಕಲಾವಿದರಾದ ಕೆ.ಆರ್. ಮಹಲಿಂಗಪ್ಪ ಅವರನ್ನು ಸಂದರ್ಶಿಸಿದಾಗ ಹೇಳಿದ ಒಂದೆರಡು ಮಾತುಗಳು:

"ಹುನ್ನೂರು ಗ್ರಾಮದ ನಾವೆಲ್ಲ ಕಲಾವಿದರು ಶ್ರೀ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ ಕಂಪನಿಯಲ್ಲಿ ಶ್ರದ್ಧೆ ನಿಷ್ಠೆಯಿಂದ ದುಡಿದಿದ್ದೇವೆ. ನಮ್ಮ ನಾಟಕಗಳನ್ನು ಪ್ರತಿಯೊಬ್ಬರು ೨೦-೩೦ ಸಾರಿ ನೋಡುತ್ತಿದ್ದರು. ನಾಟಕಗಳು ಅಷ್ಟು ಅಚ್ಚುಕಟ್ಟಾಗಿ ಕುಳಿತಿದ್ದವು. ಪ್ರಕಾಶ ಬಗ್ಗೆ ಹೇಳಬೇಕಾದರೆ ಅವನು ಎಂದಿಗೂ ಯಾರಿಗೂ ವರಟು ಮಾತನಾಡಿದವನಲ್ಲ, ಕಂಪನಿಯ ಮಾಲಿಕಗಿರಿ ಎಂದೂ ತೋರಿಸಿದವನಲ್ಲ. ಹಿರಿಯರಿಂದ ಕಿರಿಯರವರೆಗೂ ಅತ್ಯಂತ ಗೌರವದಿಂದ ಮಾತನಾಡುವ ಸ್ವಭಾವ ಅವನದು. ಗೇಟ ಕಾಯುವ ಹುಡಗರಿಗೂ 'ರೀ' ಹಚ್ಚಿ ಮಾತನಾಡುತ್ತಿದ್ದ. ಇನ್ನು ಪ್ರಕಾಶನ ಪಾತ್ರದ ಬಗ್ಗೆ ಹೇಳಬೇಕೆಂದರೆ ಅವನ ಚುರುಕುತನದ ಅಭಿನಯಕ್ಕೆ ಜನ ಸಕ್ಕರಿಗೆ ಇರುವೆ ಮುಕ್ಕೆ ಬಿದ್ದ ಹಾಗೆ ಬೀಳುತ್ತಿದ್ದರು. ಇನ್ನು 'ಮದನ ಮೋಹನ' ನಾಟಕದ ಬಸವಣ್ಣನ ಭಕ್ತಿ ಗೀತೆಗಂತು ಶಂಕ್ರಯ್ಯನವರಿಗೆ ಮತ್ತು ಪ್ರಕಾಶನಿಗೆ ಜನ ಬಂದು ಹಣ ಕೊಡುವದಲ್ಲದೇ ಕಾಲಿಗೆ ಬೀಳುತ್ತಿದ್ದರು. ಅದನ್ನು ನೋಡಿ ನಮಗೆಲ್ಲಾ ಆಶ್ಚರ್ಯವಾಗುತ್ತಿತ್ತು. ಒಟ್ಟ ಆಕಾಶದ ತುದಿ ತನಕ ಪ್ರಕಾಶನ ಹೆಸರು ಹೋಗಿತ್ತು. ಜೀವನದ ಕಾಲಚಕ್ರ ತಿರಗೂದ. ಮ್ಯಾಲೆ ಹೋಗುದು, ಕೆಳಗ ಬರೂದು ಇರೂದ. ಈಗ ಪ್ರಕಾಶನ ಕಲಾಬದುಕಿನ ಕಾಲಚಕ್ರ ಕೆಳಗ ಬಂದೈತಿ, ಏನ ಇದ್ದರೂ ಪ್ರಕಾಶ ನಮ್ಮ ಹುಡುಗ. ಕಡಪಟ್ಟಿ ಊರ ಹೆಸರು ಬೆಳಗಿಸಿದವ ಮತ್ತ ಆ ಕಾಲಚಕ್ರ ತಿರಗಿ ಮ್ಯಾಲ ಬರತ್ತ ಅನ್ನೂದ ನಮ್ಮ ಹುನ್ನೂರು ಗ್ರಾಮದವರ ಮತ್ತು ಕಡಪಟ್ಟಿ ಗ್ರಾಮದವರ ಮಹದಾಸೆ."

## ಈಶ್ವರ ಮಂಟೂರ

೩೫ ವರ್ಷಗಳ ಕಾಲ ಸ್ತ್ರೀ ಪಾತ್ರ ವಹಿಸಿ ಮಡಿವಂತಿಕೆ ಮತ್ತು ಸಚ್ಚಾರಿತ್ರಗಳಿಂದ ರಂಗಭೂಮಿಯ ಸೇವೆಗೈದ ಶ್ರೀ ಶೈಲಪ್ಪ ಮಂಟೂರವರ ಪುತ್ರರಾದ ಈಶ್ವರ ಮಂಟೂರ ಇಂದು "ಬಸವಜ್ಞಾನ ಗುರುಕುಲ ಹುನ್ನೂರ ಮದರಖಂಡಿ ಪೂಜ್ಯ ಶರಣರಾದ ಡಾ॥ ಈಶ್ವರ ಮಂಟೂರ"ವರು.

"ಕಡಪಟ್ಟಿಯ ಪೂಜ್ಯ ಶ್ರೀ ಶಂಕರಯ್ಯ ಸ್ವಾಮಿ ಕಾಡದೇವರಮಠರು ಅಪರೂಪದ ನಾಟಕಕಾರರು. ಅವರ ಮಗ ಪ್ರಕಾಶ ವಿಶಿಷ್ಟ ಕಲಾಪ್ರತಿಭೆಯುಳ್ಳ ನಟ–ನಿರ್ದೇಶಕ ನಾಟಕ ರಚನೆಕಾರ. ತಂದೆ ಶಂಕ್ರಯ್ಯನವರು ಸುವರ್ಣಖಂಡಿ ಬಸವೇಶ್ವರರ (ಪವಾಡ ಬಸವೇಶ್ವರರ) ಪೂಜಾರಿಗಳು. ಪಟವರ್ಧನ ಮಹಾರಾಜರು ೪೪ ಚೌರ (೧ ಚೌರ = ೪. ಕೂರಿಗೆ) ಭೂಮಿಯನ್ನು ದೇವಸ್ಥಾನದ ಪೂಜಾರಿಗಳಿಗೆ ದಾನ ನೀಡಿದ್ದರಂತೆ. ರಾಮತೀರ್ಥದ ರಾಮೇಶ್ವರ ದೇವಸ್ಥಾನದ ಪೂಜೆಯನ್ನು ಕೈಕೊಂಡ ಶ್ರೀ ಶಂಕ್ರಯ್ಯನವರು ರಾಜಾಶ್ರಯದಲ್ಲಿಯೇ ಬೆಳೆದರು."

"ಶ್ರೀಯುತನು ಉದಾರಿಯಾದರೆ ವಿದ್ವಾಂಸನು ನಿರ್ಮತ್ಸರಿಯಾದರೆ ಕವಿಗಳು ಕೃತಾರ್ಥರಾಗುವರು, ಎಂದು ರನ್ನ ಗದಾಯುದ್ಧ ದರ್ಪಣದಲ್ಲಿ ಹೇಳುತ್ತಾನೆ. ಪಟವರ್ಧನ ಮಹಾರಾಜರು ಇವರಿಗೆ ಸಹಕಾರ ನೀಡಿದವರು. ಬಸವ ಕರುಣೆಯಿಂದ ೧೯೬೮ ರ ದಸರಾ ಹಬ್ಬದ ದಿನ ಶಂಕ್ರಯ್ಯನವರು ನಾಟಕ ಕಂಪನಿ ಆರಂಭಿಸಿದರು. ತಮ್ಮ ತಂದೆಯ ಬಳುವಳಿಯಾಗಿ ರಂಗಕರ್ಮಿಗಳಾಗಿ ಬಾಲ ನಟರಾಗಿ ರಂಗಭೂಮಿ ಪ್ರವೇಶಿಸಿದ ಪ್ರಕಾಶರು ಹರೆಯದ ಮುಂಚೆಯೇ ನಾಟಕ ಕಂಪನಿಗಳಲ್ಲಿ ವೃತ್ತಿ ಜೀವನಕ್ಕೆ ಪಾದಾರ್ಪಣೆ ಮಾಡಿದರು. ಅಂದು ತಾವು ಅಂಟಿಸಿಕೊಂಡ ನಾಟಕದ ನಂಟಿನಿಂದ ಇನ್ನೂ ಹೊರಗೆ ಬರಲು ಆಗಿಲ್ಲ. ರಂಗ ಲೋಕದಲ್ಲಿ ಪ್ರಕಾಶರವರದು ಎಲ್ಲರೂ ಮೆಚ್ಚುವಂತಹ ಸಾಧನೆ. ಅವರ ಸಾಧನೆ ಸಾಕಷ್ಟಿದ್ದರೂ ಪ್ರಕಾಶರು ಬೀಗುವ ಜಾಯಮಾನದವರಲ್ಲ. ತಾವೇ ಕಟ್ಟಿದ ಕಂಪನಿಯಲ್ಲಿ ಅನಾವರಣಗೊಂಡ ಚನ್ನಪ್ಪ ಚನ್ನಗೌಡ ನಾಟಕ ಹುಬ್ಬಳ್ಳಿಯಲ್ಲಿ ೧೦೦೦ ನಾಟಕಗಳನ್ನು ಪೂರೈಸಿದ್ದು ಸಣ್ಣ ಮಾತೇನಲ್ಲ. ತಾವು ಬರೆದ ನಾಟಕಗಳನ್ನಷ್ಟೆ ಪ್ರದರ್ಶನ ಮಾಡಬೇಕು ಎಂಬ ಮನದ ಭಾವ ಚನ್ನಪ್ಪ ಚನ್ನಗೌಡ ನಾಟಕಕ್ಕೆ ಬದಲಾವಣೆ ಕಂಡಿತು. ಮಹಿಮಾ ಪುರುಷ ನಿನ್ನ ನಾಮ ಹರುಷ ಜಗಜ್ಯೋತಿ ಶ್ರೀ ಬಸವೇಶ್ವರ ಎಂಬ ಹಾಡು ಪ್ರೇಕ್ಷಕರನ್ನು ಭಕ್ತಿ ಸಾಗರದಲ್ಲಿ ಮೀಯುವಂತೆ ಮಾಡಿತ್ತು, ಅವರ ನಾಟಕದ ಹಾಡುಗಳಿಗೆ ಮಾನವೀಯತೆಯ ಸ್ಪರ್ಶವಿತ್ತು."

"ಅವರ ಅಪಾರ ಅನುಭವದ ಮೂಸೆಯಲ್ಲಿ ಅರಳಿದ ನಾಟ್ಯ ಕುಸುಮಗಳು ೨೫ಕ್ಕೂ ಅಧಿಕ. ಹತ್ತು ಹಲವಾರು ನಾಟಕ ಕಂಪನಿಗಳಲ್ಲಿ ವಿವಿಧ ಪಾತ್ರಗಳ ಮೂಲಕ ಪ್ರೇಕ್ಷಕರ ಹೃದಯ ಗೆದ್ದು ಅನೇಕ ಸಂಘ ಸಂಸ್ಥೆಗಳ ಮೂಲಕ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ. ರಂಗ ದೇವಿಯ ಆರಾಧಕರಾದ ಪ್ರಕಾಶರು ಹಾಡಿ, ಕುಣಿದು, ಬರೆದು ದಣಿದವರಲ್ಲ. ಅವರದು ದಣಿವರಿಯದ ಬದುಕು. ೫೧ ವರ್ಷಗಳಿಂದ ಪ್ರಕಾಶರು ಬೀರುತ್ತಿರುವ ಪ್ರಭೆ ಕಳೆಗುಂದಿಲ್ಲ. ಆದರೆ ಅವರ ಬದುಕು ಬಣ್ಣಗಳಾಗಿ ರೂಪಗೊಳ್ಳಲಿಲ್ಲ. ಕಷ್ಟಗಳ ವಿಧಿ ಸುರಿಸೇ ಕಲ್ಲಾಗಿ ಬಂಡೆಗಲ್ಲಾಗಿ ತಲೆ ಕೊಟ್ಟು ಎದರಿಸಿದ ಜೀವನ ಹೂವಿನ ಹಾಸಿಗೆ ಆಗಲಿಲ್ಲ

ಆದರೂ ನಮ್ಮೆಲ್ಲರ ಮಧ್ಯದಲ್ಲಿ ಪ್ರಕಾಶರು ಇನ್ನೂ ಎರಡಿಪ್ಪತ್ತರ ಮೇಲೆ ನಾಲ್ಕು ವರ್ಷ ಇರಲಿ ಎಂಬುದೇ ನಮ್ಮ ಹಾರೈಕೆ."

## ರಾಜು ತಾಳಿಕೋಟಿ

"ಕಡಪಟ್ಟಿಯವರ ಕಂಪನಿಯಲ್ಲಿ ನನ್ನ ತಾಯಿ ಮಾಬೂಬಿ, ಅಕ್ಕ ಬೇಬಿ ಪಾತ್ರ ಮಾಡುತ್ತಿದ್ದರು. ನಾನಾಗ ಖಾಸ್ಗತೇಶ್ವರ ಮಠದಲ್ಲಿ ಓದುತ್ತಿದ್ದೆ, ರಜಾ ದಿನದಲ್ಲಿ ಕಂಪನಿಗೆ ಬರುತ್ತಿದ್ದೆ. ಬಿಜಾಪುರ ಕ್ಯಾಂಪಿದ್ದಾಗ ನಾನು ನನ್ನ ತಾಯಿಯ ಬಳಿ ಬಂದಿದ್ದೆ. ಆಗ ನನಗೆ ಹತ್ತು ವರ್ಷ. ಪ್ರಕಾಶರ ಚಿನ್ನದ ಗೊಂಬೆ ನಾಟಕ ೩೬೫ ದಿನಗಳವರೆಗೆ ಪ್ರದರ್ಶನ ಕಂಡಿತು. ಆ ನಾಟಕದಲ್ಲಿ ನನ್ನ ತಾಯಿ ಶಕುಂತಲಾ (ಅತ್ತೆ) ಪಾತ್ರ ಮಾಡುತ್ತಿದ್ದರು. ಅಮೇಲೆ ಸತಿ ಸಂಸಾರದ ಜ್ಯೋತಿ ನಾಟಕ ನಡೆಯಿತು. ನಮ್ಮಕ್ಕ ಬೇಬಿ ರಾಣಿ(ಬಾಲ) ಪಾತ್ರ ಮಾಡುತ್ತಿದ್ದಳು. ಆಗ ತಾನೆ ಧರ್ಮವೀರ ಹಿಂದಿ ಸಿನೆಮಾ ಬಿಡಗಡೆ ಆಗಿತ್ತು. ಅದರಲ್ಲಿನ "ಹಮ ಬಂಜಾರೊಂಕಿ ಬಾತ ಮತ ಪೂಚೋಜಿ । ಜೋ ಪ್ಯಾರ ಕಿಯಾ, ತೊ ಪ್ಯಾರ ಕಿಯಾ । ಜೋ ನಫರತ ಕೀ, ತೊ ನಫರತ ಕೀ । ಅಚ್ಛಾ ಯೇ ಬಾತ ಹೈ ತೋ ಫಿರ ಆಯೆಂಗೆ" ಈ ಹಾಡಿನ ಧಾಟಿಗೆ ಪ್ರಕಾಶ ಅವರು ಕನ್ನಡದಲ್ಲಿ "ಬಾ ರಾಣಿ ಬಾಜಾರದಲ್ಲಿ ಕುಣಿದಾಡು । ಜನ ಕೂಡಿದರು, ಹಣ ಕೊಡುತಿಹರು । ಈ ನರ್ತನಕೇ, ಈ ನರ್ತನಕೆ" ಅಂತ ಹಾಡು ರಚಿಸಿ ಹಾಡುತ್ತಿದ್ದರು. ನಾನು ಚಿಕ್ಕವನ್ನಿದ್ದಾಗಲೇ ಆ ಹಾಡು ನನ್ನನ್ನು ಮೆಚ್ಚಿಸಿಬಿಟ್ಟಿತ್ತು. ಇಡೀ ಬಿಜಾಪುರವೇ ಮೆಚ್ಚಿಕೊಂಡಾಗ ನನಗಿನ್ನೂ ಆಗ ಹತ್ತು ವರ್ಷ, ನನ್ನದ್ಯಾವ ಲೆಕ್ಕ ಬಿಡಿ."

"ಸಂಗಮ ನಾಟಕದಲ್ಲಿ ನನ್ನ ತಾಯಿ, ಮಲತಾಯಿ ಗಂಗಮ್ಮಳ ಪಾತ್ರ, ಪ್ರಕಾಶರು ಮಲಮಗ ರಾಜೇಶನ ಪಾತ್ರ ಮಾಡುತ್ತಿದ್ದರು. ಮಲಮಗನಿಗೆ ಮಲತಾಯಿ ಕೈ ಮೇಲೆ ಬರಿ ಕೊಡುವ ಪ್ರವೇಶವಿತ್ತು. ಒಂದು ದಿನ ನಾಟಕ ನಡೆದಾಗ ಆ ಪ್ರವೇಶಕ್ಕೆ ಒಬ್ಬ ಪ್ರೇಕ್ಷಕ ನನ್ನ ತಾಯಿಗೆ ಚಪ್ಪಲಿ ಒಗದಿದ್ದ, ಅಷ್ಟು ಜನರ ಮೇಲೆ ಪರಿಣಾಮ ಬೀರುವಂತೆ ನನ್ನ ತಾಯಿ ಮತ್ತು ಪ್ರಕಾಶರು ಅಭಿನಯಿಸುತ್ತಿದ್ದರು. ನಾನು ಆ ಪ್ರವೇಶಕ್ಕೆ ದಿನಾ ಮುಂದೆ ಕುಳಿತು ಅಳುತ್ತಿದ್ದೆ. ಪ್ರಕಾಶರ ಹಾಡುಗಳು ಬಂದರೆ ಸಾಕು ನಾನು ಓಡಿ ಬಂದು ತಬಲಾ ಕಟ್ಟಿಗೆ ಕೂಡುತ್ತಿದ್ದೆ. ಅವರು ಹಾಡಲು ಪ್ರಾರಂಭ ಮಾಡಿದರೆ ನಾನು ಮುಂದೆ ಕುಳಿತು ಬಾಯಿಂದ ತಬಲಾ ಬಾರಿಸಿದಂತೆ ಶಬ್ದ ಮಾಡುತ್ತಿದ್ದೆ, ಚಪ್ಪಾಳೆ ಹೊಡೆಯುತ್ತಿದ್ದೆ, ಇದನ್ನು ಕಂಡ ಪ್ರಕಾಶರು, ನಿಮ್ಮ ಹುಡುಗ ಮುಂದೆ ಕುಳಿತು ಗಲಾಟೆ ಮಾಡುತ್ತಾನೆ, ಅವನಿಗೆ ಸ್ವಲ್ಪ ಹೇಳರಿ ಅಂತ ನನ್ನ ತಾಯಿಗೆ ಹೇಳಿದ್ದರು. ಅಂದಿನಿಂದ ನನ್ನು ತಬಲಾ ಕಟ್ಟಿ ಸ್ಥಳ ಬಂದಾಯಿತು. ಆದರೂ ಪ್ರಕಾಶರ ಹಾಡು ಪ್ರಾರಂಭವಾದರೆ ಓಡಿ ಬಂದು ಗೇಟಲ್ಲಿ ನಿಂತು ಸೀಟಿ

ಹಾಕುವದು, ಕುಣಿದಾಡುವದು ಮಾಡುತ್ತಿದ್ದೆ. ನನಗಾಗ ಖುಷಿಯೋ ಖುಷಿ."

ಕಲಕೇರಿ ಜಾತ್ರೆ, ಚಿನ್ನದ ಗೊಂಬೆ ನಾಟಕ ೨೫ ನೇ ಪ್ರಯೋಗ ಕಂಡಾಗ ಪ್ರಕಾಶರನ್ನು ಜಾತ್ರೆಯಲ್ಲಿ ಮೆರವಣಿಗೆ ಮಾಡಿಸಿದ್ದರು, ನಾನು, ನಂದೇ ಮೆರವಣಿಗೆ ಎಂಬಂತೆ ಅವರ ಮುಂದೆ ಹೊರಟಿದ್ದೆ. ಮೆರವಣಿಗೆ ಮುಗಿಯುವವರೆಗೂ ಅವರ ಮುಂದಿನ ಸ್ಥಳ ಬಿಟ್ಟು ನಾನೇನು ಕದಲಿರಲಿಲ್ಲ. ಕಂಪನಿಯಲ್ಲಿ ಎಲ್ಲರಿಗೂ ಅಂದು ಊಟಕ್ಕೆ ಬಾಳೆ ಹಣ್ಣಿನ ಸೀಕರಣೆ ಚಪಾತಿ ಮಾಡಿಸಿದ್ದರು, ನಾನು ಅಂತಹ ಒಳ್ಳೆಯ ಊಟ ಮಾಡಿದ್ದು ಅದೇ ಮೊದಲು. ಸುಮಾರು ಐದು ವರ್ಷಗಳವರೆಗೂ ಸೇವೆ ಸಲ್ಲಿಸಿದ ನನ್ನ ತಾಯಿ ಮತ್ತು ಅಕ್ಕ ಕಂಪನಿ ಬಿಟ್ಟು ಇಳಕಲ್‌ಗೆ ಹೋದರು. ಅಂದಿನಿಂದ ಕಂಪನಿಗೆ ಬರುವ ದಾರಿ ನನ್ನ ಪಾಲಿಗೂ ಬಂದಾಯಿತು. ಆದರೆ ಪ್ರಕಾಶರ ಮೇಲಿನ ಅಭಿಮಾನ ನನ್ನನ್ನು ಸುಮ್ಮನೆ ಬಿಡಲಿಲ್ಲ, ಓದು ನಿಲ್ಲಿಸಿ ಕಂಪನಿಗೆ ಸೇರುವಂತೆ ಮಾಡಿತು. ೧೯೮೧-೮೨ ರಲ್ಲಿ ಕಡಪಟ್ಟಿ ಕಂಪನಿಗೆ ಕೆಲಸದವನಾಗಿ ಸೇರಿದೆ. ರಂಗಪಾರ್ಟಿ ಮಾಡುವದು, ಗೇಟಿಗೆ ನಿಲ್ಲುವದು ಒಟ್ಟು ಅವರು ಏನೇ ಕೆಲಸ ಹೇಳಿದರೂ ಖುಷಿಯಿಂದ ಮಾಡುತ್ತಿದ್ದೆ. ಸೈಡ ವಿಂಗ್ಸಲ್ಲಿ ನಿಂತು ಪ್ರಕಾಶರ ಪಾತ್ರಗಳನ್ನು ನೋಡುವದೇ ನನಗೊಂದು ಹಬ್ಬ, ಆ ನೆನಪುಗಳು ನನ್ನಲ್ಲಿನ್ನೂ ಹಸಿರಾಗಿ ಉಳಿದಿವೆ. ನಾನಿವತ್ತು ಕಂಪನಿ ಕಟ್ಟಿ ಉತ್ತರ ಕರ್ನಾಟಕದ ಜನರಿಗೆ ಮೆಚ್ಚುಗೆ ಆಗಿರುವೆನೆಂದರೆ, ಚಲನಚಿತ್ರ ನಟನಾಗಿ ಇಡೀ ಕರ್ನಾಟಕಕ್ಕೆ ಪರಿಚಿತನಾಗಿದ್ದೇನೆಂದರೆ ಪ್ರಕಾಶರ ಅಭಿನಯದ ಹಾಗೂ ಅವರ ಹಾಡಿನ ಆಕರ್ಷಣೆಯಿಂದ ಮತ್ತು ಖಾಸ್ಗತೇಶ್ವರ ಅಜ್ಜನ ಅನುಗ್ರಹದಿಂದ. ನಾನು ನಟನಾದಾಗ ಅರಷಿಣಗೋಡಿ ಕಂಪನಿಯಲ್ಲಿ ಪ್ರಕಾಶರು, ನಾನು ಒಟ್ಟಾಗಿ ಸೇವೆ ಸಲ್ಲಿಸಿದ್ದೇವೆ. ನಾನು ರಸಮಂಜರಿ ಪ್ರಾರಂಭಿಸಿದಾಗ ಪ್ರಕಾಶವರ ಮಗಳು ವೀಣಾಳನ್ನು ಹಾಡಲು ಕರೆಸುತ್ತಿದ್ದೆವು. ಈಗ ನನ್ನ ಕಂಪನಿಯಲ್ಲಿ ಪ್ರಕಾಶರು ಬರೆದ ನಾಲ್ಕು ನಾಟಕಗಳನ್ನು ಕೂಡ್ರಿಸಿದ್ದೇನೆ. ಅವರ ಅಭಿಮಾನಿಯಾಗಿ ಅವರಿಗೆ ನಾನು ಸಲ್ಲಿಸಿರುವ ಗೌರವವಾದರೂ ಆ ನಾಟಕಗಳಿಂದ ನನ್ನ ಕಂಪನಿಗೆ ಸಾಕಷ್ಟು ಲಾಭವಾಗಿದೆ. ಅವರ ನಾಟಕಗಳು ವೃತ್ತಿ ರಂಗಭೂಮಿಗೆ ಒಪ್ಪುವಂತಹ ನಾಟಕಗಳು ಕಂಪನಿಗಳ ಪೈಪೋಟಿ ನಡೆಯುವ ಜಾತ್ರಾ ಕ್ಯಾಂಪುಗಳಲ್ಲಿ ಪ್ರಕಾಶರ ನಾಟಕಗಳಿಂದಲೇ ನಾವು ಸಾಕಷ್ಟು ಬಾರಿ ಜಯ ಸಾಧಿಸಿದ್ದೇವೆ. ಅವರಲ್ಲಿರುವ ಕಲೆಗೆ ನಾನೆಂದಿಗೂ ಋಣಿ."

## ಎಲ್.ಆರ್. ಬೂದಿಹಾಳ

"ಆವಾಗ ನನಗ ೧೦-೧೨ ವರ್ಷ ಇರಬಹುದು. ನಮ್ಮ ಯಡಹಳ್ಳಿ ಪಕ್ಕದ ಗಲಗಲಿ ಪಟ್ಟಣದೊಳಗ ಕಡಪಟ್ಟಿ ನಾಟಕ ಕಂಪನಿ ಬಂದೈತಿ ಅಂತ ಕುದರೆ

ಟಾಂಗಾದಲ್ಲಿ ಪ್ರಚಾರ ಮಾಡುತ್ತಾ ಬೀದಿ ಬೀದಿಗಳಲ್ಲಿ ಜನರತ್ತ ಪ್ರಚಾರಕ ತೂರಿದಂತಹ ಹ್ಯಾಂಡಬಿಲ್ಲಗಳಿಂದ ನನಗೂ ಗೊತ್ತಾಗಿತ್ತು. ಗಲಗಲಿಗೆ ನಾಟಕ ಕಂಪನಿ ಬಂದೈತಿ ಅನ್ನೂದ ಗೊತ್ತಾಗಿದ್ದ ತಡಾ, ಮೊದಲೇ ನಾಟಕ ನೋಡುವ ಗೀಳಿನ ನಮ್ಮವ್ವಗ ಎಲ್ಲಿಲ್ಲದ ಖುಷಿ. ನಮ್ಮೂರಿಂದ ಗಲಗಲಿ ೪ ಕಿ.ಮೀ. ಅಂತರ. ಹಳ್ಳ್ಯಾಗಿನ ಮಂದಿ ರಾತ್ರಿ ನಾಟಕ ನೋಡಾಕ ಗುಂಪು-ಗುಂಪಾಗಿ ಬಂಡಿ ಹೂಡಕೊಂಡ ಬೇಕಾದವರನ್ನು ಕರಕೊಂಡ ಹೋಗೋರು. ಅಂತಹ ಯಾವದಾದರೂ ಗುಂಪ ಹೊಂಟೈತಿಯಂದ್ರ ಆ ಗುಂಪಿನ ಸದಸ್ಯಳು ನಮ್ಮವ್ವ ಆಗ್ತಾಳ ಅಂತ ಲೆಕ್ಕ. ನಮ್ಮಪ್ಪ ಪಕ್ಕದ ಹಳ್ಳ್ಯಾಗ ಶ್ರೀಮಂತರ ಹತ್ತಿರ ದುಡಿಯಾಕಿದ್ದ. ನನ್ನ ಒಬ್ಬನ ಬಿಟ್ಟು ನಾಟಕಕ್ಕ ಹ್ಯಾಂಗ ಹೋಗುದು ಅಂತ ನನ್ನನ್ನೂ ಕರಕೊಂಡ ಹೋಗುದು ಅಂತ ನಮ್ಮವ್ವ ತೀರ್ಮಾನ ತೊಗೊಂಡ್ಳು. ನಾಟಕದ ಒಳಗಡೆ ಪ್ರವೇಶ ಫೀ ಒಂದು ರೂಪಾಯಿ ನೆಲ ಆಗಿತ್ತು. ಅವಾಗ ಒಂದು ರೂಪಾಯಿ ಅಂದರ ಅದರ ಕಿಮ್ಮತ್ತ ಬ್ಯಾರೆ. ಆ ಒಂದು ರೂಪಾಯಿ ಉಳಸಾಕ ನಮ್ಮವ್ವ ನನನ್ನ ತನ್ನ ಬಗಲಾಗ ಕುಂಡಿರಿಸಿಕೊಂಡು, ಉದ್ದುದ್ದ ನನ್ನ ಕಾಲನ್ನ ಹತ್ಯಾಗ ಹಿಡಕೊಂಡು ನನ್ನ ತಲಿ ಮ್ಯಾಲ ಸೀರಿ ಸೆರಗ ಹೊದಿಸಿ ನನಗ ಮಲಗಿ ನಿದ್ರಿ ಮಾಡುವಂಗ ಹೇಳಿದ್ಲು. ಗೇಟನ್ಯಾಗಿಂದ ಒಳಗ ಒಂದು ರೂಪಾಯಿ ಟಿಕೀಟಿನ ಮ್ಯಾಲ ನಾನು ನಮ್ಮವ್ವ ಹ್ವಾದೀವಿ. ಒಳಗಡೆ ಹೋಗಿದ್ದ ತಡಾ ನಮ್ಮವ್ವನ ಬಗಲಾಗಿಂದ ಜಿಗದವ್ನ ಓಡೋಡಿ ನೆಲದ ಮುಂದಿನ ಸಾಲನ್ಯಾಗ ಕುಂತಬಿಟ್ನಿ. ಕಣ್ಣಿಗಿ ಕಣ್ಣ ಹಚ್ಚಲಾರದ ಬಿಟ್ಟ ಕಣ್ಣಿನಿಂದ ತಲೆ ಎತ್ತರಿಸಿ-ಎತ್ತರಿಸಿ ನಾಟಕ ನೋಡಿದ್ದೆ. ಹಿಂಗ ನಾನು ಕಡಪಟ್ಟಿ ಪ್ರಕಾಶವರ ಕಂಪನಿ ಗಲಗಲಿಯೊಳಗ ಇರುತನಕ ನಾಯೇನ ನಮ್ಮವ್ವನ ಬಗಲಾಗ ಕುಂಡ್ರೂದ ಮರಿಲಿಲ್ಲ, ಒಂದು ರೂಪಾಯಿ ಕೊಟ್ಟು ಟಿಕೀಟ ಪಡಿಲಿಲ್ಲ. ಒಂದ ದಿನ ನಾಟಕಕ್ಕ ಹೋಗಿದ್ವಿ, ನಾಟಕದ ಹೆಸರು ಚಿನ್ನದ ಗೊಂಬೆ. ಏನ ಭಾರಿ ನಾಟಕ ಅಂದ್ರ ಅಬಬಬಾ ಹೇಳಾಕ ಆಗುದಿಲ್ಲ. ಆದರ ಒಂದಂತೂ ಹೇಳಾಕಬೇಕು. ಆ ನಾಟಕದೊಳಗ ಗಂಡಾ-ಹೆಂಡತಿ ಪಾತ್ರ ಮಾಡಿದ ಪ್ರಕಾಶರು ಮತ್ತು ಸುನಂದಾರವರು ಒಂದ ಹಾಡ ಹಾಡ್ತಿದ್ದರು "ಚೆಲುವೆಯ ಅಂದದ ಮೊಗಕೇ ಕಣ್ಣೇ ಭೂಷಣ" ಈ ಹಾಡು ಅವಾಗ ಬಹಳ ಪ್ರಖ್ಯಾತ ಆಗಿತ್ತು. ಆ ಹಾಡು ಇವತ್ತಿಗೂ ನನ್ನ ಕಣ್ಣ ಮುಂದ ಕಟ್ಟಿದಂಗೈತಿ."

"ನಾನು ಮ್ಯಾಟ್ರಿಕ್ ಪಾಸ್ ಆಗಿ ೮೪ರ ಅವಧಿ ಆಗಿರಬಹುದು ಕೆಲಸ ಹುಡಕೊಂಡು ಹುಬ್ಬಳ್ಳಿಗೆ ಬಂದೆ. ಕಡಪಟ್ಟಿ ಪ್ರಕಾಶವರ ನಾಟಕ ಕಂಪನಿ ಹುಬ್ಬಳ್ಳಿಯೊಳಗ ಕ್ಯಾಂಪ ಹಾಕಿದ್ದು ಚನ್ನಪ್ಪ ಚನ್ನಗೌಡ ನಾಟಕ ನೂರಾರು ಪ್ರಯೋಗದೊಳಗ ಮುನ್ನಡೆದಿದ್ದು ತಿಳೀತು. ನಮ್ಮವ್ವ ಯಾವ ಸಮಯದಾಗ ನನಗ ನಾಟಕ ತೋರಸಿದಲೋ ನನಗ ನಾಟಕ ಹುಚ್ಚು ಹಿಡದ ಬಿಟ್ಟಿತ್ತು. ಕೆಲಸ ಆಮ್ಯಾಲ ಹುಡಕಿದ್ರಾತು ಅಂದವ್ನ ಸೀದಾ ಕಂಪನಿಗೇ ಹ್ವಾದೆ. "ಅವತ್ತ ನೋಡ್ರಿ, ನಾ ರೊಕ್ಕ ಕೊಟ್ಟು ಕುರ್ಚಿ ಟಿಕೀಟ ತೊಗೊಂಡು ಮುಂದಿನ ಸಾಲಿನ್ಯಾಗ ಕುಂತಿದ್ದು". ರಂಗದ

ಮ್ಯಾಲ ಪ್ರಕಾಶರು ಕಾಣಿಸಿಕೊಂಡಾಗ ಕುಂತಲ್ಲಿಂದ ಎದ್ದು ನಮಸ್ಕಾರ ಮಾಡಿದೆ. ಅಲ್ಲಿಂದಲೇ ಅವ್ರು ಮುಗುಳ್ನಗೆಯಿಂದ ನನ್ನ ನಮಸ್ಕಾರ ಸ್ವೀಕಾರ ಮಾಡಿದ್ರು. ಸುತ್ತೂ ಕುಂತ ಮಂದಿ ನನ್ನ ನೋಡಿದ್ರು."

"ಮುಂದ ಒಂದ ಸಲ ಅವರನ್ನು ನೇರವಾಗಿ ಪರಿಚಯ ಮಾಡಿಕೊಳ್ಳುವಂತ ಪ್ರಸಂಗ ಬಂತು. ತಮ್ಮ ಸಹೋದರ ದಿಲೀಪನಿಗೆ ನಮ್ಮೂರಿಂದ ಕನ್ಯ ತಗೊಂಡಿದ್ದರ ಪರಿಣಾಮವಾಗಿ ಸಲುಗೆ ಆಯ್ತು. ನನಗೂ ಕೆ.ಎಸ್.ಆರ್.ಟಿ.ಸಿ. ಒಳಗ ಕೆಲಸಾನೂ ಸಿಕ್ಕಿತ್ತು ನಾನೂ ಆಗಲೇ ನಮ್ಮೂರಾಗ ಕಲಾವಿದನಾಗಿದ್ದೆ, ಅದೂ ಪ್ರಕಾಶ ಕಡಪಟ್ಟಿಯವರೇ ಬರೆದಿರುವಂತಹ "ಸತಿ ಸಂಸಾರದ ಜ್ಯೋತಿ" ನಾಟಕ. ಅದರಲ್ಲಿ ಜಗದೀಶನ ಪಾತ್ರ ಮಾಡಿ ಬೇಷ ಅನಸಿಕೊಂಡಿದ್ದೆ. ಪ್ರಕಾಶರವರ ಕಂಪನಿ ಹುಡುಕಿಕೊಂಡು ನಾಟಕ ನೋಡಾಕ ಹೋಗು ಚಾಳಿ ಇತ್ತು. ಮುಂದೊಂದು ದಿನ ಕಡಪಟ್ಟಿ ಕಂಪನಿ ಹಾನಿ ಅನುಭವಿಸುತ್ತಿರುವದನ್ನು ಕೇಳಿ ತಿಳಿದುಕೊಂಡೆ. ಯಾವ ಗಲಗಲಿಯಲ್ಲಿ ಕಡಪಟ್ಟಿ ಕಂಪನಿ ಆರ್ಥಿಕ ಸಫಲವಾಗಿ ಪ್ರಖ್ಯಾತಿ ಪಡೆದು ಕಲೆಯ ರಸದೌತಣವನ್ನು ಜನರಿಗೆ ನೀಡಿ ಜನರ ಅಭಿಮಾನವನ್ನು ಗಳಿಸಿತ್ತೋ ಅದೇ ಗಲಗಲಿಗೆ ಮತ್ತೆ ಮರಳಿ ಬಂದು ಕ್ಯಾಂಪ ಹಾಕಿತ್ತು. ಭೂಮಿ ತೂಕದ ಹೆಣ್ಣು ನಾಟಕ ಪ್ರಯೋಗವಿತ್ತು. ನಾನು ನನ್ನ ಹತ್ತಾರು ಸ್ನೇಹಿತರನ್ನು ಕರೆದುಕೊಂಡು ಮೊದಲ ದರ್ಜೆ ಟಿಕೀಟನ್ನು ನಾನೇ ಎಲ್ಲರಿಗೂ ತೆಗೆಸಿಕೊಟ್ಟು ಮುಂದಿನ ಸಾಲಿನಲ್ಲಿ ಕುಳಿತುಕೊಂಡಿದ್ದೆ. ೧೧:೩೦ ಆದರೂ ನಾಟಕ ಪ್ರಾರಂಭವಾಗಲಿಲ್ಲ. ಪ್ರೇಕ್ಷಕರು ತಾಳ್ಮೆ ಕಳೆದುಕೊಳ್ಳತೊಡಗಿದರು. ಪರದೆ ಒಳಗಿನಿಂದಲೇ ನನ್ನನ್ನು ಗಮನಿಸಿದ ಸುನಂದಾ ಕಡಪಟ್ಟಿಯವರು ಪ್ರಕಾಶ ಕಡಪಟ್ಟಿಯವರಿಗೆ ತಿಳಿಸಿ ಒಳಗಡೆ ಬರುವಂತೆ ಸೂಚನೆ ನೀಡಿದ್ದರಿಂದ ಒಳಗಡೆ ಹೋದೆ. ಆವಾಗ ನಾಟಕ ಪ್ರಾರಂಭಕ್ಕೆ ವಿಳಂಬವಾಗಿರುವದು ಸಹಕಲಾವಿದ ಬಾರದೆ ಇರುವದು ಅಂತ ಗೊತ್ತಾಯಿತು. ಆ ಪಾತ್ರವನ್ನು ನಾನು ನಿರ್ವಹಿಸಬೇಕು ಎಂಬದು ಅವರ ಅಭಿಪ್ರಾಯವಾಗಿತ್ತು."

"ಒಂದು ಸಲನೂ ನಾನು ಈ ನಾಟಕ ನೋಡಿಲ್ಲ. ಹೀಗಾಗಿ ಇದು ನನ್ನಿಂದ ಸಾಧ್ಯವಿಲ್ಲ ಎಂದೆ. ಕೊನೆಗೂ ನನ್ನ ಮನ ಒಲಿಸಿ ಒಪ್ಪಿಸಿದರು. ಅಷ್ಟರೊಳಗ ಶಂಕ್ರಯ್ಯ ಸ್ವಾಮಿಗಳು ಮೈಕ ತೊಗೊಂಡವರ ಪ್ರೇಕ್ಷಕ ಪ್ರಭುಗಳಿಗೆ ಕೈ ಮುಗದು ವಿಷಯ ತಿಳಿಸಿ ಇವತ್ತಿನ ನಾಟಕದೊಳಗ ನಿಮ್ಮವರೇ ಆದ ಶ್ರೀ ಎಲ್.ಆರ್. ಬೂದಿಹಾಳರವರು ನಮ್ಮೊಂದಿಗೆ ಪಾತ್ರ ಮಾಡುತ್ತಿದ್ದಾರೆ ಅಂತ ಹೇಳಿಬಿಟ್ಟರು. ಒಟ್ಟಿನ ಮ್ಯಾಲ ನಾಟಕ ಕೊನೆ ಪ್ರವೇಶಕ್ಕ ಬಂತು. ಪ್ರಕಾಶ ಹಾಗು ಶಂಕ್ರಯ್ಯ ಸ್ವಾಮಿಗಳು ಪ್ರೇಕ್ಷಕರ ಮುಂದ ಮಾತಾಡಕ ನಿಂತರು. ಇವತ್ತ ಎಲ್.ಆರ್. ಬೂದಿಹಾಳರು ನಮ್ಮ ಕಂಪನಿ ಮರ್ಯಾದಿನ ಉಳಿಸಿದರು ಅಂತ ಹೊಗಳಿದರು. ನನ್ನ ಪಾತ್ರಕ್ಕ ೧,೨೦೦ ರೂ. ಆಹೇರಿ (ಕಾಣಿಕೆ) ಆಗಿತ್ತು. ಅವತ್ತ ನಾನು ಈ ಹಿಂದ ನಮ್ಮಪ್ಪನ ಬಗಲಾಗ ಕುಂತು ಒಂದು ರೂಪಾಯಿ ಉಳಿಸಿ ಇದೇ ಕಂಪನಿ

ನಾಟಕ ನೋಡಿದ್ದೆ. ಆ ದೇವರು ಇಂತಹ ಮಹಾನ ಕಲಾವಿದರ ಜೊತೆ ಪಾತ್ರ ಮಾಡುವಂತಹ ಅವಕಾಶನ ಈ ರೀತಿ ನೀಡ್ಯಾನ ಅಂತ ಸತ್ಯ ಹೇಳಿ ನನಗ ಬಂದಿರುವಂತಹ ೧,೨೦೦ ರೂ. ಆಹೇರಿ ಹಣವನ್ನು ಅವರಿಗೆ ನೀಡಿ ಅವರ ಆಶೀರ್ವಾದ ಪಡೆದೆ. ಆ ಆಶೀರ್ವಾದದ ಪುಣ್ಯದಿಂದಲೋ ಏನೋ ನಾನಿಂದು ಕಲಾವಿದನಾಗಿ ನಾಟಕ ಕವಿಯಾಗಿ ಎಲ್ಲೆಡೆ ಗುರುತಿಸಿಕೊಂಡಿದ್ದೇನೆ."

*

ಚಿಕ್ಕವರಿದ್ದಾಗಲೇ ಪ್ರಕಾಶರನ್ನು ಕಂಡು ಬೆಳೆದ ರಾಜು ತಾಳಿಕೋಟ ಮತ್ತು ಎಲ್.ಆರ್. ಬೂದಿಹಾಳ ರಂಗಭೂಮಿಯಲ್ಲಿ ಇಂದು ಪ್ರತಿಭಾನ್ವಿತರಾಗಿ ಬೆಳೆದಿದ್ದು ಒಂದು ವಿಶೇಷ. ತಾಳಿಕೋಟ ರಾಜು ಇವರು ವೃತ್ತಿ ರಂಗಭೂಮಿಯಲ್ಲಿ ಬೆಳೆದು ನಿಂತರೆ ಎಲ್.ಆರ್. ಬೂದಿಹಾಳರು ಗ್ರಾಮೀಣ ರಂಗಭೂಮಿಯಲ್ಲಿ ಬೆಳೆದು ನಿಂತಿದ್ದಾರೆ.

# ಪ್ರಕಾಶ ಕಡಪಟ್ಟಿ ರಚಿಸಿದ ನಾಟಕಗಳು

ನಟ ಒಂದು ಪಾತ್ರವನ್ನು ಮಾತ್ರ ಅಭಿನಯಿಸಬಲ್ಲ. ನಾಟಕಕಾರ ಒಂದು ನಾಟಕದಲ್ಲಿ ಹಲವಾರು ಪಾತ್ರಗಳನ್ನು ಸೃಷ್ಟಿಸಬಲ್ಲ. ನಾಟಕವು ಸಾಹಿತ್ಯದ ಒಂದು ಪ್ರಕಾರವಾಗಿದ್ದರೂ ನಾಟಕವು ತನ್ನದೇ ಆದಂತಹ ಸ್ವತಂತ್ರ ಸಂವಿಧಾನವನ್ನು ಹೊಂದಿದೆ. ಒಂದು ವಸ್ತುವನ್ನು ಕಥೆಯಾಗಿಸಿ, ಆ ಕಥೆಯನ್ನು ಅನೇಕ ಸನ್ನಿವೇಶಗಳಾಗಿಸಿ, ಸನ್ನಿವೇಶಗಳಲ್ಲಿ ಪಾತ್ರಗಳನ್ನು ಚಿತ್ರಿಸಿ, ಅದನ್ನು ರಂಗದ ಮೇಲೆ ಪ್ರದರ್ಶನಗೊಳಿಸುವ ತಂತ್ರಗಾರಿಕೆಯನ್ನು ಬಲ್ಲವನೇ ನಾಟಕಕಾರ. ಅಂತಹ ತಂತ್ರಗಾರಿಕೆಯನ್ನು ಬಲ್ಲ ಅನೇಕ ಕನ್ನಡ ನಾಟಕಕಾರರು ರಂಗ ಸೇವೆಗೈದಿದ್ದಾರೆ. ಈ ವಿಷಯದಲ್ಲಿ ಉತ್ತರ ಕರ್ನಾಟಕ ಭಾಗವು ಬಹು ಸಮೃದ್ಧವಾಗಿದೆ. ನಮ್ಮ ಕನ್ನಡ ನಾಟಕಕಾರರಲ್ಲಿ ಪ್ರಥಮ ಶ್ರೇಣಿಯ ನಾಟಕಕಾರರು, ದ್ವಿತೀಯ ಶ್ರೇಣಿ ನಾಟಕಕಾರರು ಮತ್ತು ಕನಿಷ್ಠ ಶ್ರೇಣಿಯ ನಾಟಕಕಾರರು ಇದ್ದಾರೆ. ಇವರಲ್ಲಿ ಪ್ರಕಾಶರು ದ್ವಿತೀಯ ಶ್ರೇಣಿಯವರಲ್ಲಿ ಅಗ್ರಗಣ್ಯರು. ಸಾಮಾಜಿಕ ಪೀಡೆಗಳಾದ ಭ್ರಷ್ಟಾಚಾರ, ವರದಕ್ಷಿಣೆ, ಜಾತೀಯತೆ, ನಿರುದ್ಯೋಗ ಸಮಸ್ಯೆ, ವಿದ್ಯಾ ವ್ಯಾಪಾರ, ಸಾಮಾಜಿಕ ಅಸಮತೋಲನ. ಕರ್ತವ್ಯ ನಿಷ್ಠೆ ಮುಂತಾದವುಗಳನ್ನು ಮತ್ತು ಅವುಗಳಿಂದಾಗುವ ಪರಿಣಾಮವನ್ನು ಚಿತ್ರಿಸಿ ಸೂಕ್ತ ಪರಿಹಾರ ಮಾರ್ಗವನ್ನು ಸೂಚಿಸುವ ನಾಟಕಗಳನ್ನು ರಚಿಸಿ ರಂಗದ ಮೇಲೆ ಪರಿಣಾಮಕಾರಿಯಾಗಿ ಪ್ರದರ್ಶಿಸಿದ ಪ್ರಕಾಶರವರ ಪ್ರತಿಯೊಂದು ನಾಟಕಗಳು ರಸಭರಿತವಾದ, ರಮ್ಯ ಮನೋಹರವಾದ ನಾಟಕಗಳು. ಇವರ ಕೈ ಬರಹ ತುಂಬಾ ಅಚ್ಚುಕಟ್ಟಾಗಿದೆ. ಇವರು ಸುಮಾರು ಇಪ್ಪತ್ತೈದು ನಾಟಕಗಳನ್ನು ರಚಿಸಿದ್ದಾರೆ.

ಇವರ ನಾಟಕಗಳ ರಚನೆಗೆ ಮುಖ್ಯ ಆಧಾರವೆಂದರೆ ತುಂಬಾ ಮೆಚ್ಚುಗೆ ಆಗುವ ಚಲನಚಿತ್ರ ಗೀತೆಗಳಂತೆ. "ಯಾವುದೆ ಒಂದು ಹಾಡು ಮನಸ್ಸಿನ ಮೇಲೆ ಪರಿಣಾಮ ಬೀರಿದರೆ ಸಾಕು. ಆ ಹಾಡಿನ ಗುಂಗಲ್ಲೇ ನಾನು ನಾಟಕ ಬರೆಯುವದು. ಕವಿಯಾದವನು ಪರಕಾಯ ಪ್ರವೇಶ ಮಾಡಿ ನಾಟಕಗಳನ್ನು ರಚಿಸಬೇಕು. ನಟನೆ, ಸಾಹಿತ್ಯ, ಸಂಗೀತ, ಜನಜೀವನ ಮಾತ್ರವಲ್ಲದೇ ಆಳವಾದ ಪ್ರಾಪಂಚಿಕ ಮತ್ತು ಪಾರಮಾರ್ಥಿಕ ವಿಷಯ ಜ್ಞಾನವನ್ನು ಹೊಂದಿರಬೇಕು. ಅಂದಾಗ ಆ ನಾಟಕಗಳು ಯಶಸ್ವಿ ಆಗಲು ಸಾಧ್ಯ"ಅನ್ನುತ್ತಾರೆ ಪ್ರಕಾಶ.

ಇವರು ರಚಿಸಿದ ಪ್ರಪ್ರಥಮ ನಾಟಕ "ಭಲೆಮಗಳು". ಆಗ ಪ್ರಕಾಶರಿಗೆ ಕೇವಲ ಇಪ್ಪತ್ತು ವಯಸ್ಸು. ತಾವು ಓದುವ ಕಾಲೇಜ್‌ನಲ್ಲಿ ಬಡ ಹಾಗು ಶ್ರೀಮಂತ ವಿದ್ಯಾರ್ಥಿಗಳ ಬಗ್ಗೆ ತೋರಿಸಿದ ತಾರತಮ್ಯದ ಘಟನೆಯೊಂದು

ಪ್ರಕಾಶರ ಮನದಲ್ಲಿ ಅಚ್ಚಳಿಯದೇ ಉಳಿದಿತ್ತು. ಅದನ್ನೇ ನಾಟಕದ ಮುಖ್ಯ ಕಥಾವಸ್ತುವನ್ನಾಗಿ ತೆಗೆದುಕೊಂಡು, ಸಹಜ ಪಾತ್ರಗಳನ್ನು ಅಳವಡಿಸಿ, ಕ್ರಾಂತಿಕಾರಕ ವಿಚಾರ ಮತ್ತು ಪ್ರಚೋದಾತ್ಮಕ ದೃಷ್ಟಿ ಕೋನಗಳಿಂದ ನಾಟಕವನ್ನು ರಚಿಸಿದ್ದಾರೆ. ಮನೋರಂಜನೆಯೇ ನಾಟಕೋದ್ದೇಶವಾಗಿದ್ದು ಶೃಂಗಾರ ರಸ, ಕರುಣಾ ರಸವು ಈ ನಾಟಕಕ್ಕೆ ಪೂರಕವಾಗಿವೆ. ಈ ನಾಟಕವನ್ನು "ಗದಗ" ಊರಲ್ಲಿ ರಂಗಕ್ಕೆ ತಂದರು. ನಾಯಕನಾಗಿ ಪ್ರಕಾಶ ಅಭಿನಯಿಸುತ್ತಿದ್ದರೆ ಹಾಸ್ಯ ಪಾತ್ರದಲ್ಲಿ ತಂದೆ ಶಂಕ್ರಯ್ಯನವರು ಅಭಿನಯಿಸುತ್ತಿದ್ದರು, ನಾಯಕಿಯಾಗಿ ಶಾರದಾ ಶಿಗ್ಗಾಂವ ಅಭಿನಯಿಸುತ್ತಿದ್ದರು. ನಾಟಕ ಯಶಸ್ವಿಯಾಗಿ ಸಾಕಷ್ಟು ಪ್ರದರ್ಶನಗಳನ್ನು ಕಂಡಿತು. ಪ್ರಕಾಶರ ಮೊದಲ ಪ್ರಯತ್ನಕ್ಕೆ ಅದೃಷ್ಟ ಮಣೆ ಹಾಕಿತು. ಬರವಣಿಗೆಗೆ ತಂದೆಯಿಂದ ಸಿಕ್ಕ ಪ್ರೋತ್ಸಾಹ, ನಾಟಕ ವೀಕ್ಷಕರಿಂದ ಸಿಕ್ಕ ಪ್ರಶಂಸೆಯ ಸುರಿಮಳೆ ಮುಂದಿನ ಕೃತಿಗಳ ರಚನೆಗೆ ದಾರಿ ಮಾಡಿಕೊಟ್ಟವು.

## ಚಿನ್ನದ ಗೊಂಬೆ

ಈ ನಾಟಕವು ಸೃಷ್ಟಿಗೊಂಡಿದ್ದು ಪತ್ನಿ ಸುನಂದಾಳ ಸ್ಫೂರ್ತಿಯಿಂದ ಎಂದು ಹೇಳುತ್ತಾರೆ ಪ್ರಕಾಶ. ಪ್ರಕಾಶರ ಕವಿ ಸ್ಥಾನ ಭದ್ರ ಪಡಿಸಿದ ನಾಟಕವಿದು. ಹೆಣ್ಣಿನ ನೋವನ್ನು ಎತ್ತಿ ತೋರಿಸುವ ಈ ಕಥೆ ಅಣ್ಣ ತಂಗಿಯರ ಅನುಬಂಧದ ತಳಹದಿಯ ಮೇಲೆ ಪ್ರಾರಂಭವಾಗುತ್ತದೆ. ತಂಗಿ ಶಾರದಾಳನ್ನು ಅಣ್ಣನಾದ ಶಿವಾನಂದ ಅತ್ಯಂತ ಶ್ರೀಮಂತನಾದ ಸ್ನೇಹಿತ ಸೋಮಶೇಖರನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಸೋಮಶೇಖರನ ಸಾಕು ತಾಯಿ ಆಸ್ತಿ ಆಸೆಗಾಗಿ ತನ್ನ ಪ್ರೇಮಿ ಸಿದ್ಧರಾಮನ ಜೊತೆ ಕುತಂತ್ರತವನ್ನು ಹೆಣೆದು ಶಾರದಾಳ ಪವಿತ್ರ ಪ್ರೀತಿಯಲ್ಲಿ ಸಂಶಯದ ಹುಳಿ ಹಿಂಡಿ ಸೋಮಶೇಖರನ ಸಂಸಾರವನ್ನೆ ಒಡೆದು ಹಾಕುತ್ತಾಳೆ. ಅದೇ ಸಂಧರ್ಬಕ್ಕೆ ಶಾರದಾಳ ಆಣ್ಣ ಶಿವಾನಂದ ದುರಂತವೊಂದರಲ್ಲಿ ಒಂದು ಕಾಲು ಕಳೆದುಕೊಂಡು ತಂಗಿಯ ಮನೆಗೆ ನೆರುವಿಗಾಗಿ ಬರುತ್ತಾನೆ. ತಂಗಿಯ ಛಿದ್ರವಾದ ಸಂಸಾರ ಕಂಡು ಗೋಳಿಡುತ್ತಾನೆ. ಕಾಲು ಕಳೆದುಕೊಂದು ಹಸಿದು ಬಂದ ಅಣ್ಣನಿಗೆ ತುತ್ತನ್ನ ನೀಡುವ ಅಧಿಕಾರವೂ ನನಗಿಲ್ಲದಾಯಿತಲ್ಲ ಎಂದು ಅಣ್ಣನನ್ನು ಅಪ್ಪಿಕೊಂಡು ತಂಗಿ ಶಾರದ ಕಣ್ಣೀರಿಡುತ್ತಾಳೆ. ಅಣ್ಣ ತಂಗಿಯರ ದುಃಖದ ಈ ಸನ್ನಿವೇಶ ಪ್ರೇಕ್ಷಕರ ಕರಳು ಹಿಂಡುವಂತೆ ಸೃಷ್ಟಿಗೊಂಡಿದೆ. ಕೊನೆಗೂ ತನ್ನ ತಾಯಿಯ ಕಪಟತನವನ್ನು ತಿಳಿದ ಸೋಮಶೇಖರ. ತನ್ನ ಪತ್ನಿ ಚಿನ್ನದ ಗೊಂಬೆ ಎಂದು ಒಪ್ಪುತ್ತಾನೆ. ಈ ನಾಟಕದ ಹಾಸ್ಯ ಪಾತ್ರಗಳಾದ ಕುರಟ್ಟಿ ಮಾಸ್ತರ ಶಿವಲೀಲಾರ ಪಾತ್ರಗಳ ಸಂಭಾಷಣೆಗಳು ಓದುಗರ, ಪ್ರೇಕ್ಷಕರ ಗಮನ ಸೆಳೆಯುತ್ತವೆ. ಈ ನಾಟಕವು ಗ್ರಾಮೀಣ ಭಾಗದಲ್ಲಿ ಸಾವಿರಾರು ಪ್ರಯೋಗಗಳನ್ನು ಕಂಡಿದೆ.

## ಸತಿ ಸಂಸಾರದ ಜ್ಯೋತಿ

ಈ ನಾಟಕವನ್ನು ಬಿಜಾಪುರ ಕ್ಯಾಂಪಿನಲ್ಲಿದ್ದಾಗ ಪ್ರಕಾಶರು ಬರೆದು ರಂಗಕ್ಕೆ ತಂದಿದ್ದಾರೆ. ಧರ್ಮವೀರ ಹಿಂದಿ ಸಿನೆಮಾದ ಹಾಡುಗಳ ಆಕರ್ಷಣೆಯೇ ಈ ನಾಟಕಕ್ಕೆ ಸ್ಫೂರ್ತಿ ಎನ್ನುತ್ತಾರೆ ಪ್ರಕಾಶ. ಪ್ರೀತಿ ಎಂಬುದು ಪವಿತ್ರ, ಮನಸ್ಸು-ಮನಸ್ಸುಗಳ ಸಂಗಮ. ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯವನ್ನು ಆರಾಧಿಸುವುದೇ ಪ್ರೀತಿ ಎಂಬ ಆಧಾರದ ಮೇಲೆ, ಹಾಗೆಯೇ ಬಯಸಿದ ಪ್ರೇಮ ಸಿಗದಾಗ ನೋಯುವ ಹೆಣ್ಣು ಮತ್ತು ಗಂಡು ಪಾತ್ರಗಳನ್ನು ಈ ನಾಟಕದಲ್ಲಿ ಪ್ರಕಾಶರು ಸಮಾನವಾಗಿ ಚಿತ್ರಿಸಿದ್ದಾರೆ. ಜಗದೀಶ ಮತ್ತು ರಾಜಶ್ರೀ ಕಾಲೇಜ್‌ನ ಪ್ರೇಮಿಗಳಾಗಿದ್ದು ಜಗದೀಶ ತನ್ನ ಅಣ್ಣನಾದ ರುದ್ರೇಶನ, ರಾಜಶ್ರೀ ತನ್ನ ತಂಗಿ ಕುರಡಿಯಾದ ಜಯಶ್ರೀಯ ಮದುವೆಗೆ ಆಗಮಿಸಿದಾಗ ರುದ್ರೇಶ ಕುರುಡಿಯಾದ ಜಯಶ್ರೀಯನ್ನು ತಿರಸ್ಕರಿಸುತ್ತಾನೆ. ಅಲ್ಲಿಯೇ ಇದ್ದ ಜಗದೀಶ ಕುರಡಿ ಜಯಶ್ರೀಯನ್ನು ತನ್ನ ಬಾಳಸಂಗಾತಿಯನ್ನಾಗಿ ಸ್ವೀಕರಿಸುತ್ತಾನೆ. ತನ್ನ ಪ್ರೀತಿ ಕೈ ತಪ್ಪಿ ಹೋದ ಸೇಡಿಗೆ ರಾಜಶ್ರೀ ಅದೇ ಮಂಟಪದಲ್ಲಿ ಜಗದೀಶನ ಅಣ್ಣ ರುದ್ರೇಶನನ್ನು ಮದುವೆ ಆಗುತ್ತಾಳೆ.

ಹೇಗಾದರೂ ಜಗದೀಶನನ್ನು ಪಡೆಯಲೇಬೇಕು ಎಂಬ ಉದ್ದೇಶದಿಂದ ಡಾಕ್ಟರ ಉದ್ದೇಶನ ಸ್ನೇಹ ಬೆಳಸಿ ಜಗದೀಶನಿಗೆ ಬುದ್ಧಿ ಭ್ರಮಣೆಗೊಳ್ಳುವ ಮದ್ದು ತಿನಿಸುತ್ತಾಳೆ. ಹುಚ್ಚನಾದರೂ ಜಗದೀಶ ರಾಜಶ್ರೀ ಆಸೆಯನ್ನು ತಿರಸ್ಕರಿಸುತ್ತಾನೆ. ಹತಾಶಳಾದ ರಾಜಶ್ರೀ ಜಗದೀಶನ ಮೇಲೆ ಬಲಾತ್ಕಾರದ ಆರೋಪ ಹೊರಸಿ ಗರ್ಭಿಣಿಯಾದ ತಂಗಿ ಜಯಶ್ರೀಯನ್ನು ಮತ್ತು ಜಗದೀಶನನ್ನು ಮನೆಯಿಂದ ಹೊರಹಾಕುತ್ತಾಳೆ. ಅಲ್ಲಿ ಜಯಶ್ರೀ ಒಂದು ಹೆಣ್ಣು ಮಗುವಿಗೆ ಜನ್ಮ ನೀಡುತ್ತಾಳೆ ಇದನ್ನು ತಿಳಿದ ರಾಜಶ್ರೀ ಮತ್ತೆ ಉದ್ದೇಶನ ನೆರವಿನೊಂದಿಗೆ ಜಯಶ್ರೀಯ ಮಗಳಾದ ರಾಣಿಯನ್ನು ವಿಷ ತಿನ್ನಿಸಿ ಸಾಯಿಸುತ್ತಾಳೆ.

ರಾಜಶ್ರೀಯ ಕುಟಿಲ ವಿಷಯ ತಿಳಿದ ಪತಿ ರುದ್ರೇಶ ರಾಜಶ್ರೀಯನ್ನು ಮನೆಯಿಂದ ಹೊರಗೆ ಹಾಕುತ್ತಾನೆ. ಜಗದೀಶನ ಹಳೆಯ ಸ್ನೇಹಿತ ಅಶೋಕ ಕಣ್ಣಿನ ಡಾಕ್ಟರನಾಗಿ ಜಯಶ್ರೀಗೆ ಕಣ್ಣು ಕಾಣುವಂತೆ ಚಿಕಿತ್ಸೆ ನೀಡುತ್ತಾನೆ. ರಾಜಶ್ರೀ ಕೂಡಾ ಪಶ್ಚಾತಾಪಗೊಂಡು ಹುಚ್ಚು ನಿವಾರಣೆ ಆಗುವ ಮದ್ದನ್ನು ಜಗದೀಶನಿಗೆ ತಂದು ಕೊಟ್ಟು ಮತ್ತೆ ಜಗದೀಶ ಮೊದಲಿನಂತೆ ಆಗಲು ಸಹಾಯ ಮಾಡುತ್ತಾಳೆ. ಕೊನೆಗೂ ನಿಜವಾದ ಪ್ರೀತಿ, ಸತ್ಯ ಗೆಲ್ಲುತ್ತದೆ ಎಂಬುದನ್ನು ನಾಟಕದ ಮುಖಾಂತರ ತಿಳಿಯ ಪಡಿಸಿದ್ದಾರೆ. ಈ ನಾಟಕವೂ ಕೂಡ ಗ್ರಾಮೀಣ ರಂಗಭೂಮಿಯಲ್ಲಿ ಜಯಭೇರಿ ಹೊಡೆದ ನಾಟಕವಾಗಿದೆ.

## ಭೂಮಿ ತೂಕದ ಹೆಣ್ಣು

ಆದರ್ಶ ಲೋಕಕ್ಕೆ ತೆರೆದುಕೊಂಡ ಸ್ತ್ರೀ ಪುರುಷರ ಮನೋವಿಚಾರಗಳನ್ನು ಒರೆಹಚ್ಚಿ ನೋಡುವ ಚಿಕಿತ್ಸಕ ಮನೋಭಾವ ಈ ನಾಟಕದ ಹಿಂದೆ ಎದ್ದು ಕಾಣುತ್ತದೆ. ಭಿಕ್ಷುಕನಾದ ಜ್ಯೋತಿ ಪ್ರಕಾಶ ಶ್ರೀಮಂತನ ಹಿತ ವಚನದಿಂದ ಅವನು ಕೊಟ್ಟ ಸ್ವಲ್ಪ ದುಡ್ಡಿನಿಂದ ದುಡಿದು ದೊಡ್ಡ ಶ್ರೀಮಂತನಾಗುತ್ತಾನೆ. ಬಡ ಕುಟುಂಬದ ಹುಡುಗಿಯಾದ ಗಂಗಾಳನ್ನು ಮದುವೆಯಾಗುತ್ತಾನೆ. ಗಂಗಾಳ ಮನೆತನಕ್ಕಾಗಿ ಸಾಕಷ್ಟು ಸಹಾಯ ಮಾಡುತ್ತಾನೆ. ವಿಧಿ ವಶಾತ್ ಜ್ಯೋತಿ ಪ್ರಕಾಶ ತೀರಿ ಕೊಳ್ಳುತ್ತಾನೆ. ಗಂಗಾ ತನ್ನ ತವರು ಮನೆಯ ಉದ್ಧಾರಕ್ಕಾಗಿ ಏನೆಲ್ಲ ತ್ಯಾಗ ಮಾಡುತ್ತಾಳೆ. ಕೊನೆಗೆ ತನ್ನ ಪತಿಯ ನೆನಪಿಗಾಗಿ ಕೊರಳಲ್ಲಿರುವ ಚಿನ್ನದ ಸರವನ್ನು ಕೂಡ ತವರು ಮನೆಯವರು ಅಪೇಕ್ಷಿಸಿದಾಗ ಅದನ್ನೂ ಕೂಡ ಕೊಟ್ಟು ತಾನು ಹಾಲುಂಡು ಬೆಳೆದ ತವರು ಮನೆ ಸುಖವಾಗಿರಲಿ ಎಂದು ಹರಿಸಿ ತನ್ನ ಪತಿಯ ಸಮಾಧಿಯ ಮೇಲೆ ಗಂಗಾ ಪ್ರಾಣ ಬಿಡುತ್ತಾಳೆ. ದುಃಖಾಂತದಿಂದ ಈ ಕಥೆ ಮುಕ್ತಾಯವಾಗುತ್ತದೆ. ಹೆಣ್ಣು ತ್ಯಾಗಮಯಿ ಎನ್ನುವುದು ಈ ಕಥೆಯ ಸಂದೇಶ.

## ಕರ್ತವ್ಯ ಕೈ ಹಿಡಿಯಿತು

ಒಬ್ಬ ನಿಷ್ಠಾವಂತ ಆದರ್ಶ ಮಾಸ್ತರ ತನ್ನ ಎಲ್ಲಾ ಆಸ್ತಿಯನ್ನು ಮಾರಿ ಮಗನನ್ನು ಓದಿಸುತ್ತಾನೆ. ಓದಿ ಸಬ್ ಇನಸ್ಪೆಕ್ಟರ ಹುದ್ದೆಗೆ ಸೇರಿದ ಕಥಾ ನಾಯಕ ಅನ್ಯಾಯ ಅಧರ್ಮದ ವಿರೋಧವಾಗಿ ನಿಂತು ಹೋರಾಟ ಮಾಡಿ ಸಚಿವನ ಮಗಳನ್ನು ಮದುವೆಯಾಗುತ್ತಾನೆ. ಸಚೀವನ ದಬ್ಬಾಳಿಕೆಯಲ್ಲಿ ಕಥಾ ನಾಯಕ ಕೆಲಸ ಕಳೆದುಕೊಳ್ಳುತ್ತಾನೆ. ಆದರೂ ಧರ್ಮ, ನಿಷ್ಠೆ, ನಿಯತ್ತಿನಿಂದ ಸಮಾಜದ ಕೆಲಸ ಮಾಡಿ ಪೋಲಿಸ ಕಮಿಶನರ್ ಆಗುತ್ತಾನೆ. ಈ ರೀತಿ ಕಥಾ ಸಾರಂಶವನ್ನು ಹೊಂದಿದ "ಕರ್ತವ್ಯ ಕೈ ಹಿಡಿಯಿತು" ನಾಟಕ ಪ್ರಕಾಶರ ರಂಗ ಬದುಕಲ್ಲಿ ಮತ್ತೆ ಬೆಳಕು ತರಬಹುದೇನೋ ಎಂಬ ಭರವಸೆ.

***

ಹೀಗೆ ಪ್ರಕಾಶ ಅವರು ಬರೆದ ಪ್ರತಿಯೊಂದು ಕೃತಿಯೂ ಸರಳ, ಸ್ಪಷ್ಟ, ನೇರ, ಪರಿಣಾಮಕಾರಿ ಆಗಿರುವದರಿಂದ ಪಂಡಿತರಿಂದ ಹಿಡಿದು ಪಾಮರರೆಲ್ಲರನ್ನೂ ಆಕರ್ಷಿಸಿ ಹಿಡಿದಿರಿಸುವಲ್ಲಿ ಯಶಸ್ವಿ ಆಗಿವೆ. ಉತ್ತರ ಕರ್ನಾಟಕದ ಕಂಪನಿಗಳಾದ ಶ್ರೀ ಕುಮಾರ ವಿಜಯ ನಾಟ್ಯ ಸಂಘ ಚಿತ್ತರಗಿ, ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ, ಶ್ರೀ ಪುರಾಣಿಕ ಕಂಪನಿ ಲಕ್ಷ್ಮೇಶ್ವರ, ಶ್ರೀ ಕೆ.ಬಿ.ಆರ್ ಡ್ರಾಮಾ ಕಂಪನಿ ಚಿಂದೋಡಿ, ಶ್ರೀ ರೇಣುಕಾಚಾರ್ಯ ನಾಟ್ಯ ಸಂಘ ಮೈಂದರ್ಗಿ, ಶ್ರೀ ಕರ್ನಾಟಕ

ಕಲಾವೈಭವ ಸಂಘ ಬೆಂಗಳೂರು, ಶ್ರೀ ಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ, ಶ್ರೀ ಘನಮಟೇಶ್ವರ ನಾಟ್ಯ ಸಂಘ ಕುಂಟೋಜಿ, ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ, ಶ್ರೀ ಖಾಸ್ಗತೇಶ್ವರ ನಾಟ್ಯಸಂಘ ತಾಳಿಕೋಟಿ, ಶ್ರೀ ತೋಂಟದಾರ್ಯ ನಾಟ್ಯ ಸಂಘ ಮಂಡಲಗೇರಿ, ಶ್ರೀ ಸ್ವಾಮಿ ಸಮರ್ಥ ಕಲಾ ಸಂಘ ಅಕ್ಕಲಕೋಟ, ಈ ಎಲ್ಲಾ ಕಂಪನಿಗಳಲ್ಲಿ ಪ್ರಕಾಶರವರು ಬರೆದ ನಾಟಕಗಳನ್ನು ಆಡಲಾಗುತ್ತದೆ. ಅವು ಸಾಕಷ್ಟು ಪ್ರಯೋಗಗಳನ್ನು ಕಂಡು ಕಂಪನಿಗಳ ಗಲ್ಲೆ ಪೆಟ್ಟಿಗೆ ತುಂಬಿಸುತ್ತವೆ. ಪ್ರಕಾಶ ಕಡಪಟ್ಟಿಯವರ ನಾಟಕಗಳು ಕನ್ನಡ ರಂಗ ಲೋಕದ ಶ್ರೀಮಂತಿಕೆಗೆ ಕಾರಣಗಳಾಗಿವೆ.

## ಪ್ರಕಾಶರು ಸ್ವಂತ ಕಂಪನಿ ಇದ್ದಾಗ ಬರೆದ ನಾಟಕಗಳು

ಭಲೇ ಮಗಳೆ, ಚಿನ್ನದ ಗೊಂಬೆ, ಮನೆಗೆ ತಕ್ಕ ಮಗ, ಬಂಗಾರದ ಮನುಷ್ಯ, ಸತಿ ಸಂಸಾರದ ಜ್ಯೋತಿ, ಛಲಬಿಡದ ಚಾಮುಂಡಿ, ಭೂಮಿ ತೂಕದ ಹೆಣ್ಣು, ಮುತ್ತೈದೆಗೆ ಕುತ್ತು ಐದು, ದೇವರ ಮಗ.

## ಸ್ವಂತ ಕಂಪನಿ ಬಂದಾದ ಮೇಲೆ ಬರೆದ ನಾಟಕಗಳು

ತವರು ಬಿಟ್ಟ ತಂಗಿ, ಗರತಿ ಗೆದ್ದಳು ಸವತಿ ಸೋತಳು, ಪಣ ತೊಟ್ಟ ಪತಿವ್ರತೆ, ಜಿದ್ದಿಗೆ ಬಿದ್ದ ಜಿಗದ ಹೋದ, ಹೆತ್ತಪ್ಪನಿಗೆ ಏನು ಗೊತ್ತು ಹೆತ್ತವಳ ಕಿಮ್ಮತ್ತು, ದೋಸ್ತಿ ಆಸ್ತಿಗಿಂತ ಜಾಸ್ತಿ, ಶಿರಡಿ ಸಾಯಿ ಬಾಬಾ, ಸೌಭಾಗ್ಯ ಪಡೆದ ಸುಪುತ್ರಿ, ಕರ್ತವ್ಯ ಕೈ ಹಿಡಿಯಿತು, ಇನ್ನೂ ಹಲವಾರು ಹೆಸರಿಡದ ನಾಟಕಗಳು ಪ್ರಕಾಶರ ಬಳಿ ಇವೆ. ಬಹುತೇಕ ನಾಟಕಗಳು ಪ್ರಕಟವಾಗಿಲ್ಲ.

# ಪ್ರಕಾಶ ಕಡಪಟ್ಟಿ ರಚಿಸಿದ ಹಾಡುಗಳು

ನಾಟಕ ರಚನೆ ಮಾತ್ರವಲ್ಲದೇ ಪ್ರಕಾಶರು ಗೀತೆಗಳ ರಚನೆಯಲ್ಲೂ ಅಪಾರ ಕೃಷಿ ಮಾಡಿದ್ದಾರೆ. ಪ್ರಕಾಶರು ಸಾಂಧರ್ಭಿಕವಾಗಿ ಹಾಡುಗಳನ್ನು ರಚಿಸುತ್ತಿದ್ದರು. ಅತ್ಯಂತ ಸರಳ ಭಾಷೆಯಲ್ಲಿ ರಚಿತವಾಗಿರುವ ಇವರ ಹಾಡುಗಳು ಕೇಳುಗರ ಕರಳು ಕರಗಿಸುವಂತಹ, ಹೃದಯಗಳಿಗೆ ತಾಕುವಂತಹ ಹಾಡುಗಳಾಗಿವೆ. ಇವರು ಹೆಚ್ಚಾಗಿ ಹಳೆಯ ಹಿಂದಿಯ ಚಲನಚಿತ್ರ ಗೀತೆಗಳ ಧಾಟಿಯಲ್ಲಿ ಸಾಹಿತ್ಯ ರಚಿಸುತ್ತಿದ್ದರಿಂದ ಆ ಮೋಹಕ ರಾಗಗಳು ಎಲ್ಲರಿಗೂ ರುಚಿಸಲ್ಪಟ್ಟಿದ್ದವು. ಪ್ರಕಾಶರಿಂದ ಮೊದಲು ಮೂಡಿ ಬಂದ ಹಾಡು ಬಸವಣ್ಣನ ಭಕ್ತಿ ಗೀತೆ. "ಮದನ ಮೋಹನ" ನಾಟಕದ ಕಥಾ ನಾಯಕ ಮೋಹನ ಹಾಗೂ ತಾನು ಪ್ರೀತಿಸುತ್ತಿರುವ ಮಾಲಾ ಮತ್ತು ಅವಳಣ್ಣ ಗೋಪಾಲ. ಕಾಯಿಲೆಗೆ ತುತ್ತಾದ ಒಂದು ಮಗುವಿನ ನೆರುವಿಗಾಗಿ ಹಾಡು ಹಾಡಿ ಹಣ ಸಂಗ್ರಹಸಿ ಕೊಡುವ ಒಂದು ಸನ್ನಿವೇಶಕ್ಕೆ ಈ ಹಾಡನ್ನು ಪ್ರಕಾಶರು ಬರೆದಿದ್ದರು:

ನಾಡಿನ ಹೆಮ್ಮೆಯ ಪುರುಷ
ಜಗದ ಜ್ಯೋತಿ ಶ್ರೀ ಬಸವೇಶ
ಮಹಿಮಾ ಪುರುಷ ನಿನ್ನ ನಾಮ ಹರುಷ
ಜಗದ ಜ್ಯೋತಿ ಶ್ರೀ ಬಸವೇಶ
ಜನಕ್ಕಾಗಿ ಆದೆ ದಾಸ ।
ಬ್ರಾಹ್ಮಣ ಕುಲದಲಿ ಜನಿಸಿದೆ ನೀ
ಉದ್ಧರಿಸಿದಿ ವೀರಶೈವ ಕುಲವನು
ತಂದೆ ತಾಯಿಗಳ ಮಾತಿಗೆ ಮುನಿದು
ಸಂಗಮಕೋಡಿದಿ ನೀನು ।
ಬಾಲ್ಯತನದಲಿ ಭಕ್ತಿಯ ಮಾರ್ಗದಿ
ಜಯವನು ಪಡೆದವ ನೀನು
ಪಂಡಿತರ ಆಶ್ರಯದೊಳಗೆ
ಘನತೆಯ ಪಡೆದು ಘನವಂತನಾದೆ
ಹಗಲಿರುಳೆನ್ನದೆ ಜನಕಾಗಿ ದುಡಿದೆ
ಬೋಧನೆ ಬೀರಲು ವಚನವ ಬರೆದೆ
ದಯವೇ ಧರ್ಮದ ಮೂಲವೆಂದು

ದಾರಿಯ ತೋರಿದಿ ನೀನು ।
ನಿನ್ನಯ ಕೀರ್ತಿಯ ಆಲಿಸಿ ಬಿಜ್ಜಳ
ದೊರೆ ಬಂದನು ನಿನ್ನೆಡೆಗೆ
ತನ್ನ ರಾಜ್ಯ ಕಲ್ಯಾಣದಿ ಮಂತ್ರಿಯ
ಸ್ಥಾನವ ಕೊಡಿಸಿದ ನಿನಗೆ ।
ಜನಕೆ ಜಾಗೃತಿಯ ಬೀರಿ
ಭಕ್ತಿ ಭಂಡಾರಿ ಪದವಿಯನು ಪಡೆದೆ
ಶಿವ ನಾಮ ಜಪಿಸಿ ಭಕ್ತಿಯ ನರುಹಿ
ಮುಕ್ತಿಯ ಮಾರ್ಗವ ತೋರಿದಿ ಜನರಿಗೆ ।
ಜಾತಿಯ ಭೇದವ ಬಹುದೂರ ಓಡಿಸಿ
ಶರಣರ ಸಂಘಕೆ ಶಾಂತಿಯ ಬೀರಿದಿ
ಕಾಯಕವೇ ಕೈಲಾಸವೆಂದು
ದಾರಿಯ ತೋರಿದಿ ನೀನು ।
ಕಲ್ಯಾಣದಿ ಶಿವ ಅನುಭವ ಮಂಟಪ
ಸ್ಥಾಪಿಸಿ ಶರಣರ ಕರೆದೆ
ಅಲ್ಲಮ ಪ್ರಭು, ಅಕ್ಕ ಮಹಾದೇವಿ,
ಸಿದ್ಧರಾಮ ಬಂದರು ನಿನ್ನಡೆಗೆ ।
ವೀರಶೈವ ಧರ್ಮದ ನಿಜ ತಿರುಳನು
ತಿಳಿಸಿದಿ ನೀನೆಲ್ಲರಿಗೆ
ಸಂಸಾರ ಮೋಹವ ಬಲು ದೂರ ತೊರೆದೆ
ಸಾಕಾಗಿ ಜೀವನ ಸಂಗಮ ಕೂಡಿದೆ ।
ಶಿವ ನಾಮ ನೆನೆದು ಲಿಂಗೈಕ್ಯನಾದೆ
ಶರಣರ ಕಂಗಳು ಕಂಬನಿ ಹರಿಸಿವೆ
ಜೀವನ ಮುಳ್ಳಿನ ಹಾಸಿಗೆಯೆಂದು
ಇತಿಹಾಸದಿ ಹೆಸರಾದೆ ನೀನು ।

ಗೋಪಾಲನ ಪಾತ್ರ ವಹಿಸುತ್ತಿದ್ದ ಶಂಕ್ರಯ್ಯನವರು ಡಪ್ಪು ಬಾರಿಸುತ್ತ, ಮಾಲಾ ಪಾತ್ರ ವಹಿಸಿದ ಸುನಂದ, ಮೋಹನ ಪಾತ್ರ ವಹಿಸಿದ ಪ್ರಕಾಶ ಈ ಹಾಡನ್ನು ರಾಗ ಲಯಗಳ ವಿನ್ಯಾಸದಲ್ಲಿ ಹಾಡುತ್ತಿದ್ದರೆ, ಪ್ರೇಕ್ಷಕರು ಭಾವಪರವಶರಾಗಿ ರಂಗದ ಮೇಲೆ ಬಂದು ತಟ್ಟೆಗೆ ಹಣ ಹಾಕುತ್ತಿದ್ದರು. ಹಾಡು ಮುಗಿಯುವಷ್ಟರಲ್ಲಿ ದೊಡ್ಡ-ದೊಡ್ಡ ಎರಡು ಪರಾತು ತುಂಬಿ ತುಳುಕುವಷ್ಟು ಹಣ ಸಂಗ್ರಹವಾಗುತ್ತಿತ್ತು. ಪ್ರತಿ

ದಿನ ಈ ಹಾಡಿಗೆ ಬರುತ್ತಿದ್ದ ಹಣವನ್ನು ಕಡಪಟ್ಟಿ ದೇವಸ್ಥಾನಕ್ಕೆ ಮುಟ್ಟಿಸುತ್ತೇವೆ ಅಂತ ನಾಟಕದಲ್ಲಿ ಹೇಳಲಾಗುತ್ತಿತ್ತು. ಸಂಗ್ರಹವಾದ ಹಣವನ್ನು ಕಡಪಟ್ಟಿ ದೇವಸ್ಥಾನಕ್ಕೆ ಮುಟ್ಟಿಸಿದ್ದು ಕಂಪನಿಯ ಹೆಚ್ಚುಗಾರಿಕೆ. ಈ ಹಾಡಿನಿಂದ ಪ್ರಕಾಶರ ಬದುಕೇ ಬದಲಾಯಿತು. ಹಾಡುಗಳ ರಚನೆ ಮತ್ತು ಸಂಗೀತ ಸ್ವರ ಸಂಯೋಜನೆ ಪ್ರಕಾಶರ ಕೀರ್ತಿಗೆ ಕಲಶವಾಯಿತು.

ಹುಬ್ಬಳ್ಳಿಯ ಕ್ಯಾಂಪ ಮಾಡಿದಾಗ "ಕಲಾ ಪ್ರವೀಣ, ಕಲಾಭೂಷಣ ಪ್ರಕಾಶ ಕಡಪಟ್ಟಿ ಮತ್ತು ಶ್ರೀಮತಿ ಸುನಂದಾ ಕಡಪಟ್ಟಿ ಇವರ ಹೊಸ ಗೀತೆಗಳು" ಎಂಬ ಹೆಸರಿನಿಂದ ವಿಘ್ನೇಶ್ವರ, ಮಾಂವಾ ಮಾಂವಾ, ನನ್ನ ತಂಗಿ ಎಲ್ಲೈತೀ, ಬರತಾನ ಬರತಾನ, ಚನ್ನಪ್ಪ ಚನ್ನಗೌಡ, ಸ್ವಾಮಿ ವಿರೇಶ್ವರ, ಹದಿನಾರ ವರುಷ, ಕರ್ನಾಟಕದಾಗ ಚಂದ ಹುಬ್ಬಳ್ಳಿ, ತಂಗಿಯಲ್ಲವೇ ಅಣ್ಣ ತಂಗಿಯಲ್ಲವೇ, ಗುರುವಾರ ಬಂತಮ್ಮ ಇನ್ನು  ಹಲವಾರು ಹಾಡುಗಳನ್ನು ಸೇರಿಸಿ ಕ್ಯಾಸೆಟ್ ಮಾಡಿಸಲಾಗಿತ್ತು. ಸಿನೆಮಾ ಹಾಡುಗಳ ಕ್ಯಾಸೆಟ್‌ಗಳನ್ನು ಕೊಂಡು ಕೇಳುವವರಿಲ್ಲದಾಗ ಇನ್ನು ನಾಟಕ ಹಾಡುಗಳ ಕ್ಯಾಸೆಟ್ ಯಾರು ಖರಿದಿಸುತ್ತಾರೆ, ಕೇವಲ ಪ್ರಚಾರ ದೊರೆತರೆ ಸಾಕು ಎಂಬ ಉದ್ದೇಶದಿಂದ ಕ್ಯಾಸೆಟ್ ಮಾಡಿಸಿದರೆ ಅವುಗಳ ಮಾರಾಟದಿಂದ ಬಂದ ಲಾಭವೇ ಹೆಚ್ಚಾಯಿತು. ಪ್ರತಿ ದಿನ ನಾಟಕದ ಕೊನೆಗೆ ೪೦-೫೦ ಕ್ಯಾಸೆಟ್‌ಗಳು ಮಾರಾಟವಾಗುತ್ತಿದ್ದವು. ಮೊದಲ ಸಲಕ್ಕೆ ಸಿದ್ಧಪಡಿಸಿದ ಕ್ಯಾಸೆಟ್‌ಗಳು ಮಾರಾಟಗೊಂಡು ಮರು ಬೇಡಿಕೆ ಬರುತ್ತಿದ್ದುದರಿಂದ ಪ್ರತಿ ವಾರಕೊಮ್ಮೆ ಚನ್ನಪ್ಪ ಚನ್ನಗೌಡ ನಾಟಕ ಮುಗಿಯುವವರೆಗೂ ಕ್ಯಾಸೆಟ್‌ಗಳನ್ನು ಮರು ಸಿದ್ಧಪಡಿಸಲಾಗುತಿತ್ತು. ಮಹಾರಾಷ್ಟ್ರದವರು ಕೂಡಾ ಬಂದು ನೂರು ಕ್ಯಾಸೆಟ್ ಖರಿದಿಸಿಕೊಂಡು ಹೋಗಿದ್ದುಂಟು. ಗ್ರಾಮೀಣ ಭಾಗದಲ್ಲಂತೂ ಪ್ರಕಾಶರ ಹಾಡುಗಳು ಪ್ರತಿಯೊಬ್ಬರ ಬಾಯಲ್ಲಿ ನಲಿದಾಡುತ್ತಿದ್ದವು.

***

ಚಿನ್ನದ ಗೊಂಬೆ ನಾಟಕದಲ್ಲಿ ತನ್ನ ಪ್ರಾಣಕ್ಕಿಂತ ಹೆಚ್ಚು ಪ್ರೀತಿಯಿಂದ ಬೆಳೆಸಿದ ತಂಗಿ ಮದುವೆಯಾಗಿ ಗಂಡನ ಮನೆಗೆ ಹೊರಟು ನಿಂತಾಗ ಅಣ್ಣ ತಂಗಿಯ ಪಾದ ತೊಳೆದು ಪೂಜಿಸಿ ಕಳುಹಿಸಿ ಕೊಡುವ ಸಂದರ್ಭಕ್ಕೆ ರಚಿಸಿದ ಹಾಡು:

**ಹೆಣ್ಣಾಗಿ ಹೋಗಲ್ಲಿ। ಹೊನ್ನಾಗಿ ಬಾಳಲ್ಲಿ।**
**ತವರಿಗೆ ಹೆಸರಾಗಿ ನಗೆ ಚಲ್ಲಿ।**
**ತವರಿನ ಮನೆ ತಾವರೆ ನೀನು।**
**ನಗುನಗುತ ಸಾಗು ಮಗಳೆ।**
**ಬಂಗಾರದ ಬೆಲೆ ನಿನಗಿರಲಿ।**
**ಕೀರ್ತಿಶಾಲಿಯಾಗಲಿ।**

ಮಾವನ ಮನೆ ಮಮತೆಯ ಸೊಸೆಯೆ।
ನಗುನಗುತ ಸಾಗು ಮಗಳೆ।
ಮಾಣಿಕ್ಯದ ಮನ್ನಣೆ ಇರಲಿ।
ಕೀರ್ತಿಶಾಲಿಯಾಗಲಿ।

ಹೆಣ್ಣು ಹುಟ್ಟಿದ ಮನೆಗೆ, ಕೊಟ್ಟ ಮನೆಗೆ ಕೀರ್ತಿ ತರಬೇಕೆಂದು ಅರ್ಥ ಬಿಂಬಿಸುವ ಈ ಹಾಡು ಬಹುತೇಕ ಕೌಟುಂಬಿಕ ನಾಟಕಗಳಲ್ಲಿ ಹೆಣ್ಣು ಪತಿಯ ಮನೆಗೆ ಹೋಗುವ ದೃಶ್ಯಗಳಿಗೆ ಈ ಹಾಡು ಇದ್ದೇ ಇರುತ್ತದೆ. ಮಹಿಳೆಯರ ಮನಗೆದ್ದ ಈ ಹಾಡಿನ ಬಗ್ಗೆ ಎಷ್ಟು ಹೇಳಿದರೂ ಸಾಲದು.

***

ಪ್ರಕಾಶರ ಹಾಡುಗಳು ಹೊಸ–ಹೊಸ ಆಯಾಮಗಳನ್ನು ಪಡುಯುತ್ತಾ ಸಾಗುತ್ತವೆ. ಅಂತೆಯೆ ಉತ್ತರ ಕರ್ನಾಟಕದ ರಂಗಭೂಮಿಯ ಹುಲಿಯೆಂದು ಹೆಸರು ಪಡೆದ ದಿವಂಗತ ಎನ್. ಬಸವರಾಜ ಗುಡಗೇರಿ ಅವರಿಗೆ ಪ್ರಕಾಶರು ಬರೆದ ಹಾಡುಗಳೇ ಬೇಕಿತ್ತು. ಗುಡಿಗೇರಿ ಕಂಪನಿಯ ಒಂದೆರಡು ನಾಟಕಗಳನ್ನು ಹೊರತು ಪಡೆಸಿ ಪ್ರತಿಯೊಂದು ನಾಟಕಗಳಿಗೂ ಪ್ರಕಾಶರೇ ಹಾಡುಗಳನ್ನು ರಚಿಸಿ–ಸಂಗೀತ ಸ್ವರ ಸಂಯೋಜನೆ ಮಾಡಿದ್ದಾರೆ. ಗುಡಗೇರಿ ಕಂಪನಿಯ ಅತ್ಯಂತ ಪ್ರಸಿದ್ಧವಾದ ಸುಶಿಕ್ಷಿತರು ನಾಟಕದಲ್ಲಿ ತಮ್ಮನಿಗಾಗಿ ಕಟ್ಟಿಗೆ ಮಾರಿ ಓದಿಸಿದ ಅಕ್ಕನನ್ನು ತನ್ನ ಕೈ ಹಿಡಿದ ಪತ್ನಿಯ ಮುಂದೆ ಕೆಲಸದವಳು ಅಂತ ಹೇಳಿದಾಗ ನೊಂದುಕೊಂಡ ಅಕ್ಕ ದುಃಖಿಸುತ್ತ ಹಾಡುವ ಆ ಸಂಪೂರ್ಣ ಹಾಡು ಇಂತಿದೆ.

ಮಲೆ ಉಣಿಸಿದ ತಾಯಿ ವಿಷವಾದಳು
ದೇಹ ಉಣಿಸಿದ ಮಡದಿ ಅಮೃತವಾದಳು
ಒಣ ಗಂಜಿ ಕುಡಿದು ಬಡತನದಿ ಬೆಂದು
ನಿನಗಾಗಿ ಬದುಕಿದಾ ಜೀವ
ಕಣ್ಣೀರ ತಂದು ಮನದಲ್ಲಿ ನೊಂದು
ನೋವಾಯ್ತು ನಿನ ಮಾತಿಗೆ ಮನುಜ ।
ಹಡೆದ ಕರುಳಿನ ನುಡಿದ ಮಾತುಗೂಡ
ಬುಡ ಕಡಿದ ಮರದ ತರಹ
ಪಡೆದ ತಂಗಿ ಎಲೆ ಎಂಜಲುಂಡು
ದುಡಿದಾಗ ನಿನ್ನ ಹಿರಿಮೆ
ಸಿರಿತನಕೆ ಒಲಿದು ಹಡೆದವಳ ಮರೆತು
ನಿನ ಸ್ವಾರ್ಥ ನೀ ನೋಡಿದೆ ಮನುಜ ।

ಈ ಹಾಡಿಗಾಗಿ ಇಡೀ ಥೇಟರೇ ಕಣ್ಣೀರ ಹಾಕುತ್ತಿದ್ದ ಸನ್ನಿವೇಶ ಎಲ್ಲರೂ ಕಂಡಂತ ಸತ್ಯ.

***

"ವಿಧಿಯ ಕೈವಾಡ" ನಾಟಕದ ಒಂದು ಹಾಡು ಹೀಗಿದೆ

**ಅಕ್ಷತೆ ಹಾಕುವ ನಿಮ್ಮ ಕೈಗಳು**
**ಹಿಡಿ ಮಣ್ಣು ಸಮಾಧಿಗೆ ಹಾಕ ಬನ್ನಿ**
**ಮುತ್ತೈದೆ ಮಗಳಿಗೆ ಹರಿಸ ಬಂದ ಜನರಿಗೆ**
**ಶವ ನೋಡಿ ದುಃಖ ನಿಮ್ಮ ಕರುಳಿಗೆ**

ಈ ಹಾಡು ಕೂಡ ಪ್ರೇಕ್ಷಕರನ್ನು ಅಷ್ಟೇ ಭಾವಪರವಶರನ್ನಾಗಿ ಮಾಡುತ್ತಿತ್ತು

ಎನ್. ಬಸವರಾಜರು ಎಷ್ಟೋ ವರ್ಷಗಳ ನಂತರ ಬರೆದ "ನೀ ಹುಟ್ಟಿದ್ದು ಯಾರಿಗೆ" ನಾಟಕಕ್ಕೆ ಹಾಡುಗಳುನ್ನ ಕೂಡ್ರಿಸ ಬೇಕಿತ್ತು. ೨-೩ ಬಾರಿ ಹೇಳಿ ಕಳಿಸಿದರೂ ಪ್ರಕಾಶರು ಬರಲಿಲ್ಲ. ಬೇರೆಯವರ ಹಾಡುಗಳನ್ನು ಕೂಡ್ರಿಸಿ ಬಿಡಿ ಅಂತ ಕೆಲವರು ಸೂಚಿಸಿದರೂ ಪ್ರಕಾಶರ ಹಾಡುಗಳಿಲ್ಲದೆ ನಾನು ನಾಟಕ ಆಡುವದಿಲ್ಲ ಅಂತ ಸ್ವತಃ ಎನ್. ಬಸವರಾಜವರೇ ಹೋಗಿ ಪ್ರಕಾಶರನ್ನು "ಹೊರತಿ"ಗೆ ಕರೆದುಕೊಂಡು ಬಂದು ಹಾಡುಗಳನ್ನು ಬರೆಸಿ ಸಂಗೀತ ಸ್ವರ ಸಂಯೋಜನೆ ಮಾಡಿಸಿದರು.

ಪ್ರಕಾಶರ ೫೦ ವರ್ಷಗಳ ಬದುಕಿನ ಅನುಭವಗಳು ನೀ ಹುಟ್ಟಿದ್ದು ನಾಟಕದ ಹಾಡುಗಳ ಸಾಲುಗಳಲ್ಲಿ ಮೈದೊಳೆದು ನಿಂತಿವೆ. ಆ ಅರ್ಥಪೂರ್ಣ ಒಂದು ಹಾಡು:

**ನೀ ಹುಟ್ಟಿದ್ದು ಯಾರಿಗೆಂದು ಮರೆತು**
**ಹೋದ ಮೂರ್ಖನೆ**
**ಜನ್ಮದಾತನನು ಜರೆದು ಯಾವ ಶಿಕ್ಷೆ**
**ಪಡೆಯುವೆ ಇದೇ ಕಲಿಯುಗ ।**
**ಯಾರಿಗ್ಯಾರು ಎಂಬ**
**ಮಾತು ಸತ್ಯವಾಯಿತು**
**ಪ್ರೀತಿ ಮಮತೆ ಮೋಹವೆಲ್ಲ ।**
**ಸೂರಿ ಹೋಯಿತು**
**ಆನಂದದ ಅಲೆಯಲಿ**
**ಬಂಗಾರದ ಮನೆಯಲಿ**

ಕತ್ತಲಾಯಿತು

ಮುತ್ತು ಒಡೆದು ಹೋಯಿತು ।

ಇಂತಹ ಭಾವಪೂರ್ಣ ಹಾಡುಗಳೊಂದಿಗೆ ಹೊರತಿ ಕ್ಯಾಂಪಲ್ಲಿ ನೀ "ಹುಟ್ಟಿದ್ದು ಯಾರಿಗೆ" ನಾಟಕ ಪ್ರಯೋಗಕಂಡಿತು. ನಾಟಕ ಜಯಭೇರಿ ಹೊಡೆಯಿತು. ಆ ಜಯಭೇರಿಯಲ್ಲಿ ಪ್ರಕಾಶರ ಪಾಲೂ ಇದೆ. ಕಾರಣ ನಾಟಕದ ಜೀವಾಳವೇ ಹಾಡುಗಳಾಗಿದ್ದವು. ಮೃದು ಮಧುರ ಸ್ವಪ್ನ ಲೋಕ ಸೃಷ್ಟಿಸುವ, ದುಃಖದ ಕಡಲಿನಲ್ಲಿ ಮುಳಗಿಸುವ ಪ್ರಕಾಶರ ಹಾಡುಗಳು ಎನ್.ಬಸವರಾಜ ಅವರ ಉನ್ನತ ಮಟ್ಟದ ಅಭಿನಯಕ್ಕೆ ಸ್ಫೂರ್ತಿಯಾಗಿದ್ದವು. ನಾಟಕಗಳಲ್ಲಿ ಪಾತ್ರಗಳಷ್ಟೇ ಹಾಡುಗಳು ಪ್ರಾಮುಖ್ಯತೆ ಪಡೆಯುತ್ತಿದ್ದವು.

***

ಪ್ರಕಾಶರು ಕೇವಲ ನಾಟಕ ಹಾಡುಗಳಲ್ಲದೇ ಭಕ್ತಿ ಗೀತೆಗಳನ್ನು ಕೂಡ ರಚಿಸಿದ್ದಾರೆ. ಅವರು ರಚಿಸಿದ ನಾಲತ್ವಾಡದ ಶ್ರೀ ವೀರೇಶ್ವರ ಜೀವನ ಚರಿತ್ರೆ ಭಕ್ತಿ ಗೀತೆಗಳು ಕ್ಯಾಸೆಟ ಆಗಿ ಸಾಕಷ್ಟು ಮಾರಾಟಗೊಂಡಿವೆ. ಅದರಲ್ಲೂ ಈ ಹಾಡನ್ನು ಪ್ರಕಾಶರು ಭಕ್ತಿ ಭಾವ ಉಕ್ಕಿಸುವ ರೀತಿಯಲ್ಲಿ ಹಾಡುತ್ತಿದ್ದರೆ ಜನ ಮತ್ತೆ-ಮತ್ತೆ ಹಾಡಲು ಒತ್ತಾಯಿಸುತ್ತಿದ್ದರು. ಈಗಲೂ ಪ್ರಕಾಶರು ಯಾವದೇ ಕಾರ್ಯಕ್ರಮದಲ್ಲಿದ್ದರೂ ವೀರೇಶ್ವರರ ಹಾಡು ಹಾಡಲೇಬೇಕು. ಆ ಹಾಡಿನ ಅತ್ಯಂತ ಭಾವುಕತೆಯ ಕೆಲವು ನುಡಿಗಳು:

ಜಂಗಮರಿಗೆ ವೀರೇಶ್ವರ ಊಟಕ್ಕೆ
ಆಮಂತ್ರಿಸಲು ನಡೆದಿಹರು
ಮನೆಯಲಿ ಮಗು ಪಂಚಾಕ್ಷರಿ
ಬೇನೆಯ ಸಂಕಟ ತಾಳದೆ ಅಳುತಿರಲು
ತಾಯಿಯ ಕರಳು ಮಿಡಿಯಲು ಅವರು
ಜಂಗಮ ಸೇವೆಯ ಮಾಡಿದರು
ಮಗುವಿನ ಪ್ರಾಣವು ಹೋಯ್ತು
ಹಿಂಸೆ ಸಹಿಸದಾ ಸ್ವಾಮಿ ಗ್ರಾಮದಲಿ
ಧರ್ಮಕ್ಕಾಗಿ ಹೋರಾಡಿದರು
ಮರ್ಮ ತಿಳಿಯದಾ ಜನರು ಸ್ವಾಮಿಗೆ
ಮನ ಬಂದಂತೆ ಆಡಿದರು
ನೊಡರು ಸ್ವಾಮಿ ಕೈ ಕೈ ಮುಗಿದೊಮ್ಮೆ
ಸೊಲಾಪುರಕೆ ತೆರಳಿದರು

**ಭಿಕ್ಷುಕರಾದರು ಅವರು**

**ಸತಿ–ಸುತರಿಗೆ ಉಣಬಡಿಸಿದರು**

**ಸ್ವಾರ್ಥವ ತೊರೆ ನಿಸ್ವಾರ್ಥದಿ ಬಾಳುವ ತೋರಿದರು**

ಹೀಗೆ ಹತ್ತು ನುಡಿಗಳನ್ನು ಒಳಗೊಂಡ ಈ ಹಾಡು ನಾಲತ್ವಾಡದ ಮಹಿಮಾ ಪುರುಷನ ಜೀವನ ಚರಿತ್ರೆಯನ್ನು ಪೂರ್ಣಗೊಂಡಿದೆ. ಪ್ರಕಾಶರ ಬುದ್ಧಿವಂತಿಕೆಗೆ ಕೈಗನ್ನಡಿ ಆಗಿದೆ.

ಪ್ರಕಾಶರು ಚಿಕ್ಕವರಿದ್ದಾಗಲೇ ಕವಿಗಳಿಗೆ ಪ್ರಧಾನ ನೆಲೆಯಾದ ಕಾವ್ಯಗಳ ರಚನೆಗೆ ಕೈ ಹಾಕ್ಕಿದ್ದಾರೆ. ರಾತ್ರಿ ಇಡೀ ಕವನ ಬರೆಯುವದು, ಅವುಗಳನ್ನು ತಂದು ಸ್ನೇಹಿತರ ಮುಂದೆ ಓದುವದು, ಸ್ನೇಹಿತರು ಮೆಚ್ಚಿ "ಹೆಂಗ ಬರಿತಿಯೋ ಯಾವ ಹುಡಗಿನರ ಪ್ರೀತಿ ಮಾಡಿ ಏನು? ಬರೆ ಪ್ರೀತಿ, ಪ್ರೇಮ, ಹೆಣ್ಣಿನ ವರ್ಣನೆ ಇರುವ ಕವನಗಳನ್ನು ಬರಿತಿಯಲ್ಲ" ಎಂದು ಚುಡಾಯಿಸುತ್ತಿದ್ದರು. ಅದೇ ಪ್ರಕಾಶರಿಗೆ ಒಂದು ದೊಡ್ಡ ಹೊಗಳಿಕೆಯೆಂಬಂತೆ ಖುಷಿ ಪಡುತ್ತಿದ್ದರು, ಬರೆದ ಕವನ ಸ್ನೇಹಿತರ ಮುಂದೆ ಓದಿದರೆ ಮುಗಿಯಿತು. ಅಷ್ಟಕ್ಕೆ ತೃಪ್ತಿ, ಮತ್ತೆ ಆ ಕವನ ಪ್ರಕಾಶರಿಗೆ ಬೇಕಾಗುತ್ತಿರಲಿಲ್ಲ. ಹೀಗೆ ಎಷ್ಟೋ ಪ್ರಕಾಶರು ಬರೆದ ಕವನಗಳು ಅದಾವ ಕಸದ ತೊಟ್ಟಿ ಸೇರಿದವೋ ತಿಳಿಯಲಿಲ್ಲ. ಕವಿತೆಗಳನ್ನು ಬರೆದಿದ್ದರು ಅಂತ ಹೇಳಲು ಒಂದಾದರೂ ಕವನ ಸಂಕಲನದ ದಾಖಲೆ ಇಲ್ಲ. ಇನ್ನು ಪ್ರಕಾಶರು ನಾಟಕಗಳಿಗಾಗಿ ಬರೆದ ಹಾಡುಗಳಂತೂ ಹಿಂದಿ ಹಾಡುಗಳ ಧಾಟಿಯಾದರೂ ಕಾವ್ಯ ಸಖ್ಯವನ್ನು ತಮ್ಮ ಹಾಡುಗಳಲ್ಲಿ ಕಟ್ಟಿದ್ದಾರೆ. ಅಂತೆಯೆ ರಂಗಭೂಮಿಯಲ್ಲಿ ಪ್ರಕಾಶರು ಬರೆದ ಹಾಡುಗಳು ಹೊಸ ಹುಟ್ಟು ಪಡೆದು ಪ್ರಜ್ವಲಿಸಿವೆ. ಪ್ರಕಾಶರು ಬರೆದ ಹಾಡುಗಳು ಎಣಿಕೆ ಇಲ್ಲದಷ್ಟು, ಪ್ರಕಟಿಸಿದರೆ ಒಂದು 'ಹೊತ್ತಿಗೆ' ಆಗುವಷ್ಟು. ಇಂದು ಪ್ರಕಾಶರ ಬಳಿ ಹತ್ತು ಹಾಡುಗಳ ಸಂಗ್ರಹ ಕೂಡ ಇಲ್ಲ. ವೃತ್ತಿ ಕಂಪನಿಗಳಿಗೆ ಹೋಗಿ ಹಾಡುಗಳನ್ನು ಬರೆದು ಸಂಗೀತ ಸಂಯೋಜನೆ ಮಾಡಿ ಎಲ್ಲ ಅವರದೇ ಸೊತ್ತು ಎಂಬಂತೆ ತಾವು ಬರೆದ ಹಾಡಿನ ಯಾವುದೇ ಸಾಹಿತ್ಯವನ್ನು ಜೊತೆಗೆ ತರದೇ ಪ್ರಕಾಶರು ಬಂದು ಬಿಡುವದೇ ಅವರ ಹವ್ಯಾಸವಾಗಿತ್ತು. ನಾಟಕಗಳ ಎಲ್ಲ ಪ್ರತಿಗಳು ಪ್ರಕಾಶರ ಬಳಿ ಸಿಗುವದು ಕಷ್ಟವೇ. ಪ್ರಕಾಶರ ಅಗಾಧವಾದ ಸಂಪತ್ತೇ ನಾಟಕ ಮತ್ತು ಹಾಡುಗಳಾಗಿವೆ, ಆ ಸಂಪತ್ತನ್ನು ಕಾಯ್ದಿರಿಸಿಕೊಂಡಿದ್ದರೆ ಯುವ ಪೀಳಿಗೆಗೆ ದಾರಿದೀಪಗಳಾಗಿರುತ್ತಿದ್ದವು. ಪ್ರಕಾಶರನ್ನು ಸದಾ ನೆನೆಯುವ ಹೃದಯಗಳಿರುತ್ತಿದ್ದವು, ಆರಾಧಿಸುವ ಮನಸ್ಸುಗಳ ಸಂಖ್ಯೆ ಬೆಳೆಯುತ್ತಿದ್ದವು. ಅವರ ಬುದ್ಧಿ ಶಕ್ತಿಯ ಸಂಪತ್ತು ಅವರಿಗೇ ತಿಳಿದಿಲ್ಲ ಎಂಬಂತೆ ಯಾವ ದಾಖಲೆಗಳನ್ನು ಇಡಲಾರದ್ದು ಚಿಕ್ಕಂದಿನಿಂದಲೇ ಪ್ರಕಾಶರ ಜೊತೆಗೇ ಬೆಳೆದು ಬಂದ ಮಹಾ ದೌರ್ಬಲ್ಯವೆಂದೇ ಹೇಳಬಹುದು.

# ವಿವಿಧ ಕಂಪನಿಗಳ ಸೇವೆ

ನಾಟಕ ರಂಗದಿಂದ ಸಂಪಾದಿಸಿದ ಹೆಸರು, ಹಣ ಕೀರ್ತಿ, ಯಶಸ್ಸು ಎಲ್ಲ ಮಂಜು ಗಡ್ಡೆಯಂತೆ ಕರಗಿ ಹೋದರೂ ರಂಗಭೂಮಿಯಲ್ಲಿ ಕಳೆದುಕೊಂಡಿದ್ದು ರಂಗಭೂಮಿಯಲ್ಲೇ ಪಡೆಯಬೇಕು ಅಂತ ಶಂಕ್ರಯ್ಯ ಪ್ರಕಾಶರು ಧೈರ್ಯ ಮಾಡಿ ಬೇರೆ ಕಂಪನಿಗಳ ಸೇವೆಗೆ ಸಿದ್ಧರಾಗಿ ನಿಂತರು. ಕಂಪನಿ ಮುಚ್ಚಲ್ಪಟ್ಟ ನಂತರ ತಂದೆ, ಪತ್ನಿ ಮತ್ತು ಮಗಳೊಂದಿಗೆ ಪ್ರಕಾಶರು ಶ್ರೀ ಪುರಾಣಿಕರ ರವಿ ನಾಟಕ ಕಲಾ ಸಂಘ ಲಕ್ಷ್ಮೇಶ್ವರ ಕಂಪನಿಗೆ ಬಂದು ಸೇರಿದರು. ಈ ಕಂಪನಿಯಲ್ಲಿ ತಮ್ಮವೇ ನಾಟಕಗಳಾದ ಭೂಮಿ ತೂಕದ ಹೆಣ್ಣು, ಮುತ್ತೈದೆಗೆ ಕುತ್ತು ಐದು ಮತ್ತು ಸಂಗಮ ನಾಟಕಗಳನ್ನು ಅಚ್ಚುಕಟ್ಟಾಗಿ ಕೂಡ್ರಿಸಿ ಲಕ್ಷ್ಮೇಶರ ಕಂಪನಿ ಬೆಳಗಿ ಬಾಳಲು ಕಾರಣವಾದರು. ಮತ್ತೆ ಪ್ರಕಾಶರು ರಂಗಭೂಮಿಯ ರಾಜ ಎಂಬ ಪಟ್ಟಕ್ಕೆ ಸೇರ್ಪಡೆಗೊಂಡರು. ಹೆಸಾರಾಂತ ಕಂಪನಿಗಳ ಕರೆಗಳು ಬರಲು ಪ್ರಾರಂಭಿಸಿದವು. ಹೆಚ್ಚಿನ ಸಂಬಳ ಮಾತನಾಡಿ ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ ಕಂಪನಿಗೆ ಕುಟುಂಬ ಸಮೇತ ಸೇರಿ ಕೊಂಡರು. ಈ ಕಂಪನಿಯಲ್ಲಿ ಭೂಮಿ ತೂಕದ ಹೆಣ್ಣು, ಮುತ್ತೈದೆಗೆ ಕುತ್ತು ಐದು, ಸತಿ ಸಂಸಾರದ ಜ್ಯೋತಿ, ಚಿನ್ನದ ಗೊಂಬೆ ನಾಟಕಗಳನ್ನು ಕೂಡ್ರಿಸಿ ಒಂದು ವರ್ಷದವರೆಗೆ ಸೇವೆಗೈದು ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ ಕಂಪನಿಗೆ ಹೆಜ್ಜೆ ಇಟ್ಟರು.

ಗುಡಗೇರಿ ಕಂಪನಿಯಲ್ಲಿ ಪ್ರಮುಖವಾಗಿ ಎನ್.ಬಸವರಾಜರು ಬರೆದ ನಾಟಕಗಳನ್ನು ಆಡುತ್ತಿದ್ದುದರಿಂದ ಗುಡಗೇರಿ ಕಂಪನಿಯಲ್ಲಿ ಪ್ರಕಾಶರ ಭೂಮಿ ತೂಕದ ಹೆಣ್ಣು, ಮುತ್ತೈದೆಗೆ ಕುತ್ತು ಐದು, ಸತಿ ಸಂಸಾರದ ಜ್ಯೋತಿ ಮೂರು ನಾಟಕಗಳನ್ನು ಮಾತ್ರ ಆಗಾಗ ಆಡಲಾಗುತಿತ್ತು. ತಮ್ಮ ಸ್ವಂತ ಪ್ರತಿಭೆಗೆ ಇಲ್ಲಿ ಸ್ಥಳಾವಕಾಶ ಇಲ್ಲವೇನೋ ಎಂದು ಮತ್ತೆ ಪಕಾಶರ ಚಿತ್ತ ಅರಿಷಿಣಗೋಡಿ ಕಂಪನಿಯತ್ತ ಹರಿಯಿತು. ಬಿ.ಆರ್.ಅರಿಷಿಣಗೋಡಿಯವರು ಅಷ್ಟೇ ಆದರದಿಂದ ಮತ್ತೆ ಪ್ರಕಾಶರ ಕುಟುಂಬವನ್ನು ಬರಮಾಡಿಕೊಂಡರು. ಅರಿಷಿಣಗೋಡಿಯವರ ಬ್ರ್ಯಾಂಚ ಕಂಪನಿಯಲ್ಲಂತೂ ಕೇವಲ ಪ್ರಕಾಶರ ಬರೆದ ನಾಟಕಗಳನ್ನೇ ಆಡಲಾಗುತ್ತಿತ್ತು. ಪ್ರಕಾಶರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ಪ್ರಕಾಶರಿಗೆ ಹೊಸ ನಾಟಕ ಬರಯಲು ಪ್ರೇರಣೆ ಆಯಿತು ರಾಣೇಬೆನ್ನೂರ ಕ್ಯಾಂಪಿಗೆ "ತವರು ಬಿಟ್ಟ ತಂಗಿ" ನಾಟಕವನ್ನು ರಚಿಸಿ ರಂಗಕ್ಕೆ ತರಲಾಯಿತು. ಅರಿಷಿಣಗೋಡಿಯವರ ಕಂಪನಿಯ ಸೇವೆಯಲ್ಲಿರುವಾಗಲೇ ಪತ್ನಿ ಸುನಂದಾಳನ್ನು ಪಾತ್ರ ಮಾಡುವದನ್ನು ಬಿಡಿಸಿ "ಮಗಳನ್ನು ಓದಿಸಬೇಕು, ನಾವೆಲ್ಲ ಕಂಪನಿಯಲ್ಲೇ ಇದ್ದರೆ ಅವಳ ಓದು ಮುಂದುವರೆಯಲಾರದು" ಅಂತ ತಂದೆ ಶಂಕ್ರಯ್ಯನವರನ್ನು,

ಪತ್ನಿ ಸುನಂದಾಳನ್ನು ಮತ್ತು ಮಗಳು ವೀಣಾಳನ್ನು ಹುಬ್ಬಳ್ಳಿಯಲ್ಲಿ ಬಾಡಿಗೆ ಮನೆ ಹಿಡಿದು ಕಂಪನಿ ಬಿಡಿಸಿ ಕಳಿಸುವ ವ್ಯವಸ್ಥೆ ಮಾಡಿದಾಗ, ದೇಹ ಎರಡಾದರೂ ಜೀವ ಒಂದೇ ಎಂಬಂತೆ ಬಾಳಿದ ಸುನಂದಾ ಪ್ರಕಾಶರನ್ನು ಬಿಟ್ಟು ಹುಬ್ಬಳ್ಳಿಯಲ್ಲಿ ಮನೆ ಮಾಡಿಕೊಂಡು ತಾವೊಬ್ಬರೇ ಹೋಗಿರಲು ಒಪ್ಪದೇ ಒದ್ದಾಡಿದ್ದರು. "ಮಗಳಿಗಾಗಿ ನೀನು ಹೋಗಲೇಬೇಕು" ಎಂದು ತಿಳಿಸಿ ಹೇಳಿದ ಪ್ರಕಾಶರ ಮಾತಿಗೆ ಮಣಿದು ಬಣ್ಣದ ಬದುಕಿನಲ್ಲಿ ಕಲಾಜೋಡಿಯಾಗಿ ಕಾಣಿಸಿಕೊಳ್ಳುವ ಅವಕಾಶವನ್ನು ತೊರೆದು ಮಗಳು ವೀಣಾಳ ಓದೇ ಮುಖ್ಯವೆಂದು ಹುಬ್ಬಳ್ಳಿಯಲ್ಲಿ ವಾಸವಾದರು. ತದನಂತರ ಪ್ರಕಾಶರ ರಂಗಪಯಣ ಬೇರೆ ಕಂಪನಿಗಳತ್ತ ಸಾಗಿತು.

ಕೆ.ಬಿ.ಅರ್. ಕಂಪನಿಯಲ್ಲಿ ಭೂಮಿ ತೂಕದ ಹೆಣ್ಣು ನಾಟಕವನ್ನು, ಮೈಂದರ್ಗಿ ಕಂಪನಿಯಲ್ಲಿ ತವರು ಬಿಟ್ಟ ತಂಗಿ, ಭೂಮಿ ತೂಕದ ಹೆಣ್ಣು ನಾಟಕಗಳನ್ನು, ಮಾಲತಿ ಸುಧೀರವರ ಕಂಪನಿಯಲ್ಲಿ ಭೂಮಿ ತೂಕದ ಹೆಣ್ಣು, ಬೆಂಗಳೂರು ಕ್ಯಾಂಪಿಗೆ ತವರು ಬಿಟ್ಟ ತಂಗಿ ನಾಟಕವನ್ನು ಕೂಡ್ರಿಸಿದರು. ಈ ನಾಟಕ ಬೆಂಗಳೂರಲ್ಲಿ ಸುಮಾರು ೧೦೦ ಪ್ರಯೋಗಗಳನ್ನು ಕಂಡಿದೆ. ರಾಜು ತಾಳಿಕೋಟಿ ಅವರ ಕಂಪನಿಗೆ ಪಣ ತೊಟ್ಟ ಪತಿವ್ರತೆ, ತವರು ಬಿಟ್ಟ ತಂಗಿ ನಾಟಕಗಳನ್ನು ಕೂಡ್ರಿಸಿದರು. ಇತ್ತೀಚಿಗೆ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ರಚಿಸಿದ "ಗರತಿ ಗೆದ್ದಳು ಸವತಿ ಸೋತಳು", "ಜಿದ್ದಿಗೆ ಬಿದ್ದ ಜಿಗದ ಹೋದ", ಹೊಸ ನಾಟಕಗಳನ್ನು ಕೂಡ್ರಿಸಲಾಯಿತು. ರಾಜು ತಾಳಿಕೋಟಿಯವರ ಮಸಾಲೆ ಅಭಿನಯದೊಂದಿಗೆ ಈ ನಾಟಕಗಳು ಜಾತ್ರೆ ಕ್ಯಾಂಪಗಳಲ್ಲಿ ಯಶಸ್ಸಿನ ಬಾವುಟ ಹಿಡಿದು ಹಾರಾಡಿ, ಪ್ರಕಾಶರ ಹೆಗ್ಗಳಿಕೆಗೆ ಕಾರಣವಾಗಿವೆ.

ಶ್ರೀ ಸ್ವಾಮಿ ಸಮರ್ಥ ಕಲಾ ಸಂಘ ಅಕ್ಕಲಕೋಟ ಬಿಜಾಪುರದಲ್ಲಿದ್ದಾಗ, ಇನ್ನೇನು ಕಂಪನಿ ನಿಂತೇ ಹೋಗುತ್ತದೆ ಎನ್ನುವಷ್ಟು ಉತ್ತಮ ನಾಟಕಗಳಿಲ್ಲದೆ ಕುಸಿದು ಹೋಗಿತ್ತು. ಆ ಸಂಧರ್ಭದಲ್ಲಿ ಕಂಪನಿಯ ಒಡತಿ ರೇಣುಕಾ ಅಕ್ಕಲಕೋಟ ಖರಜಗಿ ಶರೀಫರಿಂದ ಪ್ರಕಾಶ ಕಡಪಟ್ಟಿಯವರನ್ನು ಕಂಪನಿಗೆ ಕರೆ ಕಳುಹಿಸಿ, ದಯವಿಟ್ಟು ನಿಮ್ಮ ನಾಟಕಗಳನ್ನು ನಮ್ಮ ಕಂಪನಿಗೆ ಕೂಡ್ರಿಸಿ ಕೊಡಬೇಕು ಅಂತ ಕೇಳಿದರು. ಕಂಪನಿಗೆ ಸಧ್ಯ ತನ್ನ ಅವಶ್ಯಕತೆ ಇದೆ ಎಂದರಿತ ಪ್ರಕಾಶರು ಸಂಬಳವನ್ನು ಹೆಚ್ಚಿಗೆ ಕೇಳಿದ್ದರು. ಒಂದು ಮಾತೂ ವಿಚಾರಿಸದೆ ರೇಣುಕಾ ಅಕ್ಕಲಕೋಟ ಒಪ್ಪಿಕೊಂಡಿದ್ದರು. ಸುಮಾರು ೨೦೦೬ ರಲ್ಲಿ ತವರು ಬಿಟ್ಟ ತಂಗಿ ನಾಟಕವನ್ನು ನಿರ್ದೇಶಿಸಿ ಬಿಜಾಪುರಕ್ಕೆ ಪ್ರಾರಂಭಿಸಿದರು. ಈ ನಾಟಕ ೧೦೦ ಪ್ರಯೋಗಗಳ ಯಶಸ್ವಿ ಪ್ರದರ್ಶನ ಕಂಡು ಕಂಪನಿಯ ಶ್ರೇಯೋಭಿವೃದ್ಧಿಗೆ ಕಾರಣವಾಯಿತು. ರೇಣುಕಾ ತಾನು ಮಾತನಾಡಿದ ವ್ಯವಹಾರಕ್ಕಿಂತ ಕವಿ ಕಾಣಿಕೆ ಅಂತ ಹೆಚ್ಚಿಗೆ ಹಣ ಕೊಟ್ಟು ಗೌರವದಿಂದ ಬಿಜಾಪುರದಲ್ಲಿ ಸನ್ಮಾನಿಸಿದ್ದಳು. ನೀವು ಕಂಪನಿಯಲ್ಲೇ ಇರಬೇಕು ಅಂತ ಒತ್ತಾಯಿಸಿದಳು. ನಿಮ್ಮ ನಿರ್ದೇಶನ ನನಗೆ ತುಂಬಾ ಇಷ್ಟವಾಗಿದೆ,

ನನಗೂ ಪಾತ್ರ ಮಾಡಲು ಕಲಿಸಬೇಕು ಅಂತ ಹೇಳಿದ್ದಳು. ರೇಣುಕಾ ತೋರಿಸುವ ಪ್ರೀತಿ ಗೌರವಕ್ಕೆ ಮಣಿದ ಪ್ರಕಾಶರು ಕಂಪನಿಯಲ್ಲಿ ನೆಲೆ ನಿಂತರು. ಬೇರೆ ನಾಟಕಗಳನ್ನು ಕೂಡ್ರಿಸಿ, ಸಂಪೂರ್ಣ ನಾಟಕಗಳ ಜವಾಬ್ದಾರಿಯನ್ನು ಹೊತ್ತು ಒಂದು ವರ್ಷದ ಅವಧಿಯವರೆಗೆ ತಮ್ಮ ಕರ್ತವ್ಯವನ್ನು ನಿಭಾಯಿಸಿದರು. ಪ್ರಕಾಶರ ಸೇವೆಯ ಅವಧಿಯಲ್ಲಿಯೇ ಮಗಳು ವೀಣಾ ಕೂಡ ಬಂದು ತಂದೆಯೊಂದಿಗೆ ಕಂಪನಿಯಲ್ಲಿ ಸೇವೆ ಸಲ್ಲಿಸಿದ್ದಳು.

"ರೇಣುಕಾ ಅಂದರೆ ಅನ್ನಪೂರ್ಣೇಶ್ವರಿ, ನಾನು ಆತ್ಮತೃಪ್ತಿಯಿಂದ ಶ್ರೀ ಸ್ವಾಮಿ ಸಮರ್ಥ ಕಲಾ ಸಂಘ ಅಕ್ಕಲಕೋಟ ಕಂಪನಿಯಲ್ಲಿ ಸೇವೆ ಸಲ್ಲಿಸಿರುವೆ. ನನಗಾಗಿ ಒಂದು ಕಂಪನಿ ಇದೆ ಎಂಬ ಧೈರ್ಯವಿತ್ತು, ಅವಳು ವಿಧಿವಶಳಾಗಿ ಕಂಪನಿ ಬಂದಾಗಿದ್ದು, ನನ್ನ ಕಂಪನಿ ಬಂದಾದಷ್ಟೇ ನನಗೆ ನೋವಾಗಿದೆ" ಎನ್ನುತ್ತಾರೆ ಪ್ರಕಾಶ.

ಪ್ರಸ್ತುತ ನಾಟಕ ಅಕಾಡೆಮಿ ಅಧ್ಯಕ್ಷರಾಗಿರುವ ಶ್ರೀ ಶೇಖ ಮಾಸ್ತರ ಹಾಗೂ ಶ್ರೀಧರ ಹೆಗಡೆ ಅವರ ಆಡಳಿತದಲ್ಲಿ ೧೩ ವರ್ಷಗಳಿಂದ ಗುಲಬರ್ಗಾದಲ್ಲಿ ನಡೆದು ದಾಖಲೆ ನಿರ್ಮಿಸಿದ ಶ್ರೀ ಕುಮಾರೇಶ್ವರ ನಾಟ್ಯ ಸಂಘ ಹಾನಗಲ್ ಕಂಪನಿಯಲ್ಲಿ ತವರು ಬಿಟ್ಟ ತಂಗಿ, ಭೂಮಿತೂಕದ ಹೆಣ್ಣು, ಸತಿ ಸಂಸಾರದ ಜ್ಯೋತಿ ನಾಟಾಕಗಳನ್ನು ಕೂಡ್ರಿಸಿದ್ದಲ್ಲದೇ, 'ವರ ನೋಡಿ ಹೆಣ್ಣು ಕೊಡು' ನಾಟಕದಲ್ಲಿ ಕುಂಬಾರ ಬಸಪ್ಪನ ಪಾತ್ರವನ್ನು ವಹಿಸಿ 'ಪಣ ತೊಟ್ಟ ಪತಿವ್ರತೆ' ನಾಟಕದಲ್ಲಿ ಚರಗಿ ಚನಬಸಪ್ಪ ಪಾತ್ರ ವಹಿಸಿ ಹಾಸ್ಯಾಭಿನಯದಿಂದ ಗುಲ್ಬರ್ಗಾದ ಜನತೆಯ ಮನ ಮೆಚ್ಚಿಸಿದ್ದಾರೆ. ಇತ್ತೀಚಿಗೆ ಹೊಸ ನಾಟಕವಾದ "ದೋಸ್ತಿ ಆಸ್ತಿಗಿಂತ ಜಾಸ್ತಿ" ಎಂಬ ನಾಟಕವನ್ನುಮತ್ತು ಹಾಡುಗಳನ್ನು ಕೂಡ್ರಿಸಿ೧೨/೦೭/೨೦೧೪ ರಲ್ಲಿ ರಂಗಭೂಮಿಗೆ ತರಲಾಯಿತು.

ಜೀವನದಲ್ಲಿ ಸಿಗುವ ಸ್ನೇಹತರಿಗೇನು ಕೊರತೆಯಿಲ್ಲ, ಸಮಯ ಸಾಧಕರೆಲ್ಲ ಸ್ನೇಹದ ಹೆಸರಿನಿಂದ ಜೀವನದಲ್ಲಿ ಪ್ರವೇಶ ಪಡೆಯುತ್ತಾರೆ. ತಮ್ಮ ಫಲಾ ಪೇಕ್ಷೆಗಳು ಈಡೇರದಿದ್ದಾಗ ಕಳಚಿ ಕೊಳ್ಳುತ್ತಾರೆ. ಉತ್ತಮ ಸ್ನೇಹಿತ ಸಿಗಬೇಕಾದರೆ ಏಳು ಜನ್ಮದ ಪುಣ್ಯ ಇರಬೇಕು ಎನ್ನುವ ಮಾತು ಸುಳ್ಳಾಗಲಾರದು. 'ದೋಸ್ತಿ ಆಸ್ತಿಗಿಂತ ಜಾಸ್ತಿ' ಈ ಹೆಸರೇ ಕಥೆಯ ಸಾರಾಂಶ ತಿಳಿಸುವಂತೆ ಉತ್ತಮ ಸ್ನೇಹಿತರ ಸುತ್ತ ಹೆಣೆದ ಕಥೆ ಇದು. ಈ ಕಥೆಯಲ್ಲಿ ತನ್ನ ಸ್ನೇಹಿತನಿಗಾಗಿ ತಾನು ಪ್ರೀತಿಸುತ್ತಿದ್ದ ಪ್ರೀತಿಯನ್ನೇ ಬಿಟ್ಟು ಕೊಟ್ಟು ಕೊನೆಗೆ ಸ್ನೇಹಿತನಿಗಾಗಿ ತನ್ನ ಪ್ರಾಣವನ್ನೇ ತ್ಯಾಗ ಮಾಡುತ್ತಾನೆ. ಇಲ್ಲಿ ಮತ್ತೊಬ್ಬ ಸ್ನೇಹಿತ ಸ್ವಾರ್ಥಿಯ ಸ್ಥಾನದಲ್ಲಿ ನಿಂತಂತೆ ಅನಿಸಿದರೂ ನಾಟಕ ನೋಡುವಾಗ ಒಳತಿರುಳಿನ ಅರ್ಥವಾಗುತ್ತದೆ. ಪ್ರತಿಯೊಂದು ಸನ್ನಿವೇಶಗಳು ರೋಮಾಂಚನ ಎನಿಸುತ್ತವೆ. ಕಥೆಗೆ ಒಪ್ಪುವ ಹಾಗೆ ಹಿಂದಿ ದೋಸ್ತಿ ಸಿನೆಮಾದ ಹಾಡುಗಳ ಧಾಟಿಗಳನ್ನು ಬಳಸಿಕೊಂಡು ರಚಿಸಿರುವ ಪ್ರಕಾಶರ ಹಾಡುಗಳು ಈ

ನಾಟಕಕ್ಕೆ ಮತ್ತಷ್ಟು ಮೆರಗು ತಂದಿವೆ. ಗುಲ್ಬರ್ಗಾದಲ್ಲಿ ೯೬ ಪ್ರಯೋಗಗಳನ್ನು ಕಂಡು ೧೦೦ ಪ್ರಯೋಗಗಳನ್ನು ಕಾಣುವ ಸ್ಥಿತಿಯಲ್ಲಿದ್ದಾಗ ಮುಖ್ಯ ಪಾತ್ರ ವಹಿಸುತ್ತಿದ್ದ ಒಬ್ಬ ಕಲಾವಿದೆ ಆ ಸಮಯದಲ್ಲಿ ಕಂಪನಿ ಬಿಟ್ಟ ಕಾರಣ ಶತಮಾನೋತ್ಸವದ ಸಂಭ್ರಮ ಕಾಣಬೇಕಾದ ನಾಟಕ ೯೬ನೇ ಪ್ರಯೋಗಕ್ಕೆ ನಿಲ್ಲಿಸಲಾಯಿತು. ಈ ನಾಟಕ ಪ್ರಕಾಶರ ಬಗ್ಗೆ ಜನರಲ್ಲಿ ಮತ್ತೆ ಆಶಾಭಾವನೆ ಮೂಡಿಸಿದ ನಾಟಕವಾಗಿದೆ. ಕಂಪನಿಗೆ ಉತ್ತಮ ಫಲಿತಾಂಶ ಕೊಟ್ಟಿದೆ.

ಮಂಡಲಗೇರಿ ಅವರ ಕಂಪನಿಯಲ್ಲಿ ಕೂಡ ತವರ ಬಿಟ್ಟ ತಂಗಿ ನಾಟಕವನ್ನು ಮತ್ತು ೨೦೧೪ ರಲ್ಲಿ ಬಾಗಲಕೋಟ ಕ್ಯಾಂಪಿಗೆ "ಹೆತ್ತಪ್ಪನಿಗೆ ಏನು ಗೊತ್ತು ಹೆತ್ತವಳ ಕಿಮ್ಮತ್ತು" ನಾಟಕವನ್ನು ಕೂಡ್ರಿಸಲಾಯಿತು. ಈ ಸಮಯದಲ್ಲಿ ಮಗಳು ವೀಣಾ ಕೂಡ ಮಂಡಲಗೇರಿ ಕಂಪನಿಯಲ್ಲಿ ಸೇವೆ ಸಲ್ಲಿಸುತ್ತಿದ್ದಳು.

ಹಿರಿತೆರೆ, ಕಿರುತೆರೆ ಪೈಪೋಟಿಯ ಮಧ್ಯೆ ಪ್ರಕಾಶರ ಹೊಸ ನಾಟಕಗಳು ಒಂದಾದ ಮೇಲೊಂದು ಗೆಲ್ಲುತ್ತಿರುವದು ಪ್ರಕಾಶರ ಪ್ರತಿಭೆಗೆ ಸಾಕ್ಷಿ. ಪ್ರಕಾಶರ ಕೈಬರಹದಲ್ಲಿದ್ದ ಕೆಲವು ನಾಟಕಗಳನ್ನು ಎಲ್ಲ ವೃತ್ತಿ ಕಂಪನಿಗಳು ಆಡುತ್ತಿದ್ದಾರಲ್ಲಾ, ಹಾಗೆ ಆಡಲು ಕಂಪನಿಗಳು ಒಪ್ಪುವದಿಲ್ಲವಲ್ಲ, ಇದು ಹೇಗೆ ಸಾಧ್ಯ ಎಂದು ಪ್ರಕಾಶರಿಗೆ ಪ್ರಶ್ನಿಸಿದರೆ ಅದಕ್ಕೆ ಅವರ ಉತ್ತರ "ನನ್ನ ಯಾವ ನಾಟಕಗಳನ್ನು ಕಂಪನಿಗಳೊಂದಿಗೆ ಅಗ್ರಿಮೆಂಟ ಮಾಡಿಸಿಲ್ಲ ಹೀಗಾಗಿ ನಾನು ಒಪ್ಪಿಗೆ ಕೊಟ್ಟರೆ ಯಾರಾದರೂ ಆಡಬಹುದು, ಸಧ್ಯ ನನ್ನ ಉಪಜೀವನಕ್ಕೆ ನಾಟಕಗಳೇ ಆಧಾರವಾಗಿವೆ" ಎಂದು ಸಮಾಧಾನದ ನಗು ಚೆಲ್ಲುತ್ತಾರವರು.

# ಪ್ರಕಾಶ ಕುಟುಂಬದ ಹೆಸರಾಂತ ಕಲಾವಿದರು

## ವೇದಮೂರ್ತಿ ಶಂಕ್ರಯ್ಯ (ತಂದೆ)

ಜೀವನದ ಸುದೀರ್ಘ ಕಾಲವನ್ನು ವೃತ್ತಿ ರಂಗಭೂಮಿಯಲ್ಲೇ ಕಳೆದ ಅಭಿಜಾತ ಕಲಾವಿದರಾದ ವೇದಮೂರ್ತಿ ಶಂಕ್ರಯ್ಯ, ಕಡಪಟ್ಟೀ ಗ್ರಾಮದ ನಿಂಗಯ್ಯ ಈರವ್ವ ದಂಪತಿಗಳ ಮಗನಾಗಿ ೧೯೨೮ರಲ್ಲಿ ಜನಿಸಿದರು. ಗುರ್ಲಿಂಗಯ್ಯ, ಮನೋಹರ, ಬಾಲಚಂದ್ರಯ್ಯ, ಅಣ್ಣಯ್ಯ ಸಹೋದರರು ಮತ್ತು ಸುಮಿತ್ರಾ, ಲಲಿತಾ ಸಹೋದರಿಯರನ್ನು ಪಡೆದಿದ್ದರು. ಸುಮಾರು ಏಳನೇ ತರಗತಿಯವರೆಗೆ ಓದಿದ ಇವರು ಪಿ.ಡಬ್ಲ್ಯು.ಡಿ.ಯಲ್ಲಿ ವೃತ್ತಿಯಲ್ಲಿದ್ದರು.

ರಾಚವ್ವಳನ್ನು ಮದುವೆಯಾಗಿ ಸಂಸಾರ ಜೀವನಕ್ಕೆ ಅಡಿ ಇಟ್ಟು .ಆರು ಜನ ಮಕ್ಕಳನ್ನು ಪಡೆದರು – ಪ್ರಕಾಶ, ರಾಜೇಶ, ದಿಲೀಪ, ಅಶೋಕ, ವಿಜಯ, ಶಾರದಾ. ಅಭಿನಯದ ಬಗ್ಗೆ ತುಂಬಾ ಆಸಕ್ತಿ ಹೊಂದಿದ ಶಂಕ್ರಯ್ಯ ಜಮಖಂಡಿ ಹವ್ಯಾಸಿ ಮಲ್ಲಿಕಾರ್ಜುನ ನಾಟ್ಯ ಸಂಘದಲ್ಲಿ ಬೆರೆತು ಆಗಾಗ ಅಭಿನಯಿಸಲು ಪ್ರಾರಂಭಿಸಿದರು. ಹೆಚ್ಚಾಗಿ ಸ್ತ್ರೀ ಪಾತ್ರಗಳನ್ನೇ ನಿರ್ವಹಿಸುತ್ತಿದ್ದರು. "ಕಿತ್ತೂರ ರಾಣಿ ಚನ್ನಮ್ಮ" ನಾಟಕದ "ಚನ್ನಮ್ಮ" ಪಾತ್ರ, "ಟಿಪ್ಪು ಸುಲ್ತಾನ" ನಾಟಕದ "ಜಯಂತಿ" ಪಾತ್ರ, "ದೀಪಾವಳಿ" ನಾಟಕದ "ನೀಲಾ" ಪಾತ್ರ, "ಉಷಾ ಸ್ವಯಂವರ" ನಾಟಕದ "ಉಷಾ" ಪಾತ್ರ, ಮುಂತಾದ ನಾಟಕಗಳಿಂದ ಶಂಕ್ರಯ್ಯ ಅತ್ಯುತ್ತಮ ನಟರೆಂದು ಗುರುತಿಸಲ್ಪಟ್ಟಿದ್ದರು. ನಾಟಕದ ಗೀಳು ಕಂಪನಿ ಮಾಡುವ ಆಸೆಗೆ ಕೈ ಹಾಕುವಂತೆ ಮಾಡಿತು. ಇದ್ದ ಕೆಲಸವನ್ನು ಬಿಟ್ಟು ಪತ್ನಿ ರಾಚವ್ವಳ ಹೆಸರಲ್ಲಿದ್ದ ಹೊಲವನ್ನು ಮಾರಿ, ಹವ್ಯಾಸಿ ಕಲಾವಿದರನ್ನು ಒಟ್ಟು ಗೂಡಿಸಿ "ಶ್ರೀ ಗುರುಪ್ರಸಾದ ನಾಟ್ಯ ಸಂಘ ಕಡಪಟ್ಟಿ" ಎಂಬ ಹೆಸರಲ್ಲಿ ತಾವೇ ಬರೆದ "ಮದನ ಮೋಹನ" ನಾಟಕದ ಮುಖಾಂತರ ಕಂಪನಿಯನ್ನು ಪ್ರಾರಂಭಿಸಿದರು.

ಈ ನಾಟಕದಲ್ಲಿ ಶಂಕ್ರಯ್ಯನವರು ಸುರೇಶ ಪಾತ್ರ ವಹಿಸಿದರು. ಅಂದಿನಿಂದ ಪುರುಷ ಪಾತ್ರ ವಹಿಸಲು ಪ್ರಾರಂಭಿಸಿದರು. ಕೇವಲ ಮಾತುಗಾರಿಕೆಯಿಂದ ಮೋಡಿ ಮಾಡಿ ಪ್ರೇಕ್ಷಕ ಅತ್ತಿತ್ತ ಅಲುಗಾಡದಂತೆ ಹಿಡಿದಿಟ್ಟುಕೊಳ್ಳೋ ನಟನಾ ಚಾತುರ್ಯ ಸಾಧಿಸಿದ ಶಂಕ್ರಯ್ಯನವರು ಹೆಚ್ಚಾಗಿ ಹಾಸ್ಯ ಪಾತ್ರಗಳಿಂದ ಜನರನ್ನು ರಂಜಿಸಿದರು ಹಾಗೂ ತಮ್ಮ ಹಿರಿಯ ಮಗನಾದ ಪ್ರಕಾಶನನ್ನು ರಂಗಭೂಮಿಗೆ ತಂದರು. ಭಲೆ ಮಗಳು ನಾಟಕದ ಸುಬ್ಬ–ಭಟ್ಟ, ಮದನ್ ಮೋಹನ ನಾಟಕದ ಗೋಪಾಲ,

ಬಹದ್ದೂರ ಮಗ ನಾಟಕದ ಗುಂಡು, ಸಂಗಮ ನಾಟಕದ ಫಕೀರ, ಚಿನ್ನದ ಗೊಂಬೆ ನಾಟಕದ ಎಂಟಿ ಗೌಡ, ರೈತನ ಮಕ್ಕಳು ನಾಟಕದ ಮಲ್ಲಪ್ಪಶೆಟ್ಟಿ, ಭೂಮಿ ತೂಕದ ಹೆಣ್ಣು ನಾಟಕದ ರಾಚೋಟೆಪ್ಪ, ಗೆದ್ದ ಸೊಸೆ ಬಿದ್ದ ಮಾವ ನಾಟಕದ ಸಿಮೆಂಟ ಚಂದ್ರಯ್ಯ ಇವರ ಹೆಸರನ್ನು ರಂಗಭೂಮಿಯಲ್ಲಿ ಬೆಳಗಿಸಿದ ಪಾತ್ರಗಳು. ಶಂಕ್ರಯ್ಯನವರು ಅಭಿನಯದ ಜೊತೆಗೆ ನಾಟಕಕಾರರಾಗಿಯೂ ಗುರುತಿಸಿ ಕೊಂಡಿದ್ದಾರೆ. ಇವರು ಬರೆದ ನಾಟಕಗಳು ದೈವ ಲೀಲೆ, ಸಂಗಮ (ಪ್ರಕಟಿತ), ಬೆಂಗಳೂರು ಬಾಬು, ಹುಬ್ಬಳ್ಳಿಯ ಹುಲಿಯಪ್ಪ, ಕಣ್ಣು ಕೊಟ್ಟ ತಂಗಿ ಮತ್ತು ಮದನ ಮೋಹನ(ಪ್ರಕಟಿತ). ಮದನ ಮೋಹನ ಹಾಗೂ ಸಂಗಮ ನಾಟಕಗಳು ಗ್ರಾಮೀಣ ರಂಗಭೂಮಿಯಲ್ಲಿ ಅತ್ಯಂತ ಜನಪ್ರಿಯವಾದ ನಾಟಕಗಳಾಗಿವೆ.

"ನಿಮ್ಮ ಮದನ ಮೋಹನ ನಾಟಕವು ಅತ್ಯುನ್ನತ ಹೆಸರು ಪಡೆದಿದೆ, ಇನ್ನು ನಿಮ್ಮ ಕಂಪನಿಯ ವಿಷಯವಾಗಿ ಹೇಳಬೇಕು ಎಂದರೆ ನಿಮ್ಮ ನಾಟಕಗಳನ್ನು ನೋಡುವದೇ ಒಂದು ಭಾಗ್ಯ, ನಿಮ್ಮ ಕಲಾಪ್ರತಿಭೆ ಅಗಾಧವಾದದು" ಅಂತ ಅಭಿಮಾನಿಗಳು ಹೇಳಿದರೆ ಶಂಕ್ರಯ್ಯನವರು ಕೊಡುವ ಉತ್ತರ ಇದಾಗಿತ್ತು, "ರಂಗಭೂಮಿಯಲ್ಲಿ ಎಂತೆಂಥ ಘನಸಾಧಕರು ಬಂದು ಹೋಗಿದ್ದಾರೆ. ಅವರ ಮುಂದೆ ನಾನು ತೃಣದ ಸಮಾನ. ಸಂಘದ ಮಾಲೀಕನಿಗಿಂತಲೂ, ಕವಿಯ ರಚನೆಗಿಂತಲೂ ಅಭಿನಯಿಸುವ ಕಲಾವಿದರ ಕರ್ತವ್ಯ ನಿಷ್ಠೆ ಮುಖ್ಯ. ಒಂದು ನಾಟಕದ ಯಶಸ್ಸಿಗೆ ಹಲವಾರು ವ್ಯಕ್ತಿಗಳ ಶ್ರಮವಿರುತ್ತದೆ, ಎಲ್ಲ ವ್ಯಕ್ತಿಗಳ ಒಕ್ಕಟ್ಟು ನನ್ನ ನಾಟಕಕ್ಕೆ ಯಶಸ್ಸು ತಂದಿದೆ" ಎಂದು ಹೇಳುತ್ತಿದ್ದ ಶಂಕ್ರಯ್ಯನವರ ಮಾತು ಎಲ್ಲವೂ ನನ್ನಿಂದಲೇ ಎನ್ನುವರ ಮುಖಕ್ಕೆ ಹೊಡೆದಂತಿರುತ್ತಿತ್ತು. ಕಂಪನಿಯ ಆರಂಭ ಕಾಲದಿಂದಲೂ ಎದೆಗುಂದದೆ ಬೇರೆ ಕಂಪನಿಗಳೊಂದಿಗೆ ಸ್ಪರ್ಧಿಸುತ್ತಲೇ ೨೩. ವರ್ಷಗಳವರೆಗೂ ಕಂಪನಿಯನ್ನು ನಡೆಸಿದರು. ತಾವು ಕಟ್ಟಿ ಬೆಳೆಸಿದ ಕನಸಿನ ಕಂಪನಿ ಬಂದಾದ ನಂತರ ಸದಾ ಪ್ರಕಾಶರ ಆಶ್ರಯದ ಮರವಾಗಿ ನಿಂತು ವಿವಿಧ ಕಂಪನಿಗಳಲ್ಲಿ ಸೇವೆ ಸಲ್ಲಿಸಿದರು. ಕಂಪನಿಯ ಮಾಲಿಕರಾಗಿ, ಕಲಾವಿದರಾಗಿ, ನಾಟಕಕಾರರಾಗಿ ಪರಮಾರ್ಥ ದೃಷ್ಟಿಯಿಂದ ರಂಗಭೂಮಿಯ ಸೇವೆ ಸಲ್ಲಿಸಿ ೨೦೦೦ ರಲ್ಲಿ ಅನಾರೋಗ್ಯದಿಂದ ಹುಬ್ಬಳ್ಳಿಯಲ್ಲಿ ಬಾರದ ಲೋಕಕ್ಕೆ ತೆರಳಿದರು. ವೃತ್ತಿ ರಂಗಭೂಮಿಯನ್ನು ಬೆಳೆಸಿ ಪೋಷಿಸಿದ, ಪ್ರಕಾಶರಂಥ ಪ್ರತಿಭಾವಂತ ಪುತ್ರನನ್ನು ಸಾಣೆ ಹಿಡಿದು ರಂಗಭೂಮಿಗೆ ಕೊಟ್ಟ ವೇದಮೂರ್ತಿ ಶಂಕ್ರಯ್ಯ ಕಡಪಟ್ಟಿಯವರ ರಂಗಸೇವೆ ಚಿರಸ್ಮರಣೀಯವಾದುದು.

## ಸುನಂದಾ ಕಡಪಟ್ಟಿ (ಪತ್ನಿ)

ಸುಂದರತೆಗೆ ಮತ್ತೊಂದು ಹೆಸರೇ ಸುನಂದಾ. "ನಾಯಕಿಗೆ ಒಪ್ಪುವ

ಮೈಮಾಟ. ಕವಿತೆಗಳ ಸೃಷ್ಟಿಗೆ ಕಾರಣವಾಗುವ ಕಣ್ಣೋಟ. ನಾದಮಯ ಲೋಕದಲ್ಲಿ ತೇಲಿಸುವ ಸುಮಧುರ ಕಂಠ. ಒಟ್ಟು ಪ್ರೇಕ್ಷಕರನ್ನು ಚುಂಬಕದಂತೆ ಸೆಳೆಯುವ ಸೌಂದರ್ಯ ರಾಶಿ ಸುನಂದಾ."

ಇವರ ಮೊದಲನೆ ಹೆಸರು ಗೌರಮ್ಮ. ರಾಯಚೂರ ಜಿಲ್ಲೆಯ ಲಿಂಗಸೂರು ತಾಲೂಕಿನ ಭೋಗಾಪುರ ಗ್ರಾಮದ ಬಸಯ್ಯ, ಮಾಲಿಂಗಮ್ಮ ದಂಪತಿಯ ಮಗಳಾಗಿ ಹುಟ್ಟಿದ ಗೌರಮ್ಮ ಹತ್ತು ವರ್ಷದ ಬಾಲಕಿ ಇದ್ದಾಗಲೇ ಬಡತನದ ಕಾರಣದಿಂದ ತಾಯಿಯೊಂದಿಗೆ ಗುಬ್ಬಿ ಕಂಪನಿ ಸೇರಿದ್ದಳು. ಅಲ್ಲಿ ಕೇವಲ ಬಾಲ ಪಾತ್ರ ಮಾಡುತ್ತಿದ್ದಳು. ಅಲ್ಲಿಂದ ಹೊರ ಬಂದ ನಂತರ ಪ್ರಕಾಶ ಅವರ ಕಂಪನಿ ಸೇರಿದಳು. ಸುಂದರ ರೂಪದ ಹಾಗೂ ಜಂಗಮ ಜಾತಿಯವಳೇ ಆದ ಮತ್ತು ಅಭಿನಯಿಸುವ ಸಾಮರ್ಥ್ಯ ಹೊಂದಿದ ಈ ಹುಡುಗಿ ತಮ್ಮ ಮಗನಿಗೆ ಸರಿಯಾದ ಜೋಡಿಯೆಂದು ಶಂಕ್ರಯ್ಯನವರು ಪ್ರಕಾಶರೊಂದಿಗೆ ಮದುವೆ ಮಾಡಿದರು. ಅಂದಿನಿಂದ ಗೌರಮ್ಮ ಸುನಂದಾ ಆದಳು. ಚಿಕ್ಕವಳಿದ್ದಾಗಲೇ ಬಣ್ಣದ ಬದುಕಿಗೆ ಹೆಜ್ಜೆ ಇಟ್ಟ ಕಾರಣ ವಿಧ್ಯಾಭ್ಯಾಸ ತಿಳಿಯದವರಾಗಿದ್ದರು. ಅಕ್ಷರ ಜ್ಞಾನವನ್ನು, ಹಾಡುಗಳನ್ನು, ಅಭಿನಯವನ್ನು ಕಲಿಸಿಕೊಟ್ಟು ಸುನಂದಾಳನ್ನು ಉತ್ತಮ ಕಲಾವಿದೆಯನ್ನಾಗಿ ರೂಪಿಸಿದವರೇ ಪತಿ ಪ್ರಕಾಶ. ಪ್ರತಿಯೊಂದೂ ಹಂತದಲ್ಲಿಯೂ ಪತಿಯ ಸಲಹೆ ಪಡೆಯುತ್ತಿದ್ದ ಸುನಂದಾ ಯಾವುದೇ ಪಾತ್ರವನ್ನು ಸುಲಭವಾಗಿ ಅಭಿನಯಿಸುವಷ್ಟು ಪರಿಪಕ್ವವಾದರು. ಹೆಚ್ಚಾಗಿ ಕಥಾ ನಾಯಕಿಯ ಪಾತ್ರಗಳಲ್ಲಿ ಮಿಂಚುತ್ತಿದ್ದ ಸುನಂದಾ ಕಡಪಟ್ಟಿ ಕಂಪನಿಯ ಜೀವಾಳವೇ ಆದರು.

ಚಿನ್ನದ ಗೊಂಬೆ ನಾಟಕದ ಶಾರದಾಳ ಪಾತ್ರದಿಂದ ಜನಮೆಚ್ಚಿನ ನಾಯಕಿಯಾಗಿ ಮಿಂಚಿದರು. ಇವರು ಅಭಿನಯಿಸಿದ ಭಲೆ ಮಗಳೇ ನಾಟಕದ ಪ್ರಿಯಾ, ಭೂಮಿ ತೂಕದ ಹೆಣ್ಣು ನಾಟಕದ ಗಂಗಾ, ಮುತ್ತೈದೆಗೆ ಕುತ್ತು ಐದು ನಾಟಕದ ಸುಮತಿ, ಮದನ ಮೋಹನ ನಾಟಕದ ಮಾಲಾ, ಮನ್ನೆಗೆ ತಕ್ಕ ಮಗ ನಾಟಕದ ಕಲ್ಯಾಣಿ, ಸತಿ ಸಂಸಾರದ ಜ್ಯೋತಿ ನಾಟಕದ ಜಯಶ್ರೀ, ಚನ್ನಪ್ಪ ಚನ್ನಗೌಡ ನಾಟಕದ ಪಾರ್ವತಿ ಇವೆಲ್ಲವೂ ದಾಖಲೆ ನಿರ್ಮಿಸಿದ ಪಾತ್ರಗಳು. ತಮ್ಮ ಕಲಾ ನಿಪುಣತೆಯಿಂದ ಪ್ರೇಕ್ಷಕರ ಹೃದಯವನ್ನು ಮುದಗೊಳಿಸಿ 'ಕನಸಿನ ರಾಣಿ' ಎಂಬ ವಿಶೇಷಣಕ್ಕೆ ಪಾತ್ರರಾದರು.

ರಂಗಭೂಮಿಯ ಜೊತೆಗೆ ಬೆಳ್ಳಿ ತೆರೆಗೆ ಧುಮುಕಿದ ಸುನಂದಾ ಮುದುಡಿದ ತಾವರೆ ಅರಳಿತು, ತಾಯಿ ಸಾಹೇಬ, ಅಮೃತ ಸಿಂಧು, ಪ್ರೇಮವೇ ಬಾಳಿನ ಬೆಳಕು, ಹಸಿದ ಹೆಬ್ಬುಲಿ ಮುಂತಾದ ಚಲನಚಿತ್ರಗಳಲ್ಲಿ ಅಭಿನಯಿಸಿದರು. ಈ ಬಿಡುವಿಲ್ಲದ ದುಡಿಮೆಯ ಮಧ್ಯೆ ಮಗಳು ವೀಣಾ ಮಡಿಲು ಸೇರಿದಳು. ಸುನಂದಾರಿಗೆ ಮಗಳೇ ಸರ್ವಸ್ವವಾದಳು. ಸ್ವಂತ ಕಂಪನಿ ಮುಚ್ಚಲ್ಪಟ್ಟ ನಂತರ ಅರಿಷಿಣಗೋಡಿ ಅವರ ಕಂಪನಿ, ಗುಡಿಗೇರಿ ಕಂಪನಿ ಹೀಗೇ ಸುಮಾರು ಕಂಪನಿಗಳಲ್ಲಿ ಪತಿಯೊಂದಿಗೆ

ರಂಗ ಸೇವೆ ಸಲ್ಲಿಸಿದರು. ಕೆಲವು ದಿನ ಗ್ರಾಮೀಣ ಭಾಗದ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ಪತಿಗೆ ತಕ್ಕ ಸತಿಯಾಗಿ ರಂಗಭೂಮಿಯ ಬೆಳಕಾಗಿ ಬೆಳಗಿದ ಸುನಂದ ಕಾಮಾಲೆ ರೋಗದಿಂದ ೧೯೯೯ರಲ್ಲಿ ತೀರಿಕೊಂಡರು. ಸುನಂದಾರ ಭಾವಪೂರ್ಣ ಅಭಿನಯ ಸುಮಧುರ ಕಂಠಸಿರಿ ಅಭಿಮಾನಿಗಳ ಹೃದಯಗಳಲ್ಲಿ ಮಾಸದೇ ಉಳಿದಿದೆ. ಕೆಲವರ ಪಾಲಿಗಂತೂ ಈಗಲೂ ಸುನಂದ "ರಂಗ ದೇವತೆ".

## ವೀಣಾ ಹಿರೇಮಠ (ಮಗಳು)

ಜನಪ್ರಿಯ ರಂಗ ಕಲಾಜೋಡಿ ಪ್ರಕಾಶ, ಸುನಂದಾರ ಪುತ್ರಿ ವೀಣಾ ಜನಿಸಿದ್ದು ೧೯೬೭ರಲ್ಲಿ. ನಾಟಕ ಕಂಪನಿಯಲ್ಲಿ ಹುಟ್ಟಿದ್ದರೂ ಅತ್ಯಂತ ವೈಭವದ ವ್ಯವಸ್ಥೆಯಲ್ಲಿ ಬೆಳೆದಳು. ತಂದೆ ತಾಯಿಗೆ ಬಂದೊದಗಿದ ಕಷ್ಟದಲ್ಲಿ ಪಾಲುಗಾರಳೂ ಆದಳು. ಯಾವ ಕಾರಣಕ್ಕೂ ಕಲಾವಿದೆಯಾಗ ಬಾರದೆನ್ನುವದು ತಾಯಿ ಸುನಂದಾಳ ಮಹದಾಸೆ ಆಗಿತ್ತು. ಮಗಳ ವಿದ್ಯಾಭ್ಯಾಸಕ್ಕೆ ಎಲ್ಲ ರೀತಿಯ ವ್ಯವಸ್ಥೆ ಮಾಡಲಾಗಿತ್ತು. ಹುಬ್ಬಳ್ಳಿಯ ಫಾತಿಮಾ ಸ್ಕೂಲಲ್ಲಿ ಹತ್ತನೇ ತರಗತಿಯವರೆಗೆ, ಹುಬ್ಬಳ್ಳಿ ವುಮೆನ್ಸ ಕಾಲೇಜನಲ್ಲಿ ಬಿ.ಎ. ಹಾಗೂ ಕಂಪ್ಯುಟರ ಡಿಪ್ಲೊಮಾ ಮುಗಿಸಿದ ವೀಣಾ ಹಿಂದಿ, ಇಂಗ್ಲೀಷ, ಕನ್ನಡದಲ್ಲಿ ಸುಲಲಿತವಾಗಿ ಮಾತನಾಡುತ್ತಾಳೆ.

ತಾಯಿ ತೀರಿದ ನಂತರ ಆರ್ಥಿಕ ಪರಿಸ್ಥಿತಿಯ ಮುಗ್ಗಟ್ಟಿನಿಂದ, ರಾಜು ತಾಳಿಕೋಟಿ ರಸಮಂಜರಿ ಹಾಗೂ ಜ್ಯೂನಿಯರ ರಾಜಕುಮಾರ ಅಶೋಕ ಬಸ್ತಿಯವರ ರಸಮಂಜರಿ ಕರ್ಯಕ್ರಮಗಳಲ್ಲಿ ಹಾಡಲು ಪ್ರಾರಂಭಿಸಿದಳು. ಸರಕಾರಿ ನೌಕರಿ ದೊರೆಯಲಾರದ ಕಾರಣ ವಿ.ಅರ್.ಎಲ್.ನಲ್ಲಿ ಕೆಲಸಕ್ಕೆ ಸೇರಿಕೊಂಡಳು. ಕೊನೆಗೆ ಪ್ರಕಾಶ ಮಗಳ ಪೇಚಾಟ ನೋಡದೆ ಮದುವೆ ಮಾಡುವ ನಿರ್ಧಾರಕ್ಕೆ ಬಂದು ತಮ್ಮ ಸಂಬಂಧಿಕರಲ್ಲೇ ಪಟದಯ್ಯ ಹಿರೇಮಠ ಅವರಿಗೆ ವೀಣಾಳನ್ನು ಧಾರೆ ಎರೆದು ಕೊಟ್ಟರು. ಇನಾಂಕೊಪ್ಪದಲ್ಲಿ ಅಚ್ಚುಕಟ್ಟಾಗಿ ಸಂಸಾರ ಹೂಡಿದ ವೀಣಾ ಸುಶಾಂತ ಹಾಗೂ ಅಭಿಷೇಕ ಇಬ್ಬರು ಮಕ್ಕಳಿಗೆ ಜನ್ಮ ಕೊಟ್ಟಳು. ಪತಿಯ ಮನೆ ರೈತ ಕುಟುಂಬುವಾದುದರಿಂದ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸದ ಮುಂಜಾಗ್ರತೆಗಾಗಿ ವೀಣಾ ಬಣ್ಣ ಹಚ್ಚುವ ನಿರ್ಧಾರಕ್ಕೆ ಬಂದಳು. ಪತಿಯ ಮನ ಒಲಿಸಿ ಒಪ್ಪಿಗೆ ಪಡೆದು ಪಾತ್ರ ಮಾಡಲು ಪ್ರಾರಂಭಿಸಿದಳು.

ಕಲೆ ರಕ್ತಗತವಾಗಿ ಬಂದ ವೀಣಾಗೆ ಅಭಿನಯ ಕಷ್ಟವಾಗಲಿಲ್ಲ ಹಾಗೆ ಪಾತ್ರಗಳಿಗೆ ಒಪ್ಪುವ ಆಕರ್ಷಕ ಸೌಂದರ್ಯ, ಸಹಜವಾಗಿ ಒಲಿದ ನೃತ್ಯ, ಸಂಗೀತ, ವೀಣಾ ರಂಗಭೂಮಿಯಲ್ಲಿ ಉತ್ತಮ ನಟಿಯಾಗಿ ರೂಪಿತಗೊಳ್ಳಲು ಸಹಕಾರಿಯಾಗಿವೆ. ವೀಣಾ ಚಿಕ್ಕವಳಿದ್ದಾಗ ಸ್ವಂತ ಕಂಪನಿಯಲ್ಲಿ ಆಡುತ್ತಿದ್ದ ಸತಿ ಸಂಸಾರದ ಜ್ಯೋತಿ ನಾಟಕದಲ್ಲಿ ರಾಣಿ ಪಾತ್ರ (ಬಾಲ ಪಾತ್ರ) ಮಾಡಿದ್ದು

ವೀಣಾಳ ಮೊದಲ ರಂಗ ಪ್ರವೇಶ ಎಂದು ಹೇಳ ಬಹುದು. "ತಿರಸ್ಕರಿಸಿದ ಬಣ್ಣದ ಬದುಕನ್ನು ಒಪ್ಪಿಕೊಂಡು ಬಣ್ಣ ಹಚ್ಚಿದ ಮೊದಲ ನಾಟಕ ನಾಲತ್ವಾಡದ ನಂದಾ ದೀಪ" ಪಾತ್ರ ರುದ್ರಮ್ಮ. ಅಂದಿನಿಂದ ಗ್ರಾಮೀಣ ಭಾಗದ ನಾಟಕಗಳಿಗೆ ಹೋಗಲು ಪ್ರಾರಂಭಿಸಿದ್ದು. ನಂತರ ಶ್ರೀ ಸ್ವಾಮಿ ಸಮರ್ಥ ಕಲಾ ಸಂಘ ಅಕ್ಕಲಕೋಟ ಕಂಪನಿಯಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದಳು. ಗುಡಗೇರಿ ಕಂಪನಿಯಲ್ಲೂ ತಾತ್ಕಾಲಿಕವಾಗಿ ಅಭಿನಯಿಸಿದ್ದುಂಟು. ಇತ್ತೀಚೆಗೆ ಶ್ರೀ ತೋಂಟದಾರ್ಯ ನಾಟ್ಯ ಸಂಘ ಮಂಡಲಗಿರಿ ಕಂಪನಿಯಲ್ಲಿ ಅಭಿನಯಿಸುತ್ತಿದ್ದಾಳೆ. ಭೂಮಿ ತೂಕದ ಹೆಣ್ಣು, ಸತಿ ಸಂಸಾರದ ಜ್ಯೋತಿ, ತವರು ಬಿಟ್ಟ ತಂಗಿ, ಹೊತ್ತು ನೋಡಿ ಹೊಡತಾ ಹಾಕು, ಕಳ್ಳ ಗುರು ಸುಳ್ಳ ಶಿಷ್ಯ, ಇದು ಹಿಂಗ್ಯಾಕ ಆತು ಯಾಕ ಹಿಂಗಾತು, ಮಗ ಹೋದರೂ ಮಾಂಗಲ್ಯ ಬೇಕು ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ವೀಣಾರ ಅತ್ಯಂತ ಜನಪ್ರಿಯವಾದ ನಾಟಕ "ಕಿಡಿಗೇಡಿ ಕೃಷ್ಣ" ಪಾತ್ರ "ಭಾಗಿರಥಿ".

ಮುಂದೇನು ಎಂಬ ಪ್ರಶ್ನೆಗೆ ವೀಣಾ ಕೊಟ್ಟ ಉತ್ತರ, "ಮುಂದಾದರೂ ರಂಗಭೂಮಿಯ ಸೇವೆಯೇ ನನ್ನ ಜೀವನ. ನನ್ನ ತಂದೆ-ತಾಯಿಯಷ್ಟು ರಂಗಭೂಮಿಯಲ್ಲಿ ಹೆಸರು ಸಂಪಾಧಿಸುವುದು ಕಷ್ಟದ ಕೆಲಸ. ನನ್ನ ಕೈಲಾದಷ್ಟು ಪ್ರಯತ್ನಿಸುವೆ. ನನ್ನ ತಂದೆಗೆ ಮಗಳೆಂದರು ನಾನೆ, ಮಗನೆಂದರು ನಾನೆ. ಅಂದಾಗ ಅವರನ್ನು ನೋಡಿಕೊಳ್ಳುವುದು ನನ್ನ ಕರ್ತವ್ಯ. ಅವರಿಗಾಗಿ ಮತ್ತು ನನ್ನ ಮಕ್ಕಳಿಗಾಗಿ ನಾನು ದುಡಿಯಲೇ ಬೇಕಾಗಿದೆ. ನನ್ನ ಪತಿ ಪಟದಯ್ಯ ಹಿರೇಮಠವರ ಸಹಕಾರವೂ ಇದೆ. ನನ್ನ ಸಂಸಾರಕ್ಕೆ ಸಹಾಯವಾದ ರಂಗಭೂಮಿಗೆ ನಾನು ಸದಾ ಋಣಿ".

# ಪ್ರಕಾಶರ ಮನದಾಳದ ಮಾತುಗಳು

ನಾನು ಕಲಾವಿದನಾಗುತ್ತೇನೆ ಎಂಬ ಕಲ್ಪನೆ ನನ್ನ ಕನಸು ಮನಸಿನಲ್ಲೀಯೂ ಇರಲಿಲ್ಲ. ರಂಗದ ಮೇಲೆ ನಿಲ್ಲುವದೆಂದರೆ ತುಂಬಾ ಧೈರ್ಯವಂತರಿಗೆ ಮಾತ್ರ ಸಾಧ್ಯ. ನಾನು ಅಷ್ಟು ಧೈರ್ಯವಂತನಲ್ಲ ಎಂಬ ಭಯ ನನ್ನ ಮನದಲ್ಲಿ ಬೇರೂರಿತ್ತು. ಆ ಬೇರನ್ನು ಕಿತ್ತು ಹಾಕಿದವರೇ ನನ್ನ ತಂದೆ. ನನ್ನ ತಂದೆ ಶಂಕ್ರಯ್ಯ ಮಹಾನ್ ನಟರಾಗಿದ್ದರೂ, ಕವಿಗಳಾಗಿದ್ದರೂ ಅವರ ಕಲೆಯ ದಾಹ ಹಿಂಗಿರಲಿಲ್ಲ. ಇನ್ನೂ ದೊಡ್ಡ ಕಲಾವಿದನಾಗಬೇಕು, ಮೆರೆಯಬೇಕು ಅಂತ ಏನೆಲ್ಲ ಕನಸುಗಳನ್ನು ಹೊತ್ತಿದ್ದರು. ಅವರ ಕನಸಿನ ಕೂಸನ್ನು ನನ್ನಲ್ಲಿ ಬೆಳೆಸಿದರು, ಕನ್ನಡದ ಕುಲಕೋಟಿ ಜನತೆ ಮೆಚ್ಚುವಂತಹ ಕಲಾವಿದನನ್ನಾಗಿ ರೂಪಿಸಿ ರಂಗದ ಮೇಲೆ ನಿಲ್ಲಿಸಿದರು. ಜನತೆ ಕೂಡ ನನ್ನನ್ನು ಅಷ್ಟೇ ಪ್ರೀತಿ, ಆದರ, ಗೌರವಗಳಿಂದ ಒಪ್ಪಿದರು, ಬೆಳಸಿದರು. ಅದಾವ ಜನ್ಮದ ಪುಣ್ಯವೋ ಕಲಾಬದುಕಿನ ಕಿರೀಟ ಧರಿಸುತ್ತಿದ್ದಂತೆ, ಸುನಂದಾ ನನ್ನ ಬಾಳ ಸಂಗಾತಿ ಆಗಿ ಬಂದಳು. ಅವಳು ಕೇವಲ ನನ್ನ ಸತಿಯಾಗಿ ಬರಲಿಲ್ಲ, ಪರಿಪೂರ್ಣ ಸ್ತ್ರೀಯಾಗಿ ಬಂದಳು. ನಮ್ಮಿಬ್ಬರ ಅಚಾರ, ವಿಚಾರ, ಗುರಿಗಳು ಒಂದೇ ಆಗಿದ್ದವು, ಅಂತೆಯೇ ನಮ್ಮಿಬ್ಬರ ಮಧ್ಯ ತುಂಬಾ ಅನ್ಯೋನ್ಯತೆ ಇತ್ತು. ನಿದ್ರಿಸುವ ಸಮಯವನ್ನು ಬಿಟ್ಟರೆ ಪ್ರತಿಯೊಂದು ಕ್ಷಣವನ್ನೂ ರಂಗ ಚಟುವಟಿಕೆಗಳ ಸಿದ್ಧತೆಯಲ್ಲಿಯೇ ಕಳೆಯುತ್ತಿದ್ದೆವು. ಮತ್ತು ನಾನು ಯಾವದೇ ಹೊಸ ನಾಟಕ ಬರೆದರೂ, ಸುನಂದಾಳಿಗೆ ಓದಿ ತೋರಿಸಿಯೇ ಮುಂದಿನ ತೀರ್ಮಾನ ತೆಗೆದುಕೊಳ್ಳುತ್ತಿದ್ದೆ, ಏನಾದರೂ ಬದಲಾವಣೆ ಮಾಡಬೇಕೆಂದು ಸುನಂದಾ ಸೂಚಿಸಿದರೆ ನಾನು ಸ್ವೀಕರಿಸುತ್ತಿದ್ದೆ.

'ಭೂಮಿ ತೂಕದ ಹೆಣ್ಣು' ನಾಟಕದ ಕೊನೆಯ ಸನ್ನಿವೇಶದಲ್ಲಿ ಕಥಾ ನಾಯಕಿ ಮನೆಯಲ್ಲಿ ಅಸುನೀಗುವಂತೆ ಬರೆದ ಸನ್ನಿವೇಶವನ್ನು ಸುನಂದಾ ಬದಲಿಸಿ ಕಥಾ ನಾಯಕಿ ಗಂಡನ ಸಮಾಧಿಯ ಮೇಲೆ ಸತ್ತರೆ ಪ್ರೇಕ್ಷಕರಿಗೆ ಹೆಚ್ಚು ಪರಿಣಾಮ ಬೀರುತ್ತದೆ ಎಂದು ಹೇಳಿದ್ದಳು, ಅವಳ ಹೇಳಿದಂತೆ ನಾನು ಆ ಸನ್ನಿವೇಶವನ್ನು ಬದಲಿಸಿದ್ದೆ. ಅದೇ ಸನ್ನಿವೇಶ ನೋಡುಗರಿಗೆ ಹೆಚ್ಚು ಮೆಚ್ಚುಗೆಯಾಗುವ ಸನ್ನಿವೇಶವಾಯಿತು. ಸುನಂದಾ ನನ್ನ ಪ್ರತಿ ನಾಟಕಗಳ ರಚನೆಯಲ್ಲಿಯೂ ಸಲಹೆ ನೀಡುತ್ತಿದ್ದಳು. ರಂಗ ಕಲೆಯಲ್ಲಿ ಎಲ್ಲರನ್ನು ಮೀರಿಸುವ ಯಶಸ್ಸು ನಮ್ಮಿಬ್ಬರಿಗೆ ದೊರೆಯ ಬೇಕು ಎನ್ನುವ ಪ್ರಯತ್ನ ನಮ್ಮದಾಗಿತ್ತು. ಅದರಂತೆ ಯಾರು ಕಂಡರಿಯದಂತಹ ಸಮಾಜದ ಸದಭಿರುಚಿಗೆ ಅನುಗುಣವಾಗಿ ಕಥಾವಸ್ತುವನ್ನು ನಾಟಕಾನುಕರಣೆ ಮಾಡಿಕೊಂಡು ರಸವತ್ತಾದ ಸಂಭಾಷಣೆಗಳು, ಸನ್ನಿವೇಶಗಳನ್ನು ಉತ್ತೇಜಿಸುವ ಹಾಡುಗಳನ್ನು ಹೆಣೆದು ನಾಟಕವನ್ನು ರಸಪಾಕವನ್ನಾಗಿಸಿ ಪ್ರೇಕ್ಷಕರಿಗೆ

ಉಣಬಡಿಸಿದೆವು. ಅದನ್ನುಂಡು, ಹಾಡಿ, ಹರಿಸಿ ಕೊಂಡಾಡಿದ ಜನತೆಯ ಸಹೃದಯದ ಸಹಕಾರದಿಂದ ಹೆಸರು, ಹಣ, ಸುಖ, ತೃಪ್ತಿ ಏನೆಲ್ಲಾ ಕಂಡೆವು. ಆ ದಿನಗಳೆಲ್ಲ ವರ್ಣಾತೀತವಾದ ಸಂಭ್ರಮದ ದಿನಗಳು.

ಆ ಸಂಭ್ರಮದ ಸಡಗರದಲ್ಲಿದ್ದ ನಮ್ಮಿಬ್ಬರ ಮಧ್ಯೆ ಹೊಸ ಜೀವವೊಂದು ಪ್ರವೇಶ ಪಡೆಯಿತು. "ಆ ಜೀವವೇ ನನ್ನ ಮಗಳು ವೀಣಾ". ಇಂದು ರಂಗ ಕಲಾವಿದೆಯಾಗಿ ನನ್ನ ಶೇಷ ಜೀವನಕ್ಕೆ ಆಸರೆಯಾಗಿ ನಿಂತ ಸುನಂದಾಳ ಪ್ರೇಮದ ಕಾಣಿಕೆ. ಮಗಳು ಹುಟ್ಟಿದ ನಂತರವಂತೂ ನಮ್ಮಿಬ್ಬರ ದೇಹ-ಮನಸುಗಳು ಬಿಡಿಸಲಾರದಷ್ಟು ಬೆಸುಗೆಗೊಂಡಿದ್ದವು. ಅದು ಹೇಗೆ ದೇವರು ಆ ಬೆಸುಗೆಯನ್ನು ಸಡಿಲು ಗೊಳಿಸಿದನೋ, ಯಾವ ಅಪರಾಧಕ್ಕಾಗಿ ನನ್ನನ್ನು ಒಂಟಿ ಮಾಡಿದನೋ ತಿಳಿಯಲಿಲ್ಲ. ಹೊಸ ವರ್ಷದ ಯುಗಾದಿ ಹಬ್ಬದ ದಿನವೇ ನನ್ನ ಕೈ ಹಿಡಿದು ಬಾಳ ಪ್ರವೇಶ ಪಡೆದ ಸುನಂದ, ಅದೇ ಯುಗಾದಿ ಹಬ್ಬದ ದಿನದಂದೆ ನನ್ನ ಕೈ ಬಿಟ್ಟು ಬಾರದ ಲೋಕಕ್ಕೆ ಹೊರಟು ಹೋದಳು. ಅವಳ ಪ್ರತಿಯೊಂದು ನೆನಪುಗಳು ನನಗೀಗ ಕಣ್ಣೀರ ಕಥೆಗಳಾಗಿವೆ. ದುಃಖ ಹಂಚಿಕೊಳ್ಳುತ್ತಿದ್ದ ನನ್ನ ತಂದೆಯ ಮಡಿಲೂ ನನಗಿಲ್ಲದಂತಾಯಿತು. ವಿಧಿ ಬೀಸಿದ ಬಲೆಗೆ ಸಿಕ್ಕ ಮೀನು ನಾನಾದೆ.

ಭಾವನೆಗಳ ಗಾಳಿ ತುಂಬಿದ ಬಲೂನಿನಂತಿದ್ದ ಹೃದಯಕ್ಕೆ ಸ್ಥಳವಕಾಶವಿಲ್ಲದಷ್ಟು ಮುಳ್ಳುಗಳು ಚುಚ್ಚಿದಾಗ ನನ್ನ ಹೃದಯ ಹೇಗೆ ಉಳಿಯಲು ಸಾಧ್ಯ. ಹೀಗಾಗಿ ಭೂತಗನ್ನಡಿ ಹಿಡಿದು ಮತ್ತೊಬ್ಬರ ಬದುಕನ್ನು ವೀಕ್ಷಿಸುವ ಕಾಯಕದವರಿಗೆ ಆ ಪ್ರಕಾಶ ನಾನಲ್ಲವೆಂಬಂತೆ ಕಾಣುತ್ತಿದ್ದೇನೆ. ಈ ಕಟು ಸತ್ಯವನ್ನು ನಾನು ಮನಸಾರೆ ಒಪ್ಪಿಕೊಳ್ಳುತ್ತೇನೆ. ರಂಗಭೂಮಿಗೆ ಎಲ್ಲ ಬಗೆಯ ಸೇವೆಯನ್ನು ಸಲ್ಲಿಸಿದ್ದೇನೆ, ಅದರಿಂದ ದೊರೆತಿದ್ದು ಏನು ಅಂತ ಯೋಚಿಸಿದರೆ "ಶೂನ್ಯ". ಎಲ್ಲೋ ಒಂದು ಕಡೆ ನನ್ನ ಮೇಲೆ ನಾನು ಹಿಡಿತ ಸಾಧಿಸಿಕೊಳ್ಳುವಲ್ಲಿ ಎಡವಿದ್ದೇನೆ. ಅಂತೆಯ ಗೆಲುವಿಗಿಂತ ಸೋಲಿನ ಅನುಭವ ಜಾಸ್ತಿ ಕಂಡಿರುವೆ. ದುಡ್ಡಿನ ವಿಷಯದಲ್ಲಾಗಲಿ, ವ್ಯವಹಾರದ ವಿಷಯದಲ್ಲಾಗಲಿ ನಾನು ಜಾಣನಾಗಿರಲಿಲ್ಲ ೨೩. ವರ್ಷ ಕಂಪನಿ ನಡೆಸಿದರೂ ಒಂದು ದಿನವೂ ಕಂಪನಿಯ ಲಾಭವೆಷ್ಟು ಅಂತ ಕೇಳಿದ್ದು ನನಗೆ ಗೊತ್ತಿಲ್ಲ. ಪಾತ್ರ ಮಾಡುವುದಷ್ಟೇ ನನ್ನ ಕೆಲಸವಾಗಿತ್ತು. ಯುವಕರಂತೂ ನನ್ನ ಹಾಡುಗಳಿಗೆ ಅದೆಷ್ಟು ಅಭಿಮಾನಿಗಳಾಗಿದ್ದರೆಂದರೆ ಸದಾ ನನ್ನ ಬೆನ್ನ ಹಿಂದೆ ಬಿದ್ದಿರುತ್ತಿದ್ದರು. ನಾನು ಬೇಡವೆಂದರೂ ಎಷ್ಟೋ ತಾಯಂದಿರು ಕೂಲಿ ಮಾಡಿ ಕೊಡಿಟ್ಟ ಹಣದಲ್ಲೇ ನನಗೆ ಆಹೇರಿ ಮಾಡುತ್ತಿದ್ದರು.

ಅವರು ನನ್ನನ್ನು ಹೊಗಳುವದು, ಕೊಂಡಾಡುವದು, ನಮಸ್ಕರಿಸುವದು, ಅಪ್ಪಿಕೊಳ್ಳುವದು, ವಯಸ್ಸಾದ ಹೆಣ್ಣುಮಕ್ಕಳು ಬಂದು "ಎಪ್ಪ ಏನ ಚಂದ ಪಾರ್ಟ ಮಾಡತಿ, ನಿನ್ನ ತಾಯಿ ಪುಣ್ಯೆ ಮಾಡ್ಯಾಳ ಎಪ್ಪ" ಅನ್ನೂದು, "ಎಪ್ಪ ನನ್ನ ಮಗನ ನಾಟಕ ನೋಡಿ ಅತ್ತತ್ತು ಸಾಕಾಗಿಹೋತು ಎಂತಾ ಕಷ್ಟದ ಕಥಿ ಬರದಿ ಎಪ್ಪ,

ದೇವರು ನಿನ್ನ ಚಂದ ಇಡಲಿ", "ಎಪ್ಪ ನಿನ್ನ ಹಾಡ ಕೇಳಾಕ ನಾನು ದಿನಾ ನಾಟಕ ನೋಡಾಕ ಬರ್ತೀನಿ. ಮನ್ಯಾಗ ಅಂತೂ ನನ್ನ ಹೊತ್ತು ಹುರಿತಾರ, ಆದರೂ ನೀವು ಈ ಊರು ಬಿಡೂತನ ನಾ ದಿನಾ ಬರಕೀನಾ" ಅಂತ ಇನ್ನೂ ಏನೇನೊ ಹೇಳುತ್ತಿದ್ದರು. ಇಂತಹ ಮಾತುಗಳನ್ನು ಕೇಳುವ ಹಂಬಲಕ್ಕಾಗಿ ಬಣ್ಣ ಕೂಡ ಅಳಿಸದೆ ಹೊರಗೆ ಓಡಿ ಬರುತ್ತಿದ್ದನೇ ಹೊರತು, ತುಂಬಿ ತುಳುಕುವ ಗಲ್ಲೆಪಟ್ಟಿಗೆ ಕಡೆ ನೋಡಲೇ ಇಲ್ಲ. ನಾನಾಗ ಸ್ವಲ್ಪ ಕಣ್ಣು ಹಾಯಿಸಿದ್ದರೂ ನನಗಿಂದು ದುಡಿಯಲೇ ಬೇಕಾದ ಪ್ರಸಂಗವಿರುತ್ತಿರಲಿಲ್ಲ. ಸಮಸ್ಯೆಗಳಿಗೆ ಎದೆಗೊಟ್ಟು ನಿಲ್ಲುವ ಕಥಾನಾಯಕನ ಕಥೆಗಳನ್ನು ಬರೆದೆ, ಅಭಿನಯಿಸಿದೆ. ಅವೇ ಸಮಸ್ಯೆಗಳು ನನ್ನ ಸ್ವಂತಕ್ಕೆ ಬಂದಾಗ ನಾನು ದುರ್ಬಲನಾದೆ. ಕ್ಷುಲ್ಲಕ ಟೀಕೆಗಳನ್ನು ನಾನು ಸವಾಲಾಗಿ ಸ್ವೀಕರಿಸಿದ್ದರೆ ನನ್ನ ಗುರಿ ನಾನು ಮುಟ್ಟಲು ಸಾಧ್ಯವಾಗುತ್ತಿತ್ತು.

ಅವುಗಳಿಗೆ ಬೆಲೆಕೊಟ್ಟು ನನ್ನ ಹಿನ್ನೆಡೆಗೆ ನಾನೇ ಕಾರಣನಾದೆ. ನಾನೀಗಲೂ ಪ್ರಯತ್ನಿಸಿದರೆ ಗೆಲುವು ನನ್ನದೇ ಎಂಬ ಭರವಸೆ ನನಗೀಗ ಉಳಿದಿಲ್ಲ, ಕಾರಣ ನಾನು ಮಾನಸಿಕವಾಗಿ ದೈಹಿಕವಾಗಿ ತುಂಬಾ ಕ್ಷೀಣಿಸಿದ್ದೇನೆ ಆದರೂ ನನ್ನೊಳಗಡಗಿರುವ ರಂಗ ಕಲೆಯ ಅವಶೇಷಗಳನ್ನು ಅಗಿದು ತೆಗೆಯುವ ಪ್ರಯತ್ನ ನಡೆಸಿರುವ ವೃತ್ತಿ ರಂಗಭೂಮಿಯ ಮಾಲಿಕರು ಹಾಗೂ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಶೇಖ ಮಾಸ್ತರವರ ಸಹಕಾರದಿಂದ ಹೊಸ ನಾಟಕವನ್ನು ರಚಿಸಿ ಅವರ ಕಂಪನಿಗೆ ಕೂಡ್ರಿಸಿರುವೆ. ಇನ್ನು ನನ್ನ ಮಗಳು ವೀಣಾಳ ಬಗ್ಗೆ ಹೇಳುವದಾದರೆ "ರಂಗಭೂಮಿಯ ನಂಟು ಬೇಡವೆಂದು ರಾಜಕುಮಾರಿಯಂತೆ ಬೆಳೆಸುತ್ತಿದ್ದ ಮಗಳನ್ನು ಯಾರಾದರು ನೋಡಿದರೆ ಹೇಗೆ ಎಂದು ಅಂಗೈಯಲ್ಲಿ ಮುಚ್ಚಿಟ್ಟುಕೊಂಡ ಮುತ್ತು ಇಂದು ಸಾವಿರಾರು ಜನರೆದರಿಗೆ ನಟಿಸುವ ಹೊತ್ತು". ತಾನೊಂದು ಬಗೆದರೆ ಮಾನವ ಬೇರೊಂದು ಬಗೆವುದು ದೈವ ಎಂಬಂತೆ ಮಗಳ ಬಗ್ಗೆ ಕಂಡ ಕನಸು ನುಚ್ಚು ನೂರಾಯಿತಲ್ಲ ಎಂಬ ನೋವು ನನ್ನ ಮನದ ಎಲ್ಲೋ ಒಂದು ಮೂಲೆಯಲ್ಲಿ ಬಿಕ್ಕುತ್ತಿದೆ. ಬಂದಿದ್ದೆಲ್ಲ ಬರಲಿ, ಕಲಾ ದೇವತೆಯ ದಯವಿರಲಿ ಎನ್ನುವೆ. ನನ್ನ ತಂದೆ, ನಾನು, ನನ್ನ ಸಹೋದರರು, ಚಿಕ್ಕಪ್ಪ, ಪತ್ನಿ, ಹೀಗೆ ಕುಟುಂಬವೇ ರಂಗಭೂಮಿಯ ಸೇವೆಗೈದಿದ್ದೇವೆ, ಗೆದ್ದಾಗ ಸಂಭ್ರಮಿಸಿದ್ದೇವೆ, ಸೋತಾಗ ಸಾಕಪ್ಪ ಅನಿಸುದ್ದೂ ನಿಜ. ಅಂತೆಯೆ ನನ್ನ ಮಗಳಿಗೆ ಬಣ್ಣದ ಬದುಕು ಬೇಡವೆಂದು ನಾನು ಸುನಂದಾ ತೀರ್ಮಾನಿಸಿದ್ದೆವು. ತೀರ್ಮಾನ ನಮ್ಮದಿದ್ದರೂ ಬದುಕಿನ ಬರಹ ಬರೆದವನು ಬ್ರಹ್ಮನಲ್ಲವೆ? ಅಂತೆಯೆ ಮಗಳನ್ನು ಓದಿಸಿದರೂ, ಮದುವೆ ಮಾಡಿಕೊಟ್ಟಿದ್ದರೂ ಬಣ್ಣ ಹಚ್ಚಿದ್ದಾಳೆ. ಸಿಹಿ ಕಹಿ ಪ್ರಸಂಗಗಳನ್ನು ಅಪ್ಪಿಕೊಂಡು ಬದುಕುವದೇ ಜೀವನವಲ್ಲವೇ? ಇನ್ನು ಕರ್ನಾಟಕ ನಾಟಕ ಅಕಾಡೆಮಿಯಿಂದ ಹೊರಬರುತ್ತಿರುವ "ರಂಗಸಂಪನ್ನರು ಮಾಲಿಕೆಯಲ್ಲಿ" ನನ್ನದೊಂದು ಹೆಸರು ಸೇರ್ಪಡೆ ಆಗಿದೆಯೆಂದರೆ "ಇದು ನನ್ನ ಮರುಹುಟ್ಟು" ಎಂದು ಭಾವಿಸುವೆ.

# ಉಪಸಂಹಾರ

ರಂಗಭೂಮಿಯ ಕಲಾವಿದರಾಗುವದು ಎಷ್ಟೋ ಜನ್ಮಗಳ ಸುಕೃತ ಆದರೆ ರಂಗ ಕಲಾವಿದರಾಗಿ ವ್ಯಸನಗಳಿಗೆ ಬಲಿಯಾಗುವದು ದುಷ್ಕೃತ. ದುಷ್ಟತನವನ್ನು ತಾನು ದುಷ್ಟ ಪಾತ್ರಗಳನ್ನು ಮಾಡಿದಾಗ ಪಾತ್ರಗಳ ಮೂಲಕ ವ್ಯಕ್ತ ಪಡಿಸ ಬೇಕೆ ವಿನಹ ಪಾತ್ರ ಕಳಚಿದ ಮೇಲಲ್ಲ. ಮನೋನಿಗ್ರಹವನ್ನು ಸಾಧಿಸಿದಾಗ ರಂಗ ಕಲಾವಿದ ಸಾರ್ಥಕ ಜನ್ಮನಾಗುತ್ತನೆ. ವ್ಯಸನಗಳಿಗೆ ದಾಸನಾದ ಕಲಾವಿದ ಅಧಃಪತನ ಹೊಂದುತ್ತಾನೆ. ಸಮಾಜದಿಂದ ತಿರಸ್ಕೃತನಾಗುತ್ತಾನೆ. ಆಗ ಅವನು ಮಾಮೂಲು ಮನುಷ್ಯನಾಗಿಯೂ ಜೀವಿಸಲಾರ, ಕಲಾವಿದನಾಗಿಯೂ ಜೀವಿಸಲಾರ. ಜಗಜಗಿಸುವ ಬೆಳಕಿನಲ್ಲಿ ಮಿನುಗುವ ತಾರೆಗಳಂತೆ ಮಿನುಗುವ ರಂಗತಾರೆಗಳ ನಿಜಬದುಕಿನಲ್ಲಿ ಕತ್ತಲು ತುಂಬಿರುವದೇ ಹೆಚ್ಚು. ಆ ಕತ್ತಲನ್ನು ನಿವಾರಿಸಿಕೊಂಡು ತಮ್ಮ ಬದುಕಿನಲ್ಲಿಯೂ ಬೆಳಕನ್ನು ಚೆಲ್ಲಿಕೊಂಡವರೇ ನಿಜವಾದ ರಂಗ ಕಲಾವಿದರು.

ಪ್ರಕಾಶವರ ರಂಗಬದುಕನ್ನು ವಿವೇಚಿಸಿ ನೋಡಿದಾಗ ಅವರ ಪ್ರತಿಭೆಯ ಜೊತೆಗೆ ಅವರ ನ್ಯೂನ್ಯತೆಗಳೂ ತೋರುತ್ತವೆ. ಆದರೆ ಪ್ರೇಕ್ಷಕ ಕಲಾವಿದನನ್ನು ನೋಡ ಬಯಸುವದು ಅವನ ಪ್ರತಿಭೆಯನ್ನೇ ಹೊರತು ಅವನ ಬದುಕಿನ ಕುಂದು ಕೊರತೆಗಳನ್ನಾಗಲಿ, ನ್ಯೂನತೆಗಳನ್ನಾಗಲಿ ಅಲ್ಲ. ಕಾರಣ, ಪ್ರಕಾಶರ ವೈಯಕ್ತಿಕ ಬದುಕಿನಲ್ಲಿ ಇಣುಕಿ ಹಾಕುವದಕ್ಕಿಂತ ರಂಗಭೂಮಿಗಾಗಿ ಪ್ರಕಾಶ ಏನು ಮಾಡಿದರು, ಏನು ಕೊಟ್ಟರು? ಅನ್ನುವುದು ಮುಖ್ಯ. ಹಾಗೆ ತೂಗಿ ನೋಡಿದರೆ ಪ್ರಕಾಶರು ಕೊಟ್ಟ ಕೊಡುಗೆಯ ಭಾರ ತಕ್ಕಡಿಯ ಪರಡಿ ನೆಲ ಮುಟ್ಟುವಷ್ಟಿದೆ. ಪ್ರಕಾಶರು ರಂಗಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯ ಪ್ರತಿ ಹಂತಗಳು ಅಧ್ಯಯನಶೀಲವಾದವು. ಇವರ ಕಲಾಪ್ರತಿಭೆ ಬಹುಮುಖವಾಗಿ ಹೊಳೆಯಾಗಿ ಹರಿದಿದೆ. ಪ್ರಭಾವಿ ವ್ಯಕ್ತಿತ್ವವನ್ನು ಪಡೆದಿರುವ ಪ್ರಕಾಶರು ಕನ್ನಡದ ಖ್ಯಾತ ಚಲನಚಿತ್ರ ನಟ ರವಿಚಂದ್ರನ್‌ರ ಮಟ್ಟದ ಚಲನಚಿತ್ರ ಕಲಾವಿದನಾಗಬಹುದಿತ್ತು. ಆದರೇ ದುರದೃಷ್ಟ ಮತ್ತು ವ್ಯಸನಗಳು ಅವರ ಏಳಿಗೆಯನ್ನು ತಡೆದುವು. ಇದು ಪ್ರಕಾಶರ ದುರದೃಷ್ಟ ಮಾತ್ರವಲ್ಲ, ಕನ್ನಡ ರಂಗಲೋಕದ ದುರದೃಷ್ಟವೂ ಹೌದು.

ಆದರೂ ಹಾಡುಗಳಿಂದಾಗಲಿ, ನಾಟಕಗಳಿಂದಾಗಲಿ ಈಗಲೂ ಉತ್ತರ ಕರ್ನಾಟಕದ ಹೆಸಾರಂತ ವೃತ್ತಿ ಕಂಪನಿಗಳೊಂದಿಗೆ ಪ್ರಕಾಶವರ ರಂಗ ಸೇವೆ ಪರೋಕ್ಷವಾಗಿ, ಅಪರೋಕ್ಷವಾಗಿ ನಿರಂತರ ನಡೆದಿದೆ. ಬಹುತೇಕ ಕಂಪನಿಗಳ ಜೊತೆ ಕಲಾ ಬಾಂಧವ್ಯ ಬೆಸೆದಿರುವ ಕಲಾವಿದನೆಂದರೆ, ಪ್ರಕಾಶ ಒಬ್ಬರೇ ಎಂದು

ಹೇಳುವದು ಅತಿಶಯೋಕ್ತಿ ಎನಿಸಿದರೂ ಕಟು ಸತ್ಯವಾಗಿದೆ. "ಕಡಪಟ್ಟಿ" ಗ್ರಾಮ ಸಾಕಷ್ಟು ಸಾಧನೆಗಳಿಂದ ಪರಿಚಿತವಾಗಿದ್ದರೂ ಪ್ರಕಾಶರವರಿಂದ "ಕಡಪಟ್ಟಿ" ಗ್ರಾಮ ಕರ್ನಾಟಕದ ನಾಟಕಾಸಕ್ತ ಜನತೆಗೆ ಚಿರಪರಿಚಿತ ಊರಾಯಿತು. ತಮ್ಮ ಕಲಾ ಪ್ರೌಢಿಮೆಯಿಂದ ಹುಟ್ಟಿದ ಊರನ್ನು, ರಂಗಭೂಮಿಯನ್ನು ಪ್ರಜ್ವಲಿಸುವಂತೆ ಮಾಡಿದ ಪ್ರಕಾಶ ಕಡಪಟ್ಟಿ ರಂಗಲೋಕದ ರಾಜ.

ಸದ್ಯ ಪ್ರಕಾಶರಿಗೆ ಮಗಳು ವೀಣಾಳೇ ಆಧಾರ. ಕುಂದಗೋಳ ತಾಲೂಕಿನ ಇನಾಂಕೊಪ್ಪ ಗ್ರಾಮದಲ್ಲಿ ಮಗಳು ಮತ್ತು ಅಳಿಯ ಪಟದಯ್ಯ ಮೊಮ್ಮಕ್ಕಳಾದ ಸುಶಾಂತ ಹಾಗೂ ಅಭಿಷೇಕ ಅವರ ಜೊತೆ ಕಾಲ ಕಳೆಯುತ್ತಿದ್ದಾರೆ. ಬೆಳಗಿನ ಜಾವ ಮೂಡಿ ಬರುವ ಸೂರ್ಯನ ಕಿರಣಗಳು ಪ್ರವೇಶಿಸುವ ವಿಶಾಲವಾದ ಮನೆ, ಸುತ್ತಮುತ್ತ ಹೊಲ ಗದ್ದೆ ತುಂಬಿ ತುಳುಕುವ ಹಸಿರು, ಮನೆಯಂಗಳದಿ ಅರಳಿರುವ ಬಣ್ಣ-ಬಣ್ಣದ ಹೂವುಗಳು, ಹಿತಕರವಾದ ತಂಗಾಳಿ, ಇಳಿವಯಸ್ಸಿನಲ್ಲಿ ಸ್ವಾಭಾವಿಕವಾಗಿ ಬಯಸುವ ನಿಶಬ್ಧತೆಯ ವಾತಾವರಣ, ಮನೆಯಲ್ಲಿ ಟಿ.ವಿ., ಫ್ಯಾನ, ಮಂಚ, ಹಿತಕರವಾದ ಊಟ, ವ್ಯವಸ್ಥಿತವಾದ ಬದುಕಲ್ಲಿ ಪ್ರಕಾಶರನ್ನು ಕಂಡಾಗ "ಕಲಾವಿದನಿಗೆ ಇನ್ನೇನು ಬೇಕು, ಅತ್ಯಂತ ತೃಪ್ತಿದಾಯಕ ಬದುಕು ನಿಮ್ಮದು" ಅಂದೆ. ಪ್ರಕಾಶರ ಮುಖದಲ್ಲಿ ಯಾವ ಸಂತೋಷದ ಛಾಯೆಯೂ ಸುಳಿಯಲಿಲ್ಲ. "ನಾಟಕ ಕಂಪನಿಯ ಸದಾ ಸೌಂಡು, ಕಣ್ಣು ಕುಕ್ಕಿಸುವ ಲೈಟುಗಳು, ಬೋರ್ಡಿಂಗಿನ ಅನ್ನ-ಸಾರು, ಅದಕ್ಕೆ ನಂಜಿಕೊಳ್ಳಲು ಹೋಟಲ್ ತಿರುಗಾಡಿ ತರುವ ಬಜಿ-ಮಸರು, ನಾಟಕ ಥೇಟರ ಹಿಂದೆ ಇರುವ ೪/೬ ರ ಸಣ್ಣ ಟೆಂಟಲ್ಲಿ ಅಲ್ಲಲ್ಲಿ ಕಿಂಡಿಯಿಂದ ಹರಿದು ಬರುವ ಬೆಳಕಿಗೆ ಅಡ್ಡವಾಗಿ ಬಿಟ್ಟ ಪರದೆಗಳು, ಬೇಸಿಗೆ ಕಾಲದಲ್ಲಿ ಉರಿ ಬಿಸಿಲಿನ ತಾಪ, ಮಳೆಗಾಲದಲ್ಲಿ ಟೆಂಟಲ್ಲಿ ನೀರು ಬರುತ್ತದೇನೋ ಎನ್ನುವ ಆತಂಕ, ಛಳಿಗಾಲದ ಛಳಿಯಲ್ಲಿ ಮಣ್ಣಿನ ನೆಲದ ಮೇಲೆಯೇ ಒಂದಿತ್ತು ಒಂದಿಲ್ಲ ಎನ್ನುವ ಹಾಸಿಗೆಯಲ್ಲಿ ಮುದರಿಕೊಂಡು ಮಲಗುವ, ಆ ಎಡರುತೊಡರು ಜೀವನಕ್ಕಿಂತ ಈ ಹಿತಕರವಾದ ಹಳ್ಳಿಯ ಜೀವನ ಸುಖವಲ್ಲವೇ" ಎಂದು ಒತ್ತಿ ಕೇಳಿದಾಗ ಪ್ರಕಾಶರು ಮುಗುಳ್ನಗುತ್ತ,

"ಹಳ್ಳೀಯಾದರೇನು ಶಿವ।
ದಿಲ್ಲಿಯಾದರೇನು ಶಿವ।
ರಂಗಭೂಮಿಯೇ ಸ್ವರ್ಗ ಶಿವ।
ಕಲೆಯೇ ನನ್ನುಸಿರು ಶಿವ।"

ಎಂದು ಹಾಡುತ್ತಲೇ ಉತ್ತರಿಸಿದ ನುಡಿ 'ಕಲಾವಿದನಿಗೆ ಸಿಗುವ ಸುಖ ರಂಗಭೂಮಿಯಲ್ಲಿ ಮಾತ್ರ' ಎಂಬುದನ್ನು ಸ್ಪಷ್ಟಪಡಿಸಿತ್ತು.

# ಅನುಬಂಧಗಳು

## ಪ್ರಕಾಶ ಕಡಪಟ್ಟಿ ಅವರ ಜೀವನದ ಪ್ರಮುಖ ಘಟನೆಗಳು

| | |
|---|---|
| ಜನನ | ೧೯೪೮ |
| ಶಾಲೆಯ ಪ್ರವೇಶ | ೧೯೫೪ |
| ಸಂಗೀತ ಪ್ರವೇಶ | ೧೯೬೧ |
| ರಂಗ ಪ್ರವೇಶ | ೧೯೬೩ |
| ಕಂಪನಿ ಪ್ರಾರಂಭ ರಬಕವಿಯಲ್ಲಿ | ೧೯೬೭ |
| ಪ್ರಥಮ ನಾಟಕ ರಚನೆ | ೧೯೬೮ |
| ಮದುವೆ | ೧೯೭೧ |
| ಬ್ರ್ಯಾಂಚ ಕಂಪನಿ ಪ್ರಾರಂಭಿಸಿದ್ದು | ೧೯೭೮ |
| ಮಗಳು ವೀಣಾ ಜನಿಸಿದ್ದು | ೧೯೮೨ |
| ಬ್ರ್ಯಾಂಚ ಕಂಪನಿ ಬಂದಾಗಿದ್ದು | ೧೯೮೪ |
| ಚನ್ನಪ್ಪ ಚನ್ನಗೌಡ ನಾಟಕ ಹುಬ್ಬಳ್ಳಿಯಲ್ಲಿ ದಾಖಲೆ ನಿರ್ಮಿಸಿದ್ದು | ೧೯೮೫ |
| ಕಂಪನಿ ಬಂದಾಗಿದ್ದು ಅಂಕಲಗಿಯಲ್ಲಿ | ೧೯೯೦ |
| ಪತ್ನಿ ಸುನಂದಾ ಶಿವಾಧೀನ | ೧೯೯೯ |
| ತಂದೆ ಶಂಕ್ರಯ್ಯ ಶಿವಾಧೀನ | ೧೯೯೯ |
| ಮಗಳ ಮದುವೆ | ೨೦೦೧ |
| ದಿಲೀಪ ಸಹೋದರ ಶಿವಾಧೀನ | ೨೦೧೦ |
| ತಾಯಿ ರಾಚವ್ವ ಶಿವಾಧೀನ | ೨೦೧೧ |
| ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ | ೨೦೧೧ |

## ಕಡಪಟ್ಟಿ ಅವರ ನಾಟಕಗಳು

೧) ಭಲೇ ಮಗಳೆ (ಪ್ರಕಟಿತ)
೨) ಚಿನ್ನದ ಗೊಂಬೆ (ಪ್ರಕಟಿತ)
೩) ಮನೆಗೆ ತಕ್ಕ ಮಗ (ಪ್ರಕಟಿತ)
೪) ಬಂಗಾರದ ಮನುಷ್ಯ (ಪ್ರಕಟಿತ)

೫) ಸತಿ ಸಂಸಾರದ ಜ್ಯೋತಿ (ಪ್ರಕಟಿತ)
೬) ಛಲಬಿಡದ ಚಾಮುಂಡಿ (ಅಪ್ರಕಟಿತ)
೭) ಭೂಮಿ ತೂಕದ ಹೆಣ್ಣು (ಅಪ್ರಕಟಿತ)
೮) ತವರು ಬಿಟ್ಟ ತಂಗಿ (ಅಪ್ರಕಟಿತ)
೯) ಮುತ್ತೈದೆಗೆ ಕುತ್ತು ಐದು (ಅಪ್ರಕಟಿತ)
೧೦) ಆಗುದ ಅಕ್ಕೈತಿ ಹೋಗುದ ಹೊಕ್ಕೈತಿ (ಅಪ್ರಕಟಿತ)
೧೧) ಗರತಿ ಗೆದ್ದಳು ಸವತಿ ಸೋತಳು (ಅಪ್ರಕಟಿತ)
೧೨) ಪಣತೊಟ್ಟ ಪತಿವ್ರತೆ (ಅಪ್ರಕಟಿತ)
೧೩) ಜಿದ್ದಿಗೆ ಬಿದ್ದ ಜಿಗದ ಹೋದ (ಅಪ್ರಕಟಿತ)
೧೪) ಶ್ರೀ ಶಿರಡಿ ಸಾಯಿ ಬಾಬಾ (ಅಪ್ರಕಟಿತ)
೧೫) ದೋಸ್ತಿ ಆಸ್ತಿಗಿಂತ ಜಾಸ್ತಿ (ಅಪ್ರಕಟಿತ)
೧೬) ಸೌಭಾಗ್ಯ ಪಡೆದ ಸುಪುತ್ರಿ (ಅಪ್ರಕಟಿತ)
೧೭) ದೇವರ ಮಗ (ಅಪ್ರಕಟಿತ)
೧೮) ಕರ್ತವ್ಯ ಕೈ ಹಿಡಿಯಿತು (ಅಪ್ರಕಟಿತ)

## ಸೇವೆ ಸಲ್ಲಿಸಿದ ಇತರ ಸಂಸ್ಥೆಗಳು

೧) ಶ್ರೀ ಕುಮಾರ ವಿಜಯ ನಾಟ್ಯ ಸಂಘ ಚಿತ್ತರಗಿ
೨) ಶ್ರೀ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ
೩) ಶ್ರೀ ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ
೪) ಶ್ರೀ ರವಿ ನಾಟಕ ಕಲಾ ಸಂಘ ಲಕ್ಷ್ಮೇಶ್ವರ
೫) ಶ್ರೀ ಕೆ.ಬಿ.ಆರ್. ಡ್ರಾಮಾ ಕಂಪನಿ ಚಿಂದೋಡಿ
೬) ಶ್ರೀ ರೇಣುಕಾಚಾರ್ಯ ನಾಟ್ಯ ಸಂಘ ಮೈಂದರ್ಗಿ
೭) ಶ್ರೀ ಕರ್ನಾಟಕ ಕಲಾವೈಭವ ಸಂಘ ಬೆಂಗಳೂರು
೮) ಶ್ರೀ ಕುಮಾರೇಶ್ವರ ನಾಟ್ಯ ಸಂಘ ಹಾನಗಲ್ಲ
೯) ಶ್ರೀ ಘನಮಟೇಶ್ವರ ನಾಟ್ಯ ಸಂಘ ಕುಂಟೋಜಿ
೧೦) ಶ್ರೀ ಹೊಳೆ ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ
೧೧) ಶ್ರೀ ಖಾಸ್ಗತೇಶ್ವರ ನಾಟ್ಯ ಸಂಘ ತಾಳಿಕೋಟಿ
೧೨) ಶ್ರೀ ತೋಂಟದಾರ್ಯ ನಾಟ್ಯ ಸಂಘ ಮಂಡಲಗೇರಿ
೧೩) ಶ್ರೀ ಸ್ವಾಮಿ ಸಮರ್ಥ ಕಲಾ ಸಂಘ ಅಕ್ಕಲಕೋಟ

## ಅಭಿನಯಿಸಿದ ಪ್ರಮುಖ ಪಾತ್ರಗಳು

| ನಾಟಕಗಳು | ಪಾತ್ರಗಳು |
|---|---|
| ಮದನ ಮೋಹನ | ಬಬನ್ (ಮೋಹನ) |
| ಸಂಗಮ | ರಾಜೇಶ, ಫಕೀರ |
| ಬೆಂಗಳೂರು ಬಾಬಾ | ಪ್ರಕಾಶ |
| ಭಲೆ ಮಗಳೆ | ಪ್ರವೀಣ |
| ಚಿನ್ನದ ಗೊಂಬೆ | ಸೋಮಶೇಖರ |
| ಮನೆಗೆ ತಕ್ಕ ಮಗ | ರಾಮ |
| ಬಂಗಾರ ಮನುಷ್ಯ | ಆನಂದ |
| ಛಲ ಬಿಡದ ಚಾಮುಂಡಿ | ಅನ್ವರ ಚಾಚ್ಯಾ |
| ಭೂಮಿ ತೂಕದ ಹೆಣ್ಣು | ಜ್ಯೋತಿಪ್ರಕಾಶ |
| ತವರು ಬಿಟ್ಟ ತಂಗಿ | ಅಡ್ವೋಕೇಟ ಅಮರೇಶ |
| ಮುತ್ತೈದೆಗೆ ಕುತ್ತು ಐದು | ಡಾಕ್ಟರ ಮನೋಹರ |
| ಚನ್ನಪ್ಪ ಚನ್ನಗೌಡ | ಚನ್ನಪ್ಪ ಚನ್ನಗೌಡ, ಕುಲದೀಪ |
| ಬಸ್ ಕಂಡಕ್ಟರ | ಜಗದೀಶ |
| ರತ್ನ ಮಾಂಗಲ್ಯ | ರಘುವೀರ |
| ಅಣ್ಣ ತಮ್ಮ | ರವೀಂದ್ರ |
| ದೋಸ್ತಿ ಆಸ್ತಿಗಿಂತ ಜಾಸ್ತಿ | ಸಾತಲಿಂಗಪ್ಪ |

## ಕಡಪಟ್ಟಿ ಅವರ ಕಂಪನಿಯಲ್ಲಿ ಸೇವೆಗೈದ ಕಲಾವಿದರು

೧) ಕೆ.ಆರ್.ಮಹಲಿಂಗಪ್ಪ
೨) ಗಂಗಪ್ಪ ಬಾಣಕರ
೩) ದಾನಪ್ಪ ಬಾಣಕರ
೪) ಮಹಾದೇವ ಬೀಳಗಿ
೫) ಮಹಲಿಂಗ ಕೋಲಾರ
೬) ವಿರುಪಾಕ್ಷಪ್ಪ ಕತ್ತೆವಾಡಿ
೭) ದುಂಡಪ್ಪ ಚಿಂಚಕಂಡಿ
೮) ಈಶ್ವರಪ್ಪ ಹನಗಂಡಿ
೯) ಬಿ.ಸುಂದರೇಶ
೧೦) ಶಿವಾಜಿ ಯಂಕಂಚಿ
೧೧) ಯಲಪ್ಪ ಶಿಗ್ಗಾಂವ
೧೫) ಮೆಹಬೂಬಿ ತಾಳಿಕೋಟ
೧೬) ಸುಶಿಲಮ್ಮ
೧೭) ಎಚ್.ಬಿ.ಸರೋಜಮ್ಮ
೧೮) ಜಯಶ್ರೀ ಬೆಂಗಳೂರ
೧೯) ಪುಷ್ಪಾ ಕರಜಗಿ
೨೦) ಸಾವಿತ್ರಮ್ಮ
೨೧) ವಿಶಾಲ ರಾಮದುರ್ಗ
೨೨) ಕಸ್ತೂರಿ ಕುಲ್ಕರ್ಣಿ
೨೩) ಪದ್ಮಾ ರಾಯಚೂರ
೨೪) ಶಾರದಾ ಶಿಗ್ಗಾಂವ
೨೫) ಉಮಾ ಹಿರೇಮಠ

೧೨) ಸದಾಶಿವ ರಾಣೆಬೆನ್ನೂರ
೧೩) ನೀಲಕಂಠಯ್ಯ
೧೪) ಮುಟ್ಟಿ ಶಂಕ್ರಪ್ಪ
೨೬) ಮಂಜುಳಾ ಹಿರೇಮಠ
೨೭) ವೆಂಕಟೇಶ ಹೆಗಡೆ
೨೮) ಕೃಷ್ಣಾಜಿ ಮಂಗಳೂರು

## ಚಲನಚಿತ್ರ ಕಲಾವಿದರು

೧) ವಜ್ರಮುನಿ
೨) ಸುಧೀರ
೩) ಶ್ರೀನಾಥ
೪) ತೂಗದೀಪ ಶ್ರೀನಿವಾಸ
೫) ಶಕ್ತಿ ಪ್ರಸಾದ
೬) ಮಾನು
೭) ಧೀರೇಂದ್ರ ಗೋಪಾಲ
೮) ಅಶ್ವಥ್
೯) ಶ್ರೀಲಲಿತ
೧೦) ಬಿ.ವ್ಹಿ.ರಾಧಾ

## ಸಂಗೀತಗಾರರು

ರಾಮಣ್ಣ ಕೋಲಾರ(ಚಿಂತೆಪ್ಪ) ಹುನ್ನೂರ – ಹಾರ್ಮೋನಿಯಂ ಮಾಸ್ತರ
ರೇವಣಯ್ಯ ಪಾಲಭಾವಿಮಠ – ತಬಲಾ ವಾದಕರು
ವೀರಣ್ಣ ಕಟ್ಟಾಣಿ – ತಬಲಾ ವಾದಕರು

## ಕಂಪನಿಯ ಪ್ರಮುಖ ಕ್ಯಾಂಪ್

| | | | |
|---|---|---|---|
| ರಬಕವಿ | ಬೆಳಗಾಂವ | ಗುಳೇದಗುಡ್ಡ | ನಾರಾಯಣಪುರ |
| ಗೋಕಾಕ | ಗೊಡಚಿ | ಹಿಡಕಲ್ ಡ್ಯಾಮ | ಮುದ್ದೇಬಿಹಾಳ |
| ರಾಮದುರ್ಗ | ಬನಶಂಕರಿ | ಆಲಮೇಲ | ನಂದಿಕೇಶ್ವರ |
| ಮಾನವಿ | ರಾಯಚೂರ | ಲಿಂಗಸೂರ | ಅಮಿನಗಡ |
| ಸಿಂಧನೂರ | ಭದ್ರಾವತಿ | ಶಿರೂರ | ಮುಧೋಳ |
| ನರಗುಂದ | ಕೊಪ್ಪಳ | ಸವಣೂರ | ಹುಕ್ಕೇರಿ |
| ಬಾಗಲಕೋಟ | ಕುಕನೂರ | ಕಲಕೇರಿ ಜಾತ್ರಿ | ಕೆಂಭಾವಿ |
| ಬಿಜಾಪುರ | ಹುಬ್ಬಳ್ಳಿ | ಗಲಗಲಿ | ಅಂಕಲಗಿ |
| ಜಮಖಂಡಿ | ಕಲಾದಗಿ | | |

*

# ಚಿತ್ರಗಳು



ತಾಯಿ ರಾಚವ್ವ ಕಡಪಟ್ಟಿ



ತಂದೆ ವೇದಮೂರ್ತಿ ಶಂಕ್ರಯ್ಯ



ಸುನಂದಾ ಕಡಪಟ್ಟಿ



ಪ್ರಕಾಶ ಕಡಪಟ್ಟಿ



ಪ್ರಕಾಶ - ಬಾಲ್ಯದಲ್ಲಿ



ಪ್ರಕಾಶ - ೨೦೧೫ರಲ್ಲಿ



ನಾಟಕ–ಮದನ ಮೋಹನ
ಪ್ರಕಾಶ ಹಾಗು ಸುನಂದಾ ಕಡಪಟ್ಟಿ



ನಾಟಕ - ಬಹದ್ದೂರ ಮಗ
ಪಾತ್ರ- ಸುರೇಶ



ನಾಟಕ– ಮನೆಗೆ ತಕ್ಕ ಮಗ
ಪಾತ್ರ– ರಾಮ



ನಾಟಕ–ಮದನ ಮೋಹನ
ಪ್ರಕಾಶ ಹಾಗು ಸುನಂದಾ



ಕಡಪಟ್ಟಿ ಕಂಪನಿಯ ಕಲಾಬಳಗ



ಚನ್ನಪ್ಪ ಚನ್ನಗೌಡ ನಾಟಕದ ೫೦೧ನೇ ಪ್ರಯೋಗದ ನಿಮಿತ್ಯ ಪ್ರಕಾಶ ಕಡಪಟ್ಟಿ ಅವರನ್ನು ಆನೆ ಮೇಲೆ ಮೆರವಣಿಗೆ ಮಾಡಿದ್ದು -ಹುಬ್ಬಳ್ಳಿ, ೨೪-೦೪-೧೯೮೫



ಸವದತ್ತಿಯ ಕೆ.ಎಸ್.ಆರ್.ಟಿ.ಸಿ. ವತಿಯಿಂದ ಪ್ರಕಾಶ ಕಡಪಟ್ಟಿಯವರಿಗೆ ಸನ್ಮಾನ



ನಾಟ್ಯೇಶ್ವರ ಕಲಾಬಳಗ ವಿಜಾಪುರ ವತಿಯಿಂದ ಸನ್ಮಾನ (೧೯೮೯)



ಮಾಜಿ ಸಚಿವೆ ಶ್ರೀಮತಿ ಲೀಲಾವತಿ ಆರ್. ಪ್ರಸಾದ್ ಅವರೊಂದಿಗೆ (೧೯೮೮)



ಚಿತ್ರ ನಟ ವಜ್ರಮುನಿ ಅವರೊಂದಿಗೆ (೧೯೮೪)

ಬಿಜಾಪುರದಲ್ಲಿ ವೀರ ಭಗತಸಿಂಗ ಸಹೋದರ ಜೊತೆ





ಡಾ. ರಾಜಕುಮಾರ, ಅಂಬರೀಶ ಜೊತೆ ಕಡಪಟ್ಟಿ ಕುಟುಂಬ

ಚಲನಚಿತ್ರ ನಟಿ ಪೂಜಾ ಗಾಂಧಿ ಜೊತೆ ಪ್ರಕಾಶ ಕಡಪಟ್ಟಿ, ಪುತ್ರಿ ವೀಣಾ,
ಮೊಮ್ಮಕ್ಕಳಾದ ಸುಶಾಂತ ಹಾಗೂ ಅಭಿಷೇಕ





ಪುತ್ರಿ ವೀಣಾಳ ಹುಟ್ಟು ಹಬ್ಬದ ಆಚರಣೆ ತಂದೆ ಶಂಕ್ರಯ್ಯ, ಪ್ರಕಾಶ, ಸುನಂದಾ






ಪುತ್ರಿ ವೀಣಾ ಹಿರೇಮಠ ವಿವಿಧ ಪಾತ್ರಗಳಲ್ಲಿ




ಪ್ರಕಾಶ ಕಡಪಟ್ಟಿ ಹಾಗು ಕುಟುಂಬ, ಸುನಂದಾ ಅವರ "ಸೀಮಂತಕಾರಣ" ಸಮಯದಲ್ಲಿ



ನಾಟಕ ಮದನ ಮೋಹನ - ಶಂಕ್ರಯ್ಯ, ಸುನಂದಾ, ಪ್ರಕಾಶ



ಮಗಳು ವೀಣಾ, ಅಳಿಯ ಪಟದಯ್ಯ ಮತ್ತು ಮೊಮ್ಮಕ್ಕಳೊಡನೆ



ಪ್ರಕಾಶರ ಸಹೋದರ ಅಶೋಕ
ಕಡಪಟ್ಟಿ (ಕಲಾವಿದ)